ಫಿಕ್ಹ್ ಪಾಠಗಳು

ಅನುವಾದಕರು

ಅರಫಾ ಮಂಚಿ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

'ಫಿಕ್ಹ್ ಪಾಠಗಳು' ಈ ಕೃತಿಯು ಕೇರಳದ ಮಜ್ಲಿಸುತ್ತ‌ಅ್ಲೀಮುಲ್ ಇಸ್ಲಾಮಿ ಸಿದ್ಧಪಡಿಸಿದ ಪಠ್ಯಪದ್ಧತಿಯ ಐದನೇ ತರಗತಿಯ ಪಾಠ ಪುಸ್ತಕದ ಕನ್ನಡಾನುವಾದವಾಗಿದೆ. ಇದರಲ್ಲಿ ಎರಡು ಭಾಗಗಳಿದ್ದು ಮೊದಲ ಭಾಗದಲ್ಲಿ ನಮಾಝ್‌ಗೆ ಸಂಬಂಧಿಸಿದ ನಿಯಮೋಪನಿಯಮಗಳನ್ನು ತಿಳಿಸಲಾಗಿದೆ. ಅದಾನ್, ಇಕಾಮತ್, ನಮಾಝ್‌ನ ಸ್ವರೂಪ, ಅದರ ಶರತ್ತುಗಳು ಮತ್ತು ಫರ್ಝ್‌ಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಅದೇ ರೀತಿ ನಮಾಝ್ ಮಾಡುವ ವಿಧಾನವನ್ನೂ ಕಲಿಸಲಾಗಿದೆ. ನಮಾಝ್‌ನ ಶರತ್ತುಗಳಲ್ಲಿ ಶುದ್ಧೀಕರಣಕ್ಕೆ ಸಂಬಂಧಿಸಿ ವಿಷಯಗಳನ್ನೂ ವಿವರಿಸಲಾಗಿದೆ. ವುಝೂ ಮತ್ತು ಸ್ನಾನ ಅದರ ಪ್ರಧಾನ ಅಂಶಗಳಾಗಿವೆ. ಅದೇ ರೀತಿ ಜುಮಾ ನಮಾಝ್, ಜನಾಝಾ ನಮಾಝ್, ಈದ್ ನಮಾಝ್, ಪ್ರಯಾಣಿಕರು ಮತ್ತು ರೋಗಿಗಳ ನಮಾಝ್, ನಮಾಝ್‌ನಲ್ಲಿ ಜಮ್‌ಅ್-ಕಸ್ರ್ ಹಾಗೂ ಕುನೂತ್ ಇತ್ಯಾದಿಗಳ ರೀತಿಗಳನ್ನು ಕಲಿಸಲಾಗಿದೆ.

ಎರಡನೇ ಭಾಗದಲ್ಲಿ ಆಹಾರ ಸೇವನೆಯ ಶಿಷ್ಟಾಚಾರಗಳು, ಮಾಂಸಾಹಾರ ಹಾಗೂ ನಿಷೇಧಿಸಲ್ಪಟ್ಟ ಜೀವಿಗಳು, ವಸ್ತುಗಳಿಗೆ ಸಂಬಂಧಿಸಿದ ವಿಷಯಗಳನ್ನು ಸೇರಿಸಲಾಗಿದೆ. ಮದ್ರಸಾ ಮತ್ತು ಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಇದೊಂದು ಉಪಯುಕ್ತ ಕೃತಿಯಾಗಿದೆ. ಪ್ರತಿಯೊಂದು ಪಾಠದ ಆರಂಭದಲ್ಲಿ ವಿಷಯಕ್ಕೆ ಸಂಬಂಧಿಸಿದ ಘಟನೆಗಳನ್ನು ಹದೀಸ್‌ನ ಆಧಾರದಲ್ಲಿ ಸೇರಿಸಲಾಗಿದೆ. ಇದರಿಂದ ವಿಷಯವನ್ನು ಸುಲಭದಲ್ಲಿ ಗ್ರಹಿಸಲು ಸಹಾಯಕವಾಗುತ್ತದೆ. ಒಟ್ಟಿನಲ್ಲಿ ಮದ್ರಸ/ಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆಂಬಂತೆ ಇಸ್ಲಾಮಿನ ಆಚಾರ ಕರ್ಮಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯಿಲ್ಲದ ಜನಸಾಮಾನ್ಯರೂ ಇದನ್ನು ಓದಿ ಕಲಿಯಬಹುದು. ಕನ್ನಡ ಜನತೆಗೆ ಇದೊಂದು ಮಾರ್ಗದರ್ಶಿಯಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಪರ್ರ್ಯ ಸೂಚಿ

ಪಾಠ: 1

ನಮಾಝ್

الصلاة

ಒಂದು ಚಳಿಗಾಲದ ಸಾಯಂಕಾಲ. ಪ್ರವಾದಿವರ್ಯರು(ಸ) ತಮ್ಮ ಸಂಗಾತಿ ಅಬೂದರ್‌ರ(ರ) ಜೊತೆ ಮದೀನಾ ಪಟ್ಟಣದ ಗಡಿ ಭಾಗದಲ್ಲಿ, ಇಕ್ಕೆಡೆಗಳಲ್ಲೂ ಮರಗಿಡಗಳು ತುಂಬಿದ್ದ ಒಂದು ದಾರಿಯಿಂದ ನಡೆಯುತ್ತಿದ್ದಾರೆ. ತಂಗಾಳಿ ಬೀಸುತ್ತಿದ್ದು ಮರಗಳಿಂದ ಎಲೆಗಳು ಉದುರುತ್ತಿದ್ದುವು. ಪ್ರವಾದಿವರ್ಯರು(ಸ) ಒಂದು ಗಿಡದಿಂದ ಗೆಲ್ಲನ್ನು ಎತ್ತಿಕೊಂಡರು. ಅದನ್ನು ಕುಲುಕಿದಾಗ ಅದರ ಎಲ್ಲ ಎಲೆಗಳು ಉದುರಿಬಿದ್ದವು. "ಅಬೂದರ್! ನೋಡಿರಿ" ಪ್ರವಾದಿವರ್ಯರು(ಸ) ತಮ್ಮ ಸಂಗಾತಿಯನ್ನು ಕರೆದು, ಹೇಳಿ- "ನೀವು ನೋಡಿದಿರಾ, ಗಾಳಿ ಬೀಸಿದಾಗ ಮರಗಳಿಂದ ಎಲೆಗಳು ಉದುರುತ್ತವೆ! ಓರ್ವ ದಾಸನು ಅಲ್ಲಾಹನ ಸಂಪ್ರೀತಿ ಬಯಸಿ ನಮಾಝನ್ನು ಮಾಡುವಾಗ ಅವನ ಎಲ್ಲ ಪಾಪಗಳು ಇದರಿಂದ ಎಲೆಗಳು ಉದುರುವಂತೆ ಉದುರಿ ಹೋಗುವುದು."

ನಾವು ನಿತ್ಯವೂ ಮಾಡುವಂತಹ ಐದು ಹೊತ್ತಿನ ನಮಾಝ್‌ನ ಮಹತ್ವವನ್ನು ಮೇಲಿನ ಉದಾಹರಣೆಯಿಂದ ಪ್ರವಾದಿವರ್ಯರು(ಸ) ವಿವರಿಸಿದ್ದರು.

ನಮಾಝ್ ಎಂದರೆ ಏನು?

ಈ ಜಗತ್ತು ಮತ್ತು ಅದರಲ್ಲಿರುವ ಸಕಲ ವಸ್ತುಗಳನ್ನು ಸೃಷ್ಟಿಸಿದ್ದು ಅಲ್ಲಾಹನೆಂದು ನಾವು ಮನವರಿಕೆ ಮಾಡಿಕೊಂಡಿರುವೆವು ಅಲ್ಲವೇ? ನಾವು ಅಲ್ಲಾಹನ ಸೃಷ್ಟಿಗಳು ಮತ್ತು ದಾಸರಾಗಿದ್ದೇವೆ. ನಮ್ಮ ಜೀವನಕ್ಕೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನು ಅಲ್ಲಾಹನು ಒದಗಿಸಿದ್ದಾನೆ. ಅವನು ಅಪರಿಮಿತವಾದ ಅನುಗ್ರಹಗಳನ್ನು ನಮಗೆ ನೀಡಿದ್ದಾನೆ. ಆದುದರಿಂದ ಅಲ್ಲಾಹನ ಅನುಗ್ರಹಗಳಿಗೆ

ಕೃತಜ್ಞತೆ ತೋರಬೇಕಾಗಿದೆ ಮತ್ತು ಅವನ ಆದೇಶಗಳನ್ನು ಅನುಸರಿಸಿ ಬದುಕಬೇಕಾಗಿದೆ.

ಅಲ್ಲಾಹನ ಸಂಪ್ರೀತಿ ದೊರಕಬೇಕೆಂಬ ಉದ್ದೇಶದಿಂದ ಅವನ ಆದೇಶಗಳಂತೆ ನಾವು ಮಾಡುವ ಎಲ್ಲ ಪ್ರವೃತ್ತಿಗಳೂ ಅಲ್ಲಾಹನಿಗಿರುವ ಇಬಾದತ್ (ಆರಾಧನೆ) ಆಗಿದೆ.

ಆರಾಧನೆಗಳಲ್ಲಿ ಅತ್ಯಂತ ಪ್ರಮುಖವಾದುದು ನಮಾಝ್ ಆಗಿದೆ. ನಮಾಝನ್ನು ಅಲ್ಲಾಹನಿಗೆ ಕೃತಜ್ಞರಾಗಲು ಅವನ ಸ್ಮರಣೆಯನ್ನು (ನೆಲೆಗೊಳಿಸಲು) ಜೀವಂತವಿರಿಸಲು ಕಡ್ಡಾಯಗೊಳಿಸಲಾಗಿದೆ. ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ,

وَأَقِمِ الصَّلَوٰةَ لِذِكْرِىٓ ﴿١٤﴾

"ನನ್ನ ಸ್ಮರಣೆಗಾಗಿ ನಮಾಝನ್ನು ಸಂಸ್ಥಾಪಿಸಿರಿ."

ನಮಾಝ್ ಮುಸ್ಲಿಮರು ಮತ್ತು ಮುಸ್ಲಿಮೇತರರಿಗೆ ಇರುವ ಪರಸ್ಪರ ವ್ಯತ್ಯಾಸವನ್ನು ತೋರ್ಪಡಿಸುವ ವಿಷಯ ಆಗಿದ್ದು ಪ್ರಜ್ಞಾಪೂರ್ವಕವಾಗಿ ಅದನ್ನು ತೊರೆಯುವವನು ಸತ್ಯನಿಷೇಧಿಯಾಗಿರುವನೆಂದೂ ಹದೀಸ್‌ಗಳಲ್ಲಿ ವರದಿಯಾಗಿವೆ.

اَلْعَهْدُ الَّذِى بَيْنَنَا وَبَيْنَهُمُ الصَّلَاةُ فَمَنْ تَرَكَهَا فَقَدْ كَفَرَ (أحمد)

ಪುನರುತ್ಥಾನ ದಿವಸ (ಕಿಯಾಮತ್) ಮಾನವರ ಕರ್ಮಗಳ ವಿಚಾರಣೆ ನಡೆಸುವಾಗ ಮೊಟ್ಟ ಮೊದಲು ನಮಾಝ್‌ನ ಕುರಿತು ಪ್ರಶ್ನಿಸಲಾಗುವುದು. ನಿರ್ಲಕ್ಷ್ಯ ವಹಿಸದೆ ನಮಾಝ್ ನೆರವೇರಿಸಿದಾಗ ಮಾತ್ರ ಕಿಯಾಮತ್‌ನ ದಿನ ರಕ್ಷಣೆ ಹೊಂದಬಹುದು. ನಮಾಝ್ ಮಾಡದವರು ಬೇರೆ ಎಂತಹ ಪುಣ್ಯ ಕರ್ಮಗಳನ್ನು ಮಾಡಿದರೂ ಫಲಕಾರಿಯಾಗದು. ಪ್ರವಾದಿವರ್ಯರು(ಸ) ಹೇಳುತ್ತಾರೆ.

أَوَّلُ مَا يُحَاسَبُ بِهِ الْعَبْدُ يَوْمَ الْقِيَامَةِ مِنْ عَمَلِهِ صَلَاتُهُ

"ಕಿಯಾಮತ್ ದಿವಸದಲ್ಲಿ ಮೊತ್ತಮೊದಲು ವಿಚಾರಿಸಲ್ಪಡುವುದು ನಮಾಝ್‌ನ ಕುರಿತಾಗಿರುವುದು."

ಮಕ್ಕಳಿಗೆ ಏಳು ವರ್ಷ ಪ್ರಾಯವಾದಾಗ ನಮಾಝ್‌ನ ವಿಧಾನ ಕಲಿಸಬೇಕು. ಹತ್ತು ವಯಸ್ಸಾದಾಗ ಕಡ್ಡಾಯವಾಗಿ ನಮಾಝ್ ಮಾಡಿಸಬೇಕು ಎಂದು ಪ್ರವಾದಿವರ್ಯರು(ಸ) ಬೋಧಿಸಿದ್ದಾರೆ.

ನಿಂತು ನಮಾಝ್ ಮಾಡುವುದಕ್ಕೆ ಆಗದವರು ಕುಳಿತು, ಅದೂ ಸಾಧ್ಯವಿಲ್ಲದವರು ಮಲಗಿ ನಮಾಝ್ ಮಾಡಬೇಕು. ಪ್ರಯಾಣಿಕರಿಗೂ ತಪ್ಪದೆ ನಮಾಝ್ ಮಾಡುವ ವಿವಿಧ ರೀತಿಗಳನ್ನು ಪ್ರವಾದಿವರ್ಯರು(ಸ) ಕಲಿಸಿದ್ದಾರೆ. ಅಂದರೆ ಜೀವನದ ಯಾವುದೇ ಸ್ಥಿತಿಯಲ್ಲಿಯೂ ತಪ್ಪದೆ ನಮಾಝ್ ಮಾಡಬೇಕೆಂಬುದೇ ಇದರ ಅರ್ಥವಾಗಿದೆ.

ನಮಾಝ್ ಮಾಡುವಾಗ ಅಲ್ಲಾಹನ ಕುರಿತು ಚಿಂತೆ ಮತ್ತು ಅವನ ಎದುರು ನಿಂತಿದ್ದೇವೆ ಎಂಬ ಪ್ರಜ್ಞೆ ಇರಬೇಕಾಗಿದೆ. ಅಲ್ಲಾಹನಲ್ಲಿ ಹೃತ್ಪೂರ್ವಕ ಪ್ರೀತಿ ಭಯಭಕ್ತಿಯಿರಬೇಕಾಗಿದೆ. ಇದನ್ನು خشوع (ಖುಷೂಅ್) ಎಂದು ಕರೆಯುತ್ತಾರೆ. ಈ ರೀತಿಯಲ್ಲಿ ನಮಾಝ್ ಮಾಡುವಾಗ ನಮ್ಮ ನಮಾಝ್ ಅತ್ಯಂತ ಶ್ರೇಷ್ಠವಾಗುತ್ತದೆ. ಸರಿಯಾದ ರೀತಿಯಲ್ಲಿ ನಮಾಝ್ ಮಾಡುವವರು ಉತ್ತಮ ಸ್ವಭಾವದವರೂ ಸದಾಚಾರಿಗಳೂ ಆಗುವರು. ನಮಾಝ್ ಮಾಡುವವರಲ್ಲಿ ಕೆಟ್ಟ ವಿಚಾರಗಳು, ಪ್ರವೃತ್ತಿಗಳು ಇರಬಾರದು. ನಮಾಝ್ ಮಾನವರನ್ನು ಕೆಟ್ಟ ಕಾರ್ಯಗಳಿಂದ ತಡೆದು ನಿಲ್ಲಿಸುವುದು, ಮಾತ್ರವಲ್ಲ ಅಲ್ಲಾಹನ ಕುರಿತು ನೆನಪು ಉಂಟು ಮಾಡುತ್ತದೆ.

ಅಲ್ಲಾಹನು ಹೇಳುತ್ತಾನೆ,

إِنَّ الصَّلَوٰةَ تَنْهَىٰ عَنِ الْفَحْشَآءِ وَالْمُنكَرِ

"ನಿಶ್ಚಯವಾಗಿಯೂ ನಮಾಝ್ ಅಶ್ಲೀಲ ಹಾಗೂ ದುಷ್ಕೃತ್ಯಗಳಿಂದ ತಡೆಯುತ್ತದೆ."

ನಾವು ಏನು ಕಲಿತೆವು?

1) ಆರಾಧನೆಗಳಲ್ಲಿ ನಮಾಝ್ ಅತ್ಯಂತ ಪ್ರಮುಖವಾಗಿದೆ.

2) ಕಿಯಾಮತ್ ದಿವಸ ನಮಾಝ್‌ನ ಕುರಿತು ಮೊದಲು ವಿಚಾರಣೆ ನಡೆಸಲಾಗುವುದು.

3) ನಮಾಝ್ ಮನುಷ್ಯರನ್ನು ಕೆಟ್ಟ ಕಾರ್ಯಗಳಿಂದ ತಡೆಯುತ್ತದೆ.

A. ಅಭ್ಯಾಸಗಳು:

ಭರ್ತಿ ಮಾಡಿರಿ

1) .... ಮುಸ್ಲಿಮರು ಮತ್ತು ಮುಸ್ಲಿಮೇತರರಿಗೆ ಇರುವ ವ್ಯತ್ಯಾಸವನ್ನು ತೋರ್ಪಡಿಸುವ ವಿಷಯವಾಗಿದೆ.

2) .... ಬೇರೆ ಎಂತಹ ಪುಣ್ಯಕರ್ಮಗಳನ್ನು ಮಾಡಿದರೂ ಫಲಕಾರಿಯಾಗದು.

3) ಮಕ್ಕಳಿಗೆ ...., ವರ್ಷ ಪ್ರಾಯವಾದಾಗ ನಮಾಝ್‌ನ ವಿಧಾನವನ್ನು ಕಲಿಸಬೇಕು.

4) .... ಉತ್ತಮ ಸ್ವಭಾವದವರು, ಸದಾಚಾರಿಗಳು ಆಗಿರುವರು.

B. ಉತ್ತರ ಬರೆಯಿರಿ:

1) ಇಬಾದತ್ (ಆರಾಧನೆ) ಎಂದರೆ ಏನು?

2) ನಮ್ಮ ನಮಾಝ್ ಶ್ರೇಷ್ಠವಾಗಬೇಕಾದರೆ ಯಾವೆಲ್ಲ ವಿಷಯಗಳು ಅವಶ್ಯಕವಾಗಿದೆ?

3) ನಮಾಝ್‌ನಿಂದ ಇರುವ ಪ್ರಯೋಜನಗಳೇನು?

C. ಉತ್ತರ ಬರೆಯಿರಿ:

1) ನಮಾಝನ್ನು ಯಾಕೆ ಕಡ್ಡಾಯಗೊಳಿಸಲಾಗಿದೆ.

❊❊❊

ಪಾಠ: 2

ಅದಾನ್ ಮತ್ತು ಇಕಾಮತ್

اَلْأَذَانُ وَالْإِقَامَةُ

ನೀವು ಮಸೀದಿಯಲ್ಲಿ ಬಾಂಗ್(ಅದಾನ್ ಕರೆ) ಕೊಡುವುದನ್ನು ಕೇಳುತ್ತೀರಲ್ಲವೇ? ನಮಾಝ್‌ನ ಸಮಯವಾಗಿದೆ ಎಂಬುದನ್ನು ತಿಳಿಸುವುದೇ ಅದಾನ್‌ನ ಉದ್ದೇಶವಾಗಿದೆ.

ಮದೀನಾದ ಪ್ರಾರಂಭ ಕಾಲಘಟ್ಟದಲ್ಲಿ ಅದಾನ್ ಕೊಡುತ್ತಿರಲಿಲ್ಲ. ಜನರು ಒಟ್ಟುಗೂಡಿ ನಮಾಝ್‌ನ ವೇಳೆಯನ್ನು ಕಾಯುತ್ತಿರುವುದು ರೂಢಿಯಾಗಿತ್ತು. ಒಮ್ಮೆ ಪ್ರವಾದಿವರ್ಯರು(ಸ) ಮತ್ತು ಸಂಗಾತಿಗಳು ನಮಾಝ್‌ನ ವೇಳೆಯನ್ನು ಜನರಿಗೆ ತಿಳಿಸುವುದರ ಕುರಿತು ಸಮಾಲೋಚಿಸಿದರು. ಕೆಲವರು ಕ್ರೈಸ್ತರು ಮಾಡುತ್ತಿರುವಂತೆ ಗಂಟೆ ಬಾರಿಸೋಣ ಎಂದು ಹೇಳಿದರು. ಇನ್ನು ಕೆಲವರು ಯಹೂದಿಯರಂತೆ ಕಹಳೆ ಊದೋಣ ಎಂದರು. ಈ ಚರ್ಚೆಯಲ್ಲಿ ಭಾಗಿಯಾಗಿದ್ದ ಅಬ್ದುಲ್ಲಾ ಬಿನ್ ಝೈದ್‌ರಿಗೆ ಅಂದು ರಾತ್ರಿ ಕನಸು ಬಿತ್ತು. ಅದು ಹೀಗಿತ್ತು, ಒಬ್ಬಾತ ಒಂದು ದೊಡ್ಡ ಗಂಟೆ ಹಿಡಿದು ಹೋಗುತ್ತಿದ್ದನು. ಅಬ್ದುಲ್ಲಾ ಆತನೊಂದಿಗೆ, ಈ ಗಂಟೆಯನ್ನು ನನಗೆ ಮಾರುವೆಯಾ ಎಂದು ಕೇಳಿದರು.

ಆತ : ನಿಮಗೆ ಇದರ ಅಗತ್ಯವೇನಿದೆ?

ಅಬ್ದುಲ್ಲ: ನಮಗೆ ನಮಾಝ್‌ನ ವೇಳೆಯನ್ನು ತಿಳಿಸುವುದಕ್ಕೆ.

ಆತ : ಅದಕ್ಕೆ ಇದಕ್ಕಿಂತಲೂ ಉತ್ತಮವಾದ ಒಂದು ಮಾರ್ಗ ನಾನು ತೋರಿಸಿಕೊಡುವೆನು.

ಅಬ್ದುಲ್ಲ: ಆಯಿತು, ತುಂಬಾ ಉಪಕಾರ.

ಅವರು ಕೆಳಗೆ ಬರೆದಿರುವಂತೆ ಓದಿ ಹೇಳಿದರು.

اَللّٰهُ اَكْبَرْ اَللّٰهُ اَكْبَرْ   اَللّٰهُ اَكْبَرْ اَللّٰهُ اَكْبَرْ

اَشْهَدُاَنْ لَّا اِلٰهَ اِلَّااللّٰهُ   اَشْهَدُاَنْ لَّا اِلٰهَ اِلَّااللّٰهُ

اَشْهَدُ اَنَّ مُحَمَّدًا رَّسُوْلُ اللّٰهِ   اَشْهَدُ اَنَّ مُحَمَّدًا رَّسُوْلُ اللّٰهِ

حَيَّ عَلَى الصَّلٰوةِ   حَيَّ عَلَى الصَّلٰوةِ

حَيَّ عَلَى الْفَلَاحِ   حَيَّ عَلَى الْفَلَاحِ

اَللّٰهُ اَكْبَرْ، اَللّٰهُ اَكْبَرْ   لَآاِلٰهَ اِلَّا اللّٰهُ

ಹೊತ್ತು ಬೆಳಗಾಗುವುದಕ್ಕಿಂತ ಮುಂಚೆಯೇ ಅಬ್ದುಲ್ಲ ಪ್ರವಾದಿವರ್ಯರ(ಸ) ಬಳಿಗೆ ತಲುಪಿ ವಿಷಯ ತಿಳಿಸಿದರು.

"ಇದು ನಿಜವಾದ ಕನಸು. ನಿರ್ಲಕ್ಷಿಸುವಂತಹದ್ದಲ್ಲ" ಎಂದು ಪ್ರವಾದಿವರ್ಯರು(ಸ) ಹೇಳಿದರು. "ನೀವಿದನ್ನು ಬಿಲಾಲ್‌ರಿಗೆ(ರ) ಹೇಳಿಕೊಡಿರಿ. ಬಿಲಾಲ್ ಅದನ್ನು ಗಟ್ಟಿ ಧ್ವನಿಯಿಂದ ಹೇಳಲಿ. ನಿಮಗಿಂತಲೂ ದೊಡ್ಡದಾದ ಶಬ್ದ ಬಿಲಾಲ್‌ರದ್ದಾಗಿದೆಯಲ್ಲವೇ?" ಈ ರೀತಿ ಬಾಂಗ್ (ಅದಾನ್) ಹುಟ್ಟಿಕೊಂಡಿತು.

ಮುಸ್ಲಿಮರು ವಾಸಿಸುವ ಪ್ರದೇಶಗಳಲ್ಲಿ ಸಂಘಟಿತ ನಮಾಝ್ ಮತ್ತು ಅದಾನನ್ನು ಸಂಸ್ಥಾಪಿಸುವುದು ಕಡ್ಡಾಯವಾಗಿದೆ. ಕಡ್ಡಾಯ ನಮಾಝನ್ನು ಒಂಟಿಯಾಗಿ ನೆರವೇರಿಸುವುದಿದ್ದರೂ ಬಾಂಗ್, ಇಕಾಮತ್ ಸುನ್ನತ್(ಐಚ್ಛಿಕ) ಆಗಿದೆ. ಆದರೆ ಸ್ತ್ರೀಯರಿಗೆ ಮಾತ್ರ ನಮಾಝ್ ಮಾಡುವಾಗ ಇಕಾಮತ್ ಸುನ್ನತ್(ಐಚ್ಛಿಕ) ಆಗಿದೆ.

ಅದಾನಿನ ಕರೆ ಕೊಡುವುದು ಶ್ರೇಷ್ಠವಾದ ಪುಣ್ಯ ಕಾರ್ಯವಾಗಿದೆ. ಅದಾನ್ ಕರೆ ಕೊಡುವಾತನು (مؤذن) ಕಿಯಾಮತ್ (ಪುನರುತ್ಥಾನದ) ದಿನದಂದು ಉನ್ನತ ಸ್ಥಾನದಲ್ಲಿರುವನೆಂದು ಪ್ರವಾದಿವರ್ಯರು(ಸ) ಕಲಿಸಿದ್ದಾರೆ. ಪ್ರವಾದಿವರ್ಯರು(ಸ) ತಮ್ಮ ಮಸೀದಿಯಲ್ಲಿ ನೇಮಿಸಿದ ಮುಅದ್ದಿನ್‌ಗಳಲ್ಲಿ مؤذّن ಒಬ್ಬರು ಅಂಧನಾದ ಅಬ್ದುಲ್ಲಾ ಇಬ್ನು ಉಮ್ಮಿ ಮಕ್ತೂಮ್ ಎಂಬ ಸಹಾಬಿಯಾಗಿದ್ದರು.

ಪ್ರವಾದಿವರ್ಯರು(ಸ) ಯಾತ್ರೆಗೆ ಹೋದ ಸಂದರ್ಭದಲ್ಲಿ ಮದೀನಾದಲ್ಲಿ ತಮ್ಮ ಪ್ರತಿನಿಧಿಯಾಗಿ ಅಬ್ದುಲ್ಲಾ ಇಬ್ನು ಉಮ್ಮಿ ಮಕ್ತೂಮ್‌ರನ್ನು ನೇಮಿಸಿರುವುದು ಕೂಡಾ ಇತಿಹಾಸದಲ್ಲಿ ದಾಖಲುಗೊಂಡಿದೆ.

ಅದಾನ್ ಕರೆ ಕೊಡುವಾತ ಶುದ್ಧನಾಗಿರಬೇಕು. ಕಿಬ್ಲಾಕ್ಕೆ ಎದುರಾಗಿ ನಿಲ್ಲುವುದು ಮತ್ತು ಎರಡು ಕಿವಿಗಳಲ್ಲಿ ಬೆರಳಿರಿಸುವುದು ಸುನ್ನತ್ ಆಗಿದೆ.

حَيَّ عَلَى الصَّلٰوةِ (ಹಯ್ಯ ಅಲಸ್ಸಲಾಃ)

ಎಂದು ಹೇಳುವಾಗ ಬಲಬದಿಗೂ

حَيَّ عَلَى الْفَلَاحِ (ಹಯ್ಯ ಅಲಲ್ ಫಲಾಹ್)

ಎಂದು ಹೇಳುವಾಗ ಎಡಬದಿಗೂ ತಿರುಗುವುದು ಉತ್ತಮ.

ಬೆಳಗ್ಗಿನ ಅದಾನ್‌ನಲ್ಲಿ حَيَّ عَلَى الْفَلَاحِ ಎಂದು ಹೇಳಿದ ನಂತರ

اَلصَّلٰوةُ خَيْرٌ مِّنَ النَّوْمِ (ಅಸ್ಸಲಾತು ಖೈರುಮ್ಮಿನನ್ನೌಮ್)

ಎಂದು ಹೇಳಬೇಕು.

ಅದಾನ್‌ನ ರೀತಿಯಲ್ಲೇ ಇಕಾಮತ್ ಕೂಡಾ ಇದೆ. ಆದರೆ ತಕ್‌ಬೀರನ್ನು ಎರಡು ಬಾರಿಯೂ ಇತರ ವಚನಗಳನ್ನು ಒಂದೊಂದು ಬಾರಿಯೂ ಹೇಳಿದರೆ ಆಯಿತು. حَيَّ عَلَى الْفَلَاحِ ಎಂದು ಹೇಳಿದ ನಂತರ ಎರಡು ಸಲ

قَدْ قَامَتِ الصَّلٰوةُ (ಕದ್‌ಕಾಮತಿಸ್ಸಲಾಃ)

ಎಂದು ಹೇಳಬೇಕಾಗಿದೆ.

ಬಾಂಗ್ ಕರೆ ಕೊಡುವಾತನು ಏನನ್ನು ಹೇಳುತ್ತಿದ್ದಾನೆಂಬುದರ ಅರ್ಥವನ್ನು ನೋಡಿ ಗ್ರಹಿಸಿರಿ. ಮೊದಲನೆಯದಾಗಿ اَللّٰهُ اَكْبَرُ ಎನ್ನುವುದರ ಮೂಲಕ ಅಲ್ಲಾಹನ ಮಹಾನತೆಯನ್ನು ಬಹಿರಂಗವಾಗಿ ಆತ ಘೋಷಿಸುತ್ತಾನೆ. ಅನಂತರ ಅಂಗೀಕರಿಸಿರುವ ವಿಶ್ವಾಸಾದರ್ಶದ ಘೋಷಣೆ ಮಾಡುತ್ತಾನೆ. ನಾವು ಅಲ್ಲಾಹನ ದಾಸರು ಮತ್ತು ಅವನ ಆದೇಶಗಳನ್ನು ಅನುಸರಿಸುವ ಹೊಣೆಗಾರರೆಂದು ನೆನಪಿಸುತ್ತಾನೆ. ಆ ಮೇಲೆ حَيَّ عَلَى الصَّلٰوةِ (ಹಯ್ಯ ಅಲಸ್ಸಲಾಃ) ನಮಾಝಿಗೆ ಬನ್ನಿ, ಆ ಮೂಲಕ حَيَّ عَلَى الْفَلَاحِ (ಹಯ್ಯ ಅಲಲ್ ಫಲಾಹ್) ವಿಜಯದೆಡೆಗೂ ಬನ್ನಿ ಎಂದು ನಿಮ್ಮನ್ನು ಆಹ್ವಾನಿಸುತ್ತಾನೆ.

اَلصَّلٰوةُ خَيْرٌ مِّنَ النَّوْمِ (ಅಸ್ಸಲಾತು ಖೈರುಮ್ಮಿನನ್ನೌಮ್) ಪ್ರಭಾತದ ಸುಖನಿದ್ದೆಗಿಂತ ನಮಾಝ್ ಹೆಚ್ಚು ಉತ್ತಮವಾಗಿದೆ ಎಂದು ಮುಅದ್ದಿನ್ (ಬಾಂಗ್ ಕರೆ ಕೊಡುವಾತ) ತಿಳಿಸುತ್ತಾನೆ. ಆಲೋಚಿಸಿ ನೋಡಿ, ಈ ವಚನಗಳು ಎಷ್ಟು ಮಹತ್ತರವಾದುದು!

ಬಾಂಗ್ ಕೇಳುವಾಗ ನಾವು ಅದನ್ನು ಗಮನವಿಟ್ಟು ಆಲಿಸಿ ಅದೇ ವಚನಗಳನ್ನು ಮೆಲ್ಲಗೆ ಪುನರುಚ್ಚರಿಸಬೇಕಾಗಿದೆ.

ಆದರೆ حَيَّ عَلَى الْفَلَاحِ ಮತ್ತು حَيَّ عَلَى الصَّلٰوةِ ಎಂದು ಕೇಳಿಸುವಾಗ لَا حَوْلَ وَلَا قُوَّةَ اِلَّا بِاللّٰهِ (ಅಲ್ಲಾಹನಲ್ಲದೇ ಯಾವುದೇ ಶಕ್ತಿ ಸಾಮರ್ಥ್ಯ ಇಲ್ಲ) ಎಂದು ಹೇಳಬೇಕು. ಪ್ರಭಾತದ ಅದಾನ್‌ನಲ್ಲಿ اَلصَّلٰوةُ خَيْرٌ مِّنَ النَّوْمِ ಎಂದು ಕೇಳುವಾಗ صَدَقْتَ وَبَرِرْتَ (ನೀವು ಸತ್ಯವನ್ನೇ ಹೇಳಿದಿರಿ, ಪುಣ್ಯವನ್ನು ಗಳಿಸಿದಿರಿ) ಎಂದು ಹೇಳಬೇಕು. ಇಕಾಮತ್‌ನಲ್ಲಿ قَدْ قَامَتِ الصَّلٰوةُ ಎಂದು ಕೇಳಿದಾಗ اَقَامَهَا اللّٰهُ وَاَدَامَهَا (ಅಲ್ಲಾಹನು ಅದನ್ನು ಸ್ಥಿರಗೊಳಿಸಿ ಶಾಶ್ವತವಾಗಿ ನೆಲೆಗೊಳಿಸಲಿ) ಎಂದು ಹೇಳಬೇಕು.

ಬಾಂಗ್(ಅದಾನ್) ಕರೆ ಮುಗಿದ ಮೇಲೆ ಪ್ರವಾದಿಯವರ(ಸ) ಹೆಸರಲ್ಲಿ ಸ್ವಲಾತ್ (ಸ್ವಸ್ತಿವಚನ) ಮತ್ತು ಈ ಕೆಳಗಿನ ಪ್ರಾರ್ಥನೆ ಪಠಿಸಬೇಕು.

اَللّٰهُمَّ رَبَّ هٰذِهِ الدَّعْوَةِ التَّامَّةِ وَالصَّلٰوةِ الْقَائِمَةِ اٰتِ مُحَمَّدَانِ الْوَسِيْلَةَ وَالْفَضِيْلَةَ وَابْعَثْهُ مَقَاماً مَحْمُوْدَانِ الَّذِىْ وَعَدْتَّهُ ـ (البخارى)

اَللّٰهُمَّ رَبَّ هٰذِهِ الدَّعْوَةِ التَّامَّةِ	ಪೂರ್ಣಗೊಂಡ ಈ ಕರೆಯ ಒಡೆಯನಾದ ಅಲ್ಲಾಹನೇ,
وَالصَّلٰوةِ الْقَائِمَةِ	ಈ ನಿರ್ವಹಿಸುವ ನಮಾಝಿನ
اٰتِ مُحَمَّدَانِ الْوَسِيْلَةَ	ಮುಹಮ್ಮದ್‌ರಿಗೆ(ಸ) ವಸೀಲತ್

(ದೇವನ ಸಾಮಿಪ್ಯ) ಎಂಬ ವಿಶೇಷ ಗೌರವ ನೀಡು ಶ್ರೇಷ್ಠವಾದಲ್ಲಿ	وَالْفَضِيْلَةَ
ಉನ್ನತವಾದ ಪದವಿಯಲ್ಲಿ	وَالدَّرَجَةَ الرَّافِيعَةَ
ಅವರನ್ನು ನಿಯೋಜಿಸು	وَابْعَثْهُ
ನೀನು ಮಾತುಕೊಟ್ಟ ಸ್ತುತ್ಯರ್ಹ ಸ್ಥಾನದಲ್ಲಿ	مَقَاماً مَحْمُوْدَانِ الَّذِىْ وَعْدَتَّهُ

ನಾವು ಏನು ಕಲಿತೆವು?

1. ಮುಸ್ಲಿಮರು ವಾಸಿಸುವ ಪ್ರದೇಶಗಳಲ್ಲಿ ಸಂಘಟಿತ ನಮಾಝ್ ಸ್ಥಾಪಿಸುವುದು ಕಡ್ಡಾಯವಾಗಿದೆ.

2. ಬಾಂಗ್ ಕರೆ ಕೊಡುವಾತನು ಕಿಯಾಮತ್ ದಿವಸದಲ್ಲಿ ಉನ್ನತ ಸ್ಥಾನದಲ್ಲಿರುತ್ತಾನೆ.

3. ಬಾಂಗ್ ಮುಗಿದಾಗ ಪ್ರವಾದಿವರ್ಯರ(ಸ) ಹೆಸರಲ್ಲಿ ಸ್ವಲಾತ್ (ಸ್ವಸ್ತಿವಚನ) ಮತ್ತು ದುಆ ಹೇಳಬೇಕಾಗಿದೆ.

ಅಭ್ಯಾಸ

1) ಬಾಂಗ್ ಕರೆ ಕೊಡುವುದರ ಉದ್ದೇಶವೇನು?

2) ಸ್ತ್ರೀಯರು ನಮಾಝ್ ಮಾಡುವಾಗ ಬಾಂಗ್ ಕೊಡಬೇಕೇ?

3) ಬಾಂಗ್ ಕರೆಯಲ್ಲಿ ಯಾವೆಲ್ಲ ಸುನ್ನತ್ (ಐಚ್ಛಿಕವಾದುದು)ಗಳಿವೆ?

4) ಕೆಳಗಿನವುಗಳ ಅರ್ಥ ಬರೆಯಿರಿ:

(1) حَيَّ عَلَى الصَّلٰوةِ (2) حَيَّ عَلَى الْفَلَاحِ (3) لَا حَوْلَ وَلَا قُوَّةَ اِلَّا بِاللّٰهِ

ನೀವು ಮಾಡಿರಿ.

1) ಪ್ರತಿಯೊಂದು ನಮಾಝಿನ ಸಮಯವನ್ನು ವೇಳಾಪಟ್ಟಿ ನೋಡಿ ನಮಾಝ್ ನಿರ್ವಹಿಸಿರಿ.

2) ಸ್ಪಷ್ಟ ಶಬ್ದಗಳಿಂದ ಜೋರಾಗಿ ಬಾಂಗ್ ಕೊಡುವುದಕ್ಕೆ ಅಭ್ಯಾಸ ನಡೆಸಿರಿ.

3) ಬಾಂಗ್‌ನ ನಂತರ ಮಾಡುವ ಪ್ರಾರ್ಥನೆಯನ್ನು ಅರ್ಥ ಸಹಿತ ಕಂಠಪಾಠ ಮಾಡಿರಿ.

***

ಪಾಠ: 3

ವುಝೂ (ಅಂಗಸ್ನಾನ)

اَلْوُضُوء

ನಮಾಝ್ ನಿರ್ವಹಿಸುವುದಕ್ಕೆ ಅಂಗಸ್ನಾನ اَلْوُضُوء ವುಝೂ ಅವಶ್ಯಕವೆಂದು ನೀವು ಕಲಿತಿರುವಿರಿ ಅಲ್ಲವೇ? ಕೇವಲ ಹೊರಗಿನ ಅಂಗಗಳನ್ನು ಶುದ್ಧೀಕರಿಸುವುದು ವುಝೂ ಮಾಡುವುದರ ಉದ್ದೇಶವೇನಲ್ಲ. ದೇಹದಲ್ಲಿ ಕೊಳೆಯ ಒಂದು ಕಣ ಕೂಡಾ ಇಲ್ಲದಿರುವಂತೆ ಸ್ನಾನ ಮಾಡಿ ಸ್ವಚ್ಛವಾಗಿ ಬಂದರೂ ನಮಾಝ್ ಮಾಡುವುದಾದರೆ ಸಂಕಲ್ಪದೊಂದಿಗೆ ವುಝೂ ಮಾಡುವುದು ಕಡ್ಡಾಯವಾಗಿದೆ.

ಹಾಗಾದರೆ ವುಝೂವಿನ ಒಳಗುಟ್ಟೇನು? ಅಲ್ಲಾಹನಲ್ಲಿ ನೇರವಾಗಿ ಸಂಭಾಷಿಸಲು ಅಲ್ಲಾಹನೇ ಸೂಚಿಸಿದ ಸಿದ್ಧತೆಯದು. ಇದನ್ನು ಮನನ ಮಾಡಿ ಆ ರೀತಿ ಉದ್ದೇಶಿಸಿ ವುಝೂ ಮಾಡಲು ನಾವು ಪ್ರಾರಂಭಿಸಬೇಕು. ಪ್ರವಾದಿಯವರು(ಸ) ವಿವರಿಸಿರುವುದನ್ನು ನೋಡಿರಿ.

"ವಿಶ್ವಾಸಿಯಾಗಿರುವ ದಾಸನು ವುಝೂವಿಗಾಗಿ ಮುಖ ತೊಳೆಯುವಾಗ ಕಣ್ಣುಗಳಿಂದ ಅವನು ಮಾಡಿದ ಸಕಲ ಪಾಪಗಳು ಆ ನೀರಿನ ಕೊನೆಯ ಬಿಂದುವಿನ ಜೊತೆ ತೊಳೆದು ಹೋಗುವುದು. ಕೈಗಳನ್ನು ತೊಳೆಯುವಾಗ ಅವುಗಳಿಂದ ಮಾಡಿರುವ ಎಲ್ಲ ಪಾಪಗಳು ಆ ನೀರಿನ ಕೊನೆಯ ಬಿಂದುವಿನ ಜೊತೆ ಕೊಚ್ಚಿ ಹೋಗುವುದು. ಕಾಲುಗಳನ್ನು ತೊಳೆಯುವಾಗ ಅವುಗಳಿಂದ ಮಾಡಿದ ಸಕಲ ಪಾಪಗಳು ಆ ನೀರಿನ ಕೊನೆಯ ಬಿಂದುವಿನೊಂದಿಗೆ ಕೊಚ್ಚಿ ಹೋಗುವುದು. ಈ ರೀತಿ ಎಲ್ಲ ಪಾಪಗಳಿಂದ ಆತ ಮುಕ್ತನೂ ಪರಿಶುದ್ಧನೂ ಆಗಿಬಿಡುವನು.

ಪ್ರವಾದಿವರ್ಯರು(ಸ) ಹೇಳಿದರು, "ಕಿಯಾಮತ್ (ಪುನರುತ್ಥಾನ) ದಿನದಂದು ನನ್ನ ಸಮುದಾಯವು ವುಝೂವಿನ ಫಲವಾಗಿ ಮುಖ ಕೈಕಾಲುಗಳು ಬಿಳಿಯಾಗಿ

ಶೋಭಿಸುವವರಾಗಿ ಹಾಜರಾಗಲಿರುವರು. ಆದ್ದರಿಂದ ಸಾಧ್ಯವಿರುವಷ್ಟು ಉತ್ತಮವಾಗಿ ತಿಕ್ಕಿ ತೊಳೆಯಿರಿ." (ಬುಖಾರಿ, ಮುಸ್ಲಿಮ್)

ವುಝೂ ಪೂರ್ತಿಯಾಗುವುದರೊಂದಿಗೆ ಗಳಿಸಬಹುದಾಗಿರುವ ಈ ಪರಿಶುದ್ಧಿಯೊಂದಿಗೆ ನಾವು ಅಲ್ಲಾಹನ ಎದುರು ನಮಾಝ್‌ಗೆ ನಿಲ್ಲಬೇಕು.

ವುಝೂವಿನ ವಿಧಾನ:

ಒಮ್ಮೆ ಉಸ್ಮಾನ್(ರ) ಸ್ವಲ್ಪ ನೀರು ಕೇಳಿ ಈ ಕೆಳಗಿನ ವಿಧಾನದಂತೆ ವುಝೂ ಮಾಡಿದರು. ಅವರು ಮೂರು ಸಲ ಮುಂಗೈ ತೊಳೆದು ನಂತರ ಬಾಯಿ ಮುಕ್ಕಳಿಸಿದರು. ಬಳಿಕ ಮೂರು ಬಾರಿ ಮುಖ ತೊಳೆದರು. ಆ ನಂತರ ಬಲ ಮತ್ತು ಎಡ ಕೈಗಳನ್ನು ಮಣಿಗಂಟಿನ ವರೆಗೆ ಮೂರು ಸಲ ತೊಳೆದರು. ಬಳಿಕ ತಲೆ ಸವರಿದರು. ಆ ನಂತರ ಬಲ ಕಾಲು ಮತ್ತು ಎಡಕಾಲನ್ನು ಮಣಿಗಂಟಿನ ವರೆಗೆ ಮೂರು ಬಾರಿ ತೊಳೆದರು. ನಂತರ ಹೇಳಿದರು, ಪ್ರವಾದಿಯವರು(ಸ) ಈ ರೀತಿ ವುಝೂ ಮಾಡಿದ ಬಳಿಕ ಹೀಗೆ ಹೇಳಿರುವರು: "ಯಾವನಾದರೂ ನಾನು ಮಾಡಿದಂತೆ ವುಝೂ ಮಾಡಿ ಎರಡು ರಕಅತ್ ನಮಾಝ್ ಮಾಡಿದರೆ ಅವನ ಗತಪಾಪಗಳೆಲ್ಲವೂ ಕ್ಷಮಿಸಲ್ಪಡುವುದು."

ವುಝೂವಿನ ನಿಬಂಧನೆಗಳು:

ವುಝೂ ಸರಿಯಾಗಬೇಕಿದ್ದರೆ ಈ ಕೆಳಗಿನ ನಿಬಂಧನೆಗಳನ್ನು ಪಾಲಿಸಬೇಕು.

1. طهور (ಶುದ್ಧ) ಆಗಿರುವ ನೀರು ಆಗಿರಬೇಕು.

2. ನೀರನ್ನು ಅಶುದ್ಧಗೊಳಿಸುವಂತಹ ಯಾವುದೂ ಅವಯವಗಳಲ್ಲಿರ ಬಾರದು.

3. ವುಝೂ ಮಾಡುವ ಭಾಗಗಳಿಗೆ ನೀರು ತಾಗಿಸಿ ತೊಳೆಯಬೇಕು.

4. ನೀರು ಚರ್ಮಕ್ಕೆ ತಾಗದಂತೆ ತಡೆಯುವ ಯಾವುದೂ ಅವಯವಗಳಲ್ಲಿ ಇರಬಾರದು.

ವುಝೂ ಕರ್ಮದಲ್ಲಿ 'ಫರ್ಝ್'(ಕಡ್ಡಾಯ ಮಾಡಬೇಕಾದ್ದು)ಗಳೂ, ಸುನ್ನತ್(ಮಾಡುವುದಕ್ಕೆ ಶ್ರೇಷ್ಠವಾಗಿರುವ ಕಾರ್ಯ)ಗಳೂ ಇವೆ.

ವುಝೂವಿನ 'ಫರ್ಝ್'ಗಳು:

1. ನಿಯ್ಯತ್(ಸಂಕಲ್ಪ). ಶುದ್ಧಿ ಕೈಗೊಳ್ಳುವುದಕ್ಕಾಗಿ ವುಝೂ ಮಾಡುವೆನು ಎಂದು ಭಾವಿಸಬೇಕು.

2. ಮುಖ ತೊಳೆಯುವುದು.

3. ಎರಡೂ ಕೈಗಳನ್ನು ಮೊಣಕೈ ಗಂಟಿನ ಸಹಿತ ತೊಳೆಯುವುದು.

4. ತಲೆ ಸವರುವುದು.

5 ಎರಡೂ ಕಾಲುಗಳನ್ನು ಮಣಿಗಂಟಿನ ಸಮೇತ ತೊಳೆಯುವುದು.

6. ಕ್ರಮ ತಪ್ಪದೆ ಮಾಡುವುದು. ಇದನ್ನು ترتيب (ತರ್‌ತೀಬ್) ಎಂದು ಕರೆಯುವರು.

ವುಝೂವಿನ 'ಸುನ್ನತ್'ಗಳು:

1. بِسْمِ اللّٰهِ الرَّحْمٰنِ الرَّحِيم ಎಂದು ಹೇಳಿ ಪ್ರಾರಂಭಿಸಬೇಕು.

2. ಮುಂಗೈ ತೊಳೆಯುವುದು.

3. ಹಲ್ಲುಜ್ಜುವುದು.

4. ಬಾಯಲ್ಲಿ ನೀರು ಹಾಕಿ ಮುಕ್ಕಳಿಸುವುದು, ಮೂಗಿನೊಳಕ್ಕೆ ನೀರು ಹಾಯಿಸಿ ಶುದ್ಧ ಮಾಡುವುದು.

5. ಕಿವಿ ಸವರುವುದು (ನಡು ಬೆರಳಿನಿಂದ ಕಿವಿಯ ಒಳಭಾಗವನ್ನೂ ಹೆಬ್ಬೆರಳಿಂದ ಕಿವಿಯ ಹೊರಭಾಗವನ್ನೂ ಸವರಬೇಕು)

6. ದಪ್ಪ ಗಡ್ಡವನ್ನು ಉಜ್ಜಿ ತೊಳೆಯುವುದು.

7. ಅವಯವಗಳನ್ನು ತಿಕ್ಕಿ ತೊಳೆಯುವುದು.

8. ಮುಖ ಮತ್ತು ಕೈಕಾಲುಗಳನ್ನು ಸ್ವಲ್ಪ ಹೆಚ್ಚೇ ತೊಳೆಯುವುದು.

9. ಮೂರು ಮೂರು ಸಲ ಆವರ್ತಿಸಿ ತೊಳೆಯುವುದು.

10. ಕೈಕಾಲು ತೊಳೆಯುವಾಗ ಬಲ ಕಡೆಯಿಂದ ಪ್ರಾರಂಭಿಸುವುದು.

11. ವುಝೂ ಆದ ನಂತರ ಪ್ರಾರ್ಥಿಸುವುದು.

ಪ್ರಾರ್ಥನೆ ಮತ್ತು ಅರ್ಥಗಳು:

اَشْهَدُ اَنْ لَّآ اِلٰـهَ اِلَّا اللّٰهُ وَحْدَهُ لَا شَرِيْكَ لَهُ وَاَشْهَدُ اَنَّ مُحَمَّدًا عَبْدُهُ وَرَسُوْلُهُ اَللّٰهُمَّ اجْعَلْنِىْ مِنَ التَّوَّابِيْنَ وَاجْعَلْنِىْ مِنَ الْمُتَطَهِّرِيْنَ سُبْحَانَكَ اَللّٰهُمَّ وَبِحَمْدِكَ اَشْهَدُ اَنْ لَّا اِلٰهَ اِلَّا اَنْتَ، اَسْتَغْفِرُكَ وَاَتُوْبُ اِلَيْكَ

ಅಲ್ಲಾಹನಲ್ಲದೇ ಆರಾಧ್ಯನಿಲ್ಲ ಎಂದು ನಾನು ಸಾಕ್ಷ್ಯ ವಹಿಸುತ್ತೇನೆ.	اَشْهَدُ اَنْ لَّآ اِلٰـهَ اِلَّا اللّٰهُ
ಅವನು ಏಕನು	وَحْدَهُ
ಅವನಿಗೆ ಭಾಗೀದಾರರಿಲ್ಲ.	لَا شَرِيْكَ لَهُ
ಮುಹಮ್ಮದ್‌ರು(ಸ) ಅವನ ದಾಸರೂ ಸಂದೇಶವಾಹಕರೂ ಆಗಿರುವರೆಂದು ನಾನು ಸಾಕ್ಷ್ಯ ವಹಿಸುತ್ತೇನೆ.	وَاَشْهَدُ اَنَّ مُحَمَّدًا عَبْدُهُ وَرَسُوْلُهُ
ಅಲ್ಲಾಹನೇ ನನ್ನನ್ನು ಪಶ್ಚಾತ್ತಾಪ ಪಡುವವರಲ್ಲಿ ನೀನು ಸೇರಿಸು.	اَللّٰهُمَّ اجْعَلْنِىْ مِنَ التَّوَّابِيْنَ
ನನ್ನನ್ನು ನೀನು ಪರಿಶುದ್ಧರಲ್ಲಿ ಸೇರಿಸು.	وَاجْعَلْنِىْ مِنَ الْمُتَطَهِّرِيْنَ
ಅಲ್ಲಾಹನೇ ನಿನ್ನನ್ನು ಸ್ತುತಿಸುತ್ತಾ ನಿನ್ನ ಪರಿಶುದ್ಧಿಯನ್ನು ಪ್ರಶಂಸಿಸುತ್ತೇನೆ.	سُبْحَانَكَ اَللّٰهُمَّ وَبِحَمْدِكَ
ನೀನಲ್ಲದೆ ಆರಾಧ್ಯನಿಲ್ಲವೆಂದು ನಾನು ಸಾಕ್ಷ್ಯ ವಹಿಸುತ್ತೇನೆ.	اَشْهَدُ اَنْ لَّا اِلٰهَ اِلَّا اَنْتَ
ನಿನ್ನೊಂದಿಗೆ ಕ್ಷಮೆ ಯಾಚಿಸುತ್ತೇನೆ.	اَسْتَغْفِرُكَ
ನಿನ್ನೆಡೆಗೆ ನಾನು ಪಶ್ಚಾತ್ತಾಪಪಟ್ಟು ಮರಳುತ್ತೇನೆ.	وَاَتُوْبُ اِلَيْكَ

ನೀವು ಮಾಡಿರಿ:

1) ತರಗತಿಯಲ್ಲಿ ಇತರ ಮಕ್ಕಳ ಎದುರು ವುಝೂ ಮಾಡಿ ತೋರಿಸಿರಿ.

2) ವುಝೂವಿನ ನಂತರದ ಪ್ರಾರ್ಥನೆ ಕಂಠಪಾಠ ಮಾಡಿರಿ.

ಅಭ್ಯಾಸ:

1) ಪ್ರವಾದಿವರ್ಯರು(ಸ) ಮಾಡಿ ತೋರಿಸಿರುವ ವುಝೂವಿನ ರೂಪವನ್ನು ವಿವರಿಸಿರಿ.

2) ವುಝೂವಿನ ಉದ್ದೇಶವೇನು?

3) ವುಝೂವಿನ ಫಲವೇನು?

4) ವುಝೂವಿನಿಂದಾಗಿ ಅಂತ್ಯ ದಿವಸದಲ್ಲಿ ಸತ್ಯವಿಶ್ವಾಸಿಗಳಿಗೆ ಸಿಗುವ ವಿಶೇಷ ಸ್ಥಾನ ಯಾವುದು?

***

ಪಾಠ: 4

ಮಲಿನಾವಸ್ಥೆ (ಅಶುದ್ಧಿ)

اَلْحَدَث

ನಮ್ಮ ದೇಹ ಮತ್ತು ಬಟ್ಟೆ ಬರೆಗಳು ಯಾವಾಗಲೂ ಶುದ್ಧವಾಗಿರುವುದು ಮುಖ್ಯವಾಗಿದೆ. ಶುದ್ಧಿ(ಸ್ವಚ್ಛತೆ)ಯಿಲ್ಲದೆ ಮುಸ್ಲಿಮರಿಗೆ ಜೀವಿಸುವುದು ಭೂಷಣವಲ್ಲ. ಶುಚಿತ್ವ ಪಾಲಿಸುವವರನ್ನು ಅಲ್ಲಾಹನು ಇಷ್ಟಪಡುತ್ತಾನೆ.

إِنَّ اللّٰهَ يُحِبُّ التَّوَّابِينَ وَيُحِبُّ الْمُتَطَهِّرِين

ಸ್ವಚ್ಛತೆ ಈಮಾನಿನ (ಸತ್ಯವಿಶ್ವಾಸದ) ಭಾಗವಾಗಿದೆ. ದೇಹದ ಶುದ್ಧೀಕರಣದಲ್ಲಿ ಎರಡು ವಿಧಗಳಿವೆ.

I. حدث ದ ಶುದ್ಧೀಕರಣ:

ದೇಹದ ಅಶುದ್ಧಾವಸ್ಥೆಗೆ حدث (ಹದಸ್) ಎನ್ನಲಾಗುವುದು.

ಹದಸ್‌ನಲ್ಲಿ ಎರಡು ವಿಧಗಳಿವೆ.

1. اَلْحَدَثُ الْاَكْبَر (ದೊಡ್ಡ ಅಶುದ್ಧಿಯ ಸ್ಥಿತಿ): ವೀರ್ಯಸ್ಖಲನ, ಸಂಭೋಗ, ಮುಟ್ಟು, ಹೆರಿಗೆ, ಹೆರಿಗೆ ರಕ್ತಸ್ರಾವ ಇತ್ಯಾದಿಗಳಿಂದ ಉಂಟಾಗುವ ಅಶುದ್ಧಾವಸ್ಥೆಯನ್ನು اَلْحَدَثُ الْاَكْبَر ಎನ್ನುವುದು. ಇವುಗಳಿಂದ ಶುಚಿಯಾಗಿರಲು ಸ್ನಾನ ಕಡ್ಡಾಯವಾಗಿದೆ. ಮೇಲೆ ವಿವರಿಸಿರುವ ಕಾರಣಗಳಲ್ಲಿ ಯಾವುದೇ ಒಂದು ಸಂಭವಿಸಿದರೂ ನಮಾಝ್, ಕುರ್‌ಆನ್ ಪಾರಾಯಣ, ಮಸೀದಿ ಪ್ರವೇಶ, ಕಅಬಾ ಪ್ರದಕ್ಷಿಣೆ ಇತ್ಯಾದಿಯನ್ನು ಮಾಡುವುದಕ್ಕೆ ಸ್ನಾನ ಮಾಡಿ ಶುಚಿಯಾಗಬೇಕಾಗಿದೆ.

2. اَلْحَدَثُ الْاَصْغَر (ಸಣ್ಣ ಅಶುದ್ಧಾವಸ್ಥೆ): ವುಝೂ ಭಂಗಗೊಳ್ಳುವಂತಹ ಕಾರಣಗಳು ನಡೆದರೆ ಅದನ್ನು اَلْحَدَثُ الْاَصْغَر ಎನ್ನಲಾಗುವುದು. ಈ ಕುರಿತು ಹಿಂದೆ ನಾವು ಕಲಿತಿರುವೆವು. ಈ ಸ್ಥಿತಿಯಿಂದ ನಾವು ಶುಚಿಗೊಳ್ಳಲು ವುಝೂ ಮಾಡಬೇಕಾಗಿದೆ.

II. نجس ಮಾಲಿನ್ಯ:

'ನಜಸ್' ಎಂದರೆ ಮಾಲಿನ್ಯವಾಗಿದೆ. ಅದು ದೇಹ, ಬಟ್ಟೆಬರೆಗಳಿಗೆ ತಾಗಿದರೆ ತೊಳೆದು ಶುಚಿಗೊಳಿಸಬೇಕಾಗಿದೆ. ನಜಸನ್ನು ತೊಳೆದು ಶುಚಿಗೊಳಿಸದಿದ್ದರೆ ನಮಾಝ್ ಸಿಂಧುವಾಗುವುದಿಲ್ಲ.

ಹೆಣ, ರಕ್ತ, ಮಲ, ಮೂತ್ರ, ಕೀವು, ವಾಂತಿ, ಮದ್ಯ ಇತ್ಯಾದಿ ವಸ್ತುಗಳು ಮತ್ತು ನಾಯಿ, ಹಂದಿ ಮುಂತಾದ ಪ್ರಾಣಿಗಳು ನಜಸ್‌ಗಳಾಗಿವೆ.

ಇವುಗಳಲ್ಲಿ ಯಾವುದಾದರೊಂದು ಶರೀರ, ಬಟ್ಟೆಗಳಿಗೆ ತಾಗಿದರೆ ಮತ್ತು ಅಂಟಿದರೆ ಅದನ್ನು ತೊಳೆದು ಶುಚಿಪಡಿಸಬೇಕು. ಮನುಷ್ಯ, ಮೀನು, ಜರಾದ್(ಮಿಡತೆ)ಗಳ ಹೆಣವೋ ಹೆಣದ ಒಣಗರಿಯೋ ಕೊಂಬು, ಉಗುರು, ಕೂದಲು ಮುಂತಾದವುಗಳು ನಜಸ್‌ಗಳಲ್ಲ.

ಶುಚೀಕರಣಕ್ಕಾಗಿ ತೊಳೆಯುವಾಗ, طَهُور ಆದ ನೀರನ್ನು ಉಪಯೋಗಿಸಬೇಕು. ಮೊದಲೇ ಶುದ್ಧವಾಗಿದ್ದು ಬೇರೆಯದನ್ನು ಶುಚಿಗೊಳಿಸಲು ಸಾಮರ್ಥ್ಯ ಹೊಂದಿರುವ ನೀರನ್ನು طَهُور ಆದ ನೀರು' ಎನ್ನಲಾಗುವುದು. ಮಲಮೂತ್ರ ವಿಸರ್ಜನಾ ನಂತರ ಶುದ್ಧಗೊಳಿಸಲು ಶೌಚ್ಯಕ್ಕೆ ನೀರು ದೊರಕದಿದ್ದರೆ ಅಂಥ ಸ್ಥಿತಿಯಲ್ಲಿ ಕಾಗದ ಅಥವಾ ಇತರ ಶುದ್ಧ ವಸ್ತುಗಳನ್ನು ಉಪಯೋಗಿಸಬಹುದು.

ನಾವು ಏನು ಕಲಿತೆವು?

1) اَلْحَدَثُ الْاَكْبَر ನಿಂದ ಶುಚಿಯಾಗಲು ಸ್ನಾನ ಮಾಡುವುದು ಕಡ್ಡಾಯವಾಗಿದೆ.

2) اَلْحَدَثُ الْاَصْغَر ನಿಂದ ಶುಚಿಯಾಗಲು ವುಝೂ ಮಾಡ ಬೇಕಾಗುವುದು.

3) ದೇಹ, ಬಟ್ಟೆಗಳಲ್ಲಿರುವ ನಜಸನ್ನು ಶುಚಿಗೊಳಿಸದಿದ್ದರೆ ನಮಾಝ್ ಸರಿಯಾಗುವುದಿಲ್ಲ.

ಅಭ್ಯಾಸ

1) اَلْحَدَثُ الْاَكْبَر ನ ಕಾರಣಗಳು ಯಾವುವು?

2) ನಜಸ್ ಎಂದರೇನು?

3) ನಜಸನ್ನು ಶುಚಿಗೊಳಿಸುವುದು ಹೇಗೆ?

***

ಪಾಠ: 5

ತಯಮ್ಮುಮ್

التيمّم

حدثನ ಸ್ಥಿತಿಯಲ್ಲಿದ್ದು ಶುದ್ಧೀಕರಣಕ್ಕೆ ನಮಗೆ ನೀರು ಸಿಗದಿರುವಾಗ ಅಥವಾ ರೋಗ ಹಾಗೂ ಇನ್ನಿತರ ಕಾರಣಗಳಿಂದ ನೀರು ಉಪಯೋಗಿಸಲು ಆಗದಿದ್ದರೆ ನಾವೇನು ಮಾಡುವುದು?

ಕೆಳಗೆ ವಿವರಿಸಿರುವ ಘಟನೆ ಗಮನಿಸಿರಿ

ಒಂದು ಸಲ ಖಲೀಫಾ ಉಮರ್ ಬಿನ್ ಖತ್ತಾಬರ ಹತ್ತಿರ ಓರ್ವ ಗ್ರಾಮೀಣ ವ್ಯಕ್ತಿ ಬಂದು ಹೇಳುತ್ತಾನೆ. ನನಗೆ ಸ್ನಾನ ಕಡ್ಡಾಯವಾಗಿದ್ದು ನೀರು ಸಿಗಲಿಲ್ಲ. ನಾನು ಏನು ಮಾಡುವುದು? ಆಗ ಆ ಸಭೆಯಲ್ಲಿದ್ದ ಅಮ್ಮಾರ್ ಬಿನ್ ಯಾಸಿರ್ ತನಗೆ ಮತ್ತು ಉಮರ್ ಬಿನ್ ಖತ್ತಾಬರಿಗೆ ಎದುರಾಗಿದ್ದ ಅನುಭವಗಳನ್ನು ನೆನಪು ಮಾಡಿ ಉಮರ್‌ರೊಂದಿಗೆ ವಿವರಿಸಿದರು.

"ಒಂದು ಪ್ರಯಾಣದ ಸಂದರ್ಭದಲ್ಲಿ ನಾವು ಅನುಭವಿಸಿದ್ದು ನಿಮಗೆ ನೆನಪಿಲ್ಲವೆ? ನಮಗೆ ಸ್ನಾನ ಕಡ್ಡಾಯವಾಗಿತ್ತು. ನಮಾಝ್‌ನ ಸಮಯವಾದಾಗ ನಾವು ನೀರು ಹುಡುಕಿದೆವು. ನೀರು ಎಲ್ಲಿಯೂ ಸಿಗಲಿಲ್ಲ.

ಉಮರ್‌ರೂ ಆ ಘಟನೆಯನ್ನೇ ನೆನಪಿಸಲು ಪ್ರಯತ್ನಿಸುತ್ತಿದ್ದರು, ಅಮ್ಮಾರ್ ಮುಂದುವರಿಸಿ ಹೇಳಿದರು, "ನಾನು ಆಗ ಮೆಲ್ಲಗೆ ಮಣ್ಣಲ್ಲಿ ಹೊರಳಾಡಿದೆ. ಆ ಬಳಿಕ ನಮಾಝ್ ಮಾಡಿದೆ. ನೀವು ಏನೂ ಮಾಡಲಿಲ್ಲ. ನಮಾಝನ್ನೂ ಮಾಡಲಿಲ್ಲ. ಮತ್ತೆ ನಾವು ಪ್ರವಾದಿವರ್ಯರ(ಸ) ಸಭೆಗೆ ಹೋದೆವು. ಘಟನೆಯನ್ನು ವಿವರಿಸಿದೆವು. ಪ್ರವಾದಿವರ್ಯರು(ಸ) ತಮ್ಮ ಕೈಯನ್ನು ನೆಲಕ್ಕೆ ಬಡಿದು ಅದನ್ನು ಊದಿ ತನ್ನ ಮುಖ ಮತ್ತು ಕೈಗಳನ್ನು ಸವರಿ ನೀವು ಈ ರೀತಿ ಮಾಡಿದ್ದರೆ ಸಾಕಿತ್ತಲ್ಲವೇ ಎಂದು ಹೇಳಿರುವುದು ನಿಮಗೆ ನೆನಪಾಗುವುದಿಲ್ಲವೇ?"

ಉಮರ್‌ರು "ಹೌದು ಹೌದು" ಎಂದರು. ಈ ಘಟನೆಯನ್ನು ವಿವರಿಸಿದಾಗ ಪ್ರಶ್ನಿಸಿದ್ದ ವ್ಯಕ್ತಿಯ ಸಂದೇಹವೂ ನಿವಾರಣೆಯಾಯಿತು. ಈ ಘಟನೆಯಿಂದ ನಿಮಗೇನು ಗೊತ್ತಾಯಿತು?

ನೀರು ಸಿಗದಿರುವಾಗ ಕೈಯನ್ನು ಮಣ್ಣಿನಲ್ಲಿ ಬಡಿದು ಮುಖ, ಕೈಗಳನ್ನು ಸವರಿದರೆ ಅದು ನಮಾಝ್ ಮಾಡಲು ಸಾಕಾಗುವುದು. ಇದನ್ನು تيمّم ಎಂದು ಹೇಳುವುದು. ರೋಗ ಹಾಗೂ ಇನ್ನಿತರ ಕಾರಣಗಳಿಂದಾಗಿ ನೀರು ಉಪಯೋಗಿಸಲು ಸಾಧ್ಯವಿಲ್ಲದಿರುವಾಗ ಹೀಗೆಯೇ ಮಾಡಬೇಕು. ವಿಮಾನ ಮತ್ತಿತರ ಪ್ರಯಾಣದ ಸಂದರ್ಭದಲ್ಲಿ ಮಣ್ಣಿಗೆ ಬಡಿಯಲು ಸಾಧ್ಯವಾದೀತು ಎನ್ನುವಂತಿಲ್ಲ. ಅಂಥ ಸಂದರ್ಭಗಳಲ್ಲಿ ಲಭ್ಯವಿರುವ ಯಾವುದಾದರೊಂದು ಸ್ಥಳಕ್ಕೆ ಬಡಿದು ತಯಮ್ಮುಮ್ ಮಾಡಿ ನಮಾಝ್ ಮಾಡಬೇಕು. ಏಕೆಂದರೆ ಯಾವ ಸ್ಥಿತಿಯಲ್ಲಿದ್ದರೂ ನಮಾಝ್ ಸಂಸ್ಥಾಪಿಸುವುದು ನಮ್ಮ ಮೇಲೆ ಕಡ್ಡಾಯವಾಗಿದೆ.

ಕುರ್‌ಆನ್ ವಿವರಿಸಿರುವುದನ್ನು ನೋಡಿರಿ.

وَإِنْ كُنْتُمْ مَّرْضَىٰ أَوْ عَلَىٰ سَفَرٍ أَوْ جَاءَ أَحَدٌ مِّنْكُمْ مِّنَ الْغَائِطِ
أَوْ لَامَسْتُمُ النِّسَاءَ فَلَمْ تَجِدُوا مَاءً فَتَيَمَّمُوا صَعِيدًا طَيِّبًا فَامْسَحُوا
بِوُجُوهِكُمْ وَأَيْدِيكُمْ ۗ إِنَّ اللَّهَ كَانَ عَفُوًّا غَفُورًا ﴿٤٣﴾

"ನೀವು ಅನಾರೋಗ್ಯದಿಂದಿದ್ದಾಗ ಅಥವಾ ಪ್ರಯಾಣದಲ್ಲಿದ್ದಾಗ ಅಥವಾ ನಿಮ್ಮಲ್ಲಾರಾದರೂ ಶೌಚ್ಯಕ್ಕೆ ಹೋಗಿ ಬಂದಾಗ ಅಥವಾ ನೀವು ಸ್ತ್ರೀಯರನ್ನು ಸ್ಪರ್ಶಿಸಿರುವಾಗ ನಿಮಗೆ ನೀರು ಸಿಗದೆ ಹೋದರೆ, ಶುದ್ಧ ಮಣ್ಣನ್ನು ಉಪಯೋಗಿಸಿಕೊಳ್ಳಿರಿ ಮತ್ತು ಅದರಿಂದ ಮುಖಗಳನ್ನೂ ಕೈಗಳನ್ನೂ ಸವರಿಕೊಳ್ಳಿರಿ. ನಿಶ್ಚಯವಾಗಿಯೂ ಅಲ್ಲಾಹನು ಮೃದು ನೀತಿಯನ್ನನುಸರಿಸುವವನೂ ಅತ್ಯಂತ ಕ್ಷಮಾಶೀಲನೂ ಆಗಿರುತ್ತಾನೆ."

ತಯಮ್ಮುಮ್‌ನಲ್ಲಿ ಐದು ಫರ್ಝ್‌ಗಳಿವೆ. ನಿಯ್ಯತ್(ಸಂಕಲ್ಪ) ಮಾಡುವುದು. ಕೈಗಳನ್ನು ಮಣ್ಣಿಗೆ ತಾಗಿಸುವುದು. ಮುಖ ಸವರುವುದು. ಕೈಗಳನ್ನು ಸವರುವುದು. ತರ್ತೀಬ್ ಪಾಲಿಸುವುದು.

ವುರ್ಘೂ ಮಾಡಿದವರಿಗೆ ಸಮ್ಮತಾರ್ಹವಾಗುವುದೆಲ್ಲವೂ ತಯಮ್ಮುಮ್ ಮಾಡಿದವರಿಗೂ ಸಮ್ಮತಾರ್ಹವಾಗಿದೆ. ತಯಮ್ಮುಮ್ ಮಾಡಿ ನಮಾಝ್ ಮಾಡಿದ್ದು ಆ ಬಳಿಕ ನೀರು ಸಿಕ್ಕಿದರೆ ಆ ನಮಾಝನ್ನು ಪುನಃ ಮಾಡಬೇಕಾಗಿಲ್ಲ.

ವುರ್ಘೂ ಭಂಗಗೊಳ್ಳುವ ಕಾರಣಗಳಿಂದ ತಯಮ್ಮುಮ್ ಕೂಡಾ ದುರ್ಬಲವಾಗುತ್ತದೆ. ತಯಮ್ಮುಮ್‌ನ ಅನಿವಾರ್ಯತೆಯಿಲ್ಲದ ಸ್ಥಿತಿಯಲ್ಲಿ ಮಾಡುವ ತಯಮ್ಮುಮ್ ದುರ್ಬಲವಾಗಿದೆ.

ನಾವು ಏನು ಕಲಿತೆವು?

1) ಅನಿವಾರ್ಯ ಪರಿಸ್ಥಿತಿಯಲ್ಲಿ ವುರ್ಘೂ ಮತ್ತು ಸ್ನಾನದ ಬದಲು ತಯಮ್ಮುಮ್ ಮಾಡಬಹುದಾಗಿದೆ.

2) ಒಂದು ತಯಮ್ಮುಮ್‌ನಿಂದ ಒಂದಕ್ಕಿಂತ ಹೆಚ್ಚು ನಮಾಝ್ ಮಾಡಬಹುದಾಗಿದೆ.

ಅಭ್ಯಾಸ

1) ತಯಮ್ಮುಮ್ ಎಂದರೇನು?

2) ತಯಮ್ಮುಮ್ ಹೇಗೆ ಮಾಡುವುದು?

3) ಅದು ಬಾತಿಲ್ (ದುರ್ಬಲಗೊಳ್ಳುವ) ಆಗುವ ಕಾರಣಗಳಾವುವು?

***

ಪಾಠ 6

ನಮಾಝಿನ ಕ್ರಮ

كَيْفِيَّةُ الصَّلَاة

تَكْبِيرَةُ الْإِحْرَام‎ನಿಂದ ಆರಂಭವಾಗಿ اَلسَّلَامُ عَلَيْكُمْ ಎಂದು ಸಲಾಮ್ ಹೇಳುವ ವರೆಗೆ ವಿಶೇಷ ವಚನ ಮತ್ತು ಕ್ರಮಗಳನ್ನು ನಮಾಝ್ ಒಳಗೊಂಡಿದೆ.

ನಮಾಝ್ ಸರಿಯಾಗಲು ಕೆಲವು ಶರತ್ತುಗಳನ್ನು ಪಾಲಿಸಬೇಕಾಗುತ್ತದೆ. ಯಾವುದಾದರೊಂದು شَرْط ಬಿಟ್ಟು ಹೋದರೆ ನಮಾಝ್ ಸಿಂಧುವಾಗುವುದಿಲ್ಲ.

ಆ ಶರತ್ತುಗಳು ಹೀಗಿವೆ-

1. حَدَث‎ನಿಂದ ಶುದ್ಧವಾಗಿರುವುದು

2. ದೇಹ, ವಸ್ತ್ರ ಮತ್ತು ನಮಾಝ್ ಮಾಡುವ ಸ್ಥಳ ಶುಚಿಯಾಗಿರಬೇಕು.

3. عَوْرَة ಮರೆಸಬೇಕು. ದೇಹದಲ್ಲಿ ಬಹಿರಂಗಗೊಳಿಸಬಾರದಂಥ ಭಾಗಗಳನ್ನು 'ಔರತ್' ಎನ್ನುತ್ತಾರೆ. ಮೊಣಕಾಲಿನ ಗಂಟಿನಿಂದ ಹೊಕ್ಕಳಿನವರೆಗೆ ಇರುವಂಥ ಭಾಗವು ಪುರುಷನ ಔರತ್(ಮರೆಸಬೇಕಾದ ಭಾಗ) ಆಗಿದೆ. ಮುಂಗೈ ಮತ್ತು ಮುಖದ ಹೊರತು ಎಲ್ಲ ಭಾಗಗಳು ಸ್ತ್ರೀಯರ ಔರತ್ ಆಗಿದೆ.

4. ನಮಾಝಿನ ವೇಳೆಯನ್ನು ಖಾತ್ರಿಯಾಗಿ ಅರಿತುಕೊಳ್ಳುವುದು. ಪ್ರತಿಯೊಂದು ಫರ್ಝ್ ನಮಾಝ್‌ಗಳನ್ನು ಅದಕ್ಕೆ ಗೊತ್ತುಪಡಿಸಿದ ಹೊತ್ತಿನಲ್ಲೇ ನಿರ್ವಹಿಸಬೇಕು.

قِبْلَة‎ಕ್ಕೆ ಎದುರಾಗಿ ನಿಲ್ಲುವುದು. ಮಕ್ಕಾದಲ್ಲಿರುವ كَعْبَة‎ವು ನಮಾಝಿನ ಕಿಬ್ಲಾ ಆಗಿರುವುದು. ಕಿಬ್ಲಾ ಎದುರಿನಲ್ಲಿ ಗೋಚರಿಸುವವರು ಅದಕ್ಕೆ ಅಭಿಮುಖ ವಾಗಿಯೂ ಅದು ಕಾಣುವುದು ಸಾಧ್ಯವಾಗದಂಥ ದೂರದಲ್ಲಿರುವವರು ಅದು ಇರುವ ಕಡೆಗೆ ಅಭಿಮುಖವಾಗಿಯೂ ನಿಂತು ನಮಾಝ್ ಮಾಡುವುದು.

ನಮಾಝಿನ ಫರ್ಳ್‌(ಕಡ್ಡಾಯ ಕರ್ಮ)ಗಳು

ನಾವು ಮಾಡುವ ನಮಾಝಿನಲ್ಲಿ ಹದಿನಾಲ್ಕು فرض (ಫರ್ಳ್‌)ಗಳಿವೆ:

1. ನಿಯ್ಯತ್
2. تَكْبِيرَةُ الْاَحْرَامْ ಉಚ್ಚರಿಸುವುದು
3. ನಿಲ್ಲುವುದು
4. سُورَةُ الْفَاتِحَة ಓದುವುದು
5. ರುಕೂಅ್ ಮಾಡುವುದು (ಬಾಗುವುದು)
6. ರುಕೂಅ್‌ನಿಂದ ಎದ್ದು ನಿಲ್ಲುವುದು (اعتدال)
7. ಎರಡು ಸಲ ಸುಜೂದ್ ಮಾಡುವುದು
8. ಎರಡು ಸುಜೂದ್‌ಗಳ ಮಧ್ಯೆ ಕುಳಿತುಕೊಳ್ಳುವುದು.
9. ಕೊನೆಯ ತಶಹ್ಹುದ್ ಮತ್ತು ಸ್ವಲಾತ್‌ಗಾಗಿ ಕುಳಿತುಕೊಳ್ಳುವುದು
10. ಕೊನೆಯ ಅತ್ತಹಿಯ್ಯಾತ್ ಓದುವುದು
11. ಪ್ರವಾದಿವರ್ಯರ(ಸ) ಮೇಲೆ ಸ್ವಲಾತ್ ಹೇಳುವುದು
12. طمأنينة ಅಲ್ಪವಿರಾಮ ಪಾಲಿಸುವುದು
13. اَلسَّلَامُ عَلَيْكُمْ 'ಅಸ್ಸಲಾಮು ಅಲೈಕುಮ್' ಎಂದು ಸಲಾಮ್ ಹೇಳುವುದು.
14. ترتيب ಅಂದರೆ ನಮಾಝ್‌ನ ಎಲ್ಲಾ ವಿಧಿಗಳನ್ನು ಕ್ರಮಬದ್ಧವಾಗಿ ಮಾಡುವುದು.

ಇದು ನಮಾಝ್‌ನ ಫರ್ಳ್‌ಗಳಾಗಿದ್ದು ನಮಾಝ್ ಪೂರ್ಣವಾಗಬೇಕಾದರೆ ಈ ಕ್ರಮವನ್ನು ಅನುಸರಿಸಬೇಕಾಗಿದೆ. ಈ ಫರ್ಳ್‌ಗಳಲ್ಲದೆ ನಮಾಝ್‌ನ ಸುನ್ನತ್‌ಗಳಿವೆ. ಇವೆಲ್ಲವನ್ನೂ ಮುಂದಿನ ಅಧ್ಯಾಯದಲ್ಲಿ ತಿಳಿಯೋಣ.

ನಾವು ಏನು ಕಲಿತೆವು?

1) ನಮಾಝ್‌ಗೆ ಐದು ಶರತ್ತುಗಳಿವೆ. ಅದನ್ನು ಪಾಲಿಸದಿದ್ದರೆ ನಮಾಝ್ ಸರಿಯಾಗುವುದಿಲ್ಲ. 2) ನಮಾಝ್‌ನಲ್ಲಿ ಹದಿನಾಲ್ಕು ಫರ್ಳ್‌ಗಳಿವೆ. ಅವು ನೆರವೇರದಿದ್ದರೆ ನಮಾಝ್ ಅಪೂರ್ಣವಾಗುತ್ತದೆ.

ಅಭ್ಯಾಸ

1) ನಮಾಝ್‌ನ ಶರತ್ತುಗಳಾವುವು? 2) ನಮಾಝ್‌ನ ಫರ್ಳ್‌ಗಳಾವುವು?

***

ಪಾಠ: 7

ತಕ್‌ಬೀರತುಲ್ ಇಹ್‌ರಾಮ್

تَكْبِيرَةُ الْاَحْرَامُ

ನಮಾಝ್ ಮಾಡುವುದಕ್ಕಾಗಿ ಕಿಬ್ಲಾದೆಡೆಗೆ ಮುಖ ಮಾಡಿ ಮೊದಲು ನಿಲ್ಲಬೇಕು. ನಿಲ್ಲುವಾಗ ಕಾಲಿನ ಪಾದಗಳು ಒಂದು ಗೇಣಿನಷ್ಟು ಅಗಲಿಸಿರಬೇಕು. ದೃಷ್ಟಿಯನ್ನು ಎಡ, ಬಲ ಅಥವಾ ಮೇಲ್ಭಾಗಕ್ಕೆ ಹರಿಸದೆ ಸುಜೂದ್ ಮಾಡುವ ಎದುರಿನ ಭಾಗಕ್ಕೆ ಹರಿಸಬೇಕು. ಬಳಿಕ ನಿಯ್ಯತ್(ಸಂಕಲ್ಪ) ಮಾಡುವುದು. ನಿಯ್ಯತ್‌ನಲ್ಲಿ ಇದು ಈ ನಮಾಝಾಗಿದ್ದು ಇದಕ್ಕೆ ಇಂತಿಷ್ಟು ರಕಅತ್ ಗಳಿವೆಯೆಂದೂ ಅದು ಇಮಾಮರ ಜೊತೆಗಾಗಿದ್ದರೆ ಅದನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ನಾನು ಅಲ್ಲಾಹನಿಗಾಗಿ ನಮಾಝ್ ಮಾಡುತ್ತಿರುವೆನೆಂಬ ಪ್ರಜ್ಞೆಯಿರಿಸಿಕೊಳ್ಳಬೇಕು.

ಈ ನಿಯ್ಯತ್‌ನ ಜೊತೆಯಲ್ಲಿಯೇ اَللّٰهُ اَكْبَرْ ಎಂದು ತಕ್‌ಬೀರತುಲ್ ಇಹ್ರಾಮ್ ಹೇಳಿ ಕೈ ಕಟ್ಟಿದ ಕೂಡಲೇ ಕೆಳಗೆ ಕೊಟ್ಟಿರುವ دُعَاءُ الْإِفْتِتَاح (ಆರಂಭದ ಪ್ರಾರ್ಥನೆ)ನ್ನು ಅಥವಾ ಅಂತೆಯೇ ಇರುವ ಪ್ರಾರ್ಥನೆಯನ್ನು ಹೇಳಬೇಕಾದುದು ಸುನ್ನತಾಗಿದೆ.

وَجَّهْتُ وَجْهِيَ لِلَّذِي فَطَرَ السَّمٰوَاتِ وَالْاَرْضَ حَنِيْفاً مُسْلِمًا وَّمَا اَنَا مِنَ الْمُشْرِكِينَ اِنَّ صَلَاتِي وَنُسُكِي وَمَحْيَايَ وَمَمَاتِي لِلّٰهِ رَبِّ الْعَالَمِينَ، لَا شَرِيْكَ لَهُ وَ بِذٰلِكَ اُمِرْتُ وَاَنَا مِنَ الْمُسْلِمِينَ،

ಇದರ ಅರ್ಥ:

ನಾನು ನನ್ನ ಮುಖವನ್ನು ತಿರುಗಿಸಿದೆನು	وَجَّهْتُ وَجْهِيَ

لِلَّذِي فَطَرَ السَّمٰوَاتِ وَالْأَرْضَ	ಆಕಾಶ ಭೂಮಿಗಳನ್ನು ಸೃಷ್ಟಿಸಿದಾತನ ಕಡೆಗೆ
حَنِيفًا	ನೇರ ಮಾರ್ಗದಲ್ಲಿದ್ದುಕೊಂಡು.
مُسْلِمًا	ಮುಸ್ಲಿಮ(ಅನುಸರಿಸುವವನು)ನಾಗಿದ್ದುಕೊಂಡು
وَّمَا أَنَا مِنَ الْمُشْرِكِينَ	ನಾನು ಬಹುದೇವಾರಾಧಕರಲ್ಲಿ ಸೇರಿದವನಲ್ಲ.
إِنَّ صَلَاتِي	ನಿಶ್ಚಯವಾಗಿಯೂ ನನ್ನ ನಮಾಝ್
وَنُسُكِي	ನನ್ನ ತ್ಯಾಗ
وَمَحْيَايَ	ನನ್ನ ಜೀವನ
وَمَمَاتِي	ನನ್ನ ಮರಣವೂ
لِلّٰهِ رَبِّ الْعَالَمِينَ	ಜಗದೊಡೆಯನಾದ ಅಲ್ಲಾಹನಿಗೆ ಮೀಸಲು
لَا شَرِيْكَ لَهُ	ಅವನಿಗೆ ಯಾರೂ ಭಾಗೀದಾರರಿಲ್ಲ
وَ بِذٰلِكَ أُمِرْتُ	ಅದನ್ನೇ ನನಗೆ ಆಜ್ಞಾಪಿಸಲಾಗಿದೆ.
وَأَنَا مِنَ الْمُسْلِمِينَ	ನಾನು ಮುಸ್ಲಿಮರಲ್ಲಿ (ಅಲ್ಲಾಹನನ್ನು ಅನುಸರಿಸಿದವರಲ್ಲಿ) ಸೇರಿದವನು.

ಈ ಆರಂಭದ ಪ್ರಾರ್ಥನೆ ಹೇಳಿದ ನಂತರ سُورَةُ الْفَاتِحَة ವನ್ನು ಓದುವುದು. ಇದರ ಆರಂಭದಲ್ಲಿ أَعُوذُ بِاللّٰهِ مِنَ الشَّيْطَانِ الرَّجِيمِ ಎಂದೂ ಕೊನೆಗೆ آمِين ಎಂದೂ ಹೇಳಬೇಕಾದ್ದು ಸುನ್ನತಾಗಿದೆ. ಅನಂತರ ಪವಿತ್ರ ಕುರ್‌ಆನಿನ ಯಾವುದೇ ಒಂದು ಅಧ್ಯಾಯವನ್ನು ಅಥವಾ ಸೂಕ್ತಗಳನ್ನು ಪಠಿಸುವುದು.

دُعَاءُ الْإِفْتِتَاح ದುಆಉಲ್ ಇಫ್ತಿತಾಹನ್ನು ಪ್ರಥಮ ರಕಅತ್ತಿನ ಆರಂಭದಲ್ಲಿ ಮಾತ್ರ ಪಠಿಸುವುದು. ಎರಡನೆಯ ರಕಅತಿನಲ್ಲೂ ಸೂರಾ ಫಾತಿಹಾಃ ಓದಿದ ನಂತರ ಕುರ್‌ಆನಿನ ಒಂದು ಸೂರಃ ಅಥವಾ ಕೆಲವು ವಾಕ್ಯಗಳನ್ನು ಓದುವುದು ಸುನ್ನತ್ತಾಗಿದೆ. ಮಗ್‌ರಿಬ್, ಇಶಾ, ಸುಬ್‌ಹಿ(ಫಜ್ರ್) ನಮಾಝ್‌ನಲ್ಲಿ ಸೂರಃ ಫಾತಿಹಾವನ್ನು ಇಮಾಮರು ಗಟ್ಟಿ ಧ್ವನಿಯಲ್ಲಿ ಇತರರು ಕೇಳುವ ಹಾಗೆ ಓದಬೇಕು. ಆದರೆ ಇಮಾಮರ ಹಿಂದೆ ನಿಂತು ಅನುಸರಿಸುತ್ತಾ ನಮಾಝ್ ಮಾಡುತ್ತಿರುವವರು ಎಲ್ಲಾ ನಮಾಝ್‌ಗಳಲ್ಲೂ ಮೆಲ್ಲಗೆ (ಮೆಲುಧ್ವನಿಯಲ್ಲಿ) ಓದಬೇಕು. ಆದರೆ ಇಮಾಮ್ ಫಾತಿಹಾದ ಕೊನೆಯಲ್ಲಿ ಆಮೀನ್ ಎಂದು ಗಟ್ಟಿಯಾಗಿ ಹೇಳುವಾಗ ಹಿಂದೆ ನಿಂತು ಅವರನ್ನು ಅನುಸರಿಸುತ್ತಿರುವ ಮಅ್‌ಮೂಮ್‌ಗಳೂ ಆಮೀನ್ ಎಂದು ಅವರ ಜೊತೆಗೆ ಗಟ್ಟಿಯಾಗಿ ಹೇಳಬೇಕು. ಇಮಾಮ್ ಫಾತಿಹಾ ಓದಿ ಮುಗಿಸಿದಾಗ ಇಮಾಮ್‌ನ ಹಿಂದೆ ನಿಂತವರು ಮೆಲ್ಲಗೆ ಫಾತಿಹಾ ಓದಲು ಪ್ರಾರಂಭಿಸಬೇಕು. ಫಾತಿಹಾವನ್ನು ಓದಿ ಆದ ಮೇಲೆ ಇಮಾಮರ ಕುರ್‌ಆನ್ ಪಾರಾಯಣವನ್ನು ಗಮನವಿಟ್ಟು ಆಲಿಸಬೇಕು.

ನಾವು ಏನು ಕಲಿತೆವು?

1) ಅಲ್ಲಾಹನ ಆರಾಧನೆ ನಡೆಸುತ್ತೇವೆ ಎಂಬ ಪ್ರಜ್ಞೆಯೊಂದಿಗೆ ನಮಾಝ್ ಮಾಡಬೇಕು.

2) ನಮಾಝ್ ಮಾಡುವಾಗ ನಮ್ಮ ದೃಷ್ಟಿಯು ಸುಜೂದ್ ಮಾಡುವ ಸ್ಥಳದ ಮೇಲಿರಬೇಕು.

3) سُورَةُ الْفَاتِحَة ಓದಲು ಪ್ರಾರಂಭಿಸುವ ಮೊದಲು أَعُوذُ بِاللّٰهِ مِنَ الشَّيْطَانِ الرَّجِيمِ ಎಂದು ಹೇಳುವುದು, ಫಾತಿಹಾ ಓದಿ ಮತ್ತು ಕೊನೆಯಲ್ಲಿ ಆಮೀನ್ ಎಂದು ಹೇಳುವುದು ಸುನ್ನತ್ತಾಗಿದೆ.

4) ಮೊದಲ (ಒಂದನೇ) ರಕಅತಿನಲ್ಲಿ ತಕ್‌ಬೀರತುಲ್ ಇಹ್ರಾಮ್ ಆಗಿ ಕೈ ಕಟ್ಟಿದ ಕೂಡಲೇ ಇಫ್ತಿತಾಹ್ ದುಆ (ಆರಂಭದ ಪ್ರಾರ್ಥನೆ ಉಚ್ಚರಿಸುವುದು) ಹೇಳುವುದು.

5) ಗಟ್ಟಿಯಲ್ಲಿ ಓದುವಂಥ ನಮಾಝ್‌ಗಳಾದ ಮಗ್‌ರಿಬ್, ಇಶಾ, ಸುಬ್‌ಹಿ ಹೊತ್ತಿನ ನಮಾಝ್‌ನಲ್ಲಿ ಇಮಾಮರು ಓದುವುದನ್ನು ಗಮನವಿಟ್ಟು ಆಲಿಸುವುದು.

ಅಭ್ಯಾಸ:

1) دُعَاءُ الْإِفْتِتَاح ನ್ನು ಅರ್ಥದೊಂದಿಗೆ ಕಂಠಪಾಠ ಮಾಡಿರಿ.

2) سُورَةُ الْفَاتِحَة ದ ಅರ್ಥ ಕಲಿತು ಮನವರಿಕೆ ಮಾಡಿರಿ.

3) ಪವಿತ್ರ ಕುರ್‌ಆನಿನ ಚಿಕ್ಕಚಿಕ್ಕ ಅಧ್ಯಾಯಗಳನ್ನು ಕಂಠಪಾಠ ಕಲಿಯಿರಿ.

***

ಪಾಠ: 8

ರುಕೂಅ್ ಮತ್ತು ಸುಜೂದ್

الرُّكُوع وَالسُّجُود

ಸೂರಃ ಓದಿ ಆದೊಡನೆ رکوع ಮಾಡಬೇಕು. ಅಂಗೈಯನ್ನು ಮೊಣಕಾಲಿನ ಗಂಟಿನ ಮೇಲಿಟ್ಟು ಬಾಗಿ ನಿಲ್ಲುವುದನ್ನು 'ರುಕೂಅ್' ಎಂದು ಹೇಳುವುದು. ಒಬ್ಬ ದಾಸ ತನ್ನ ಒಡೆಯನೊಂದಿಗೆ ತೋರಿಸುವ ಅತಿ ವಿನಯ ಮತ್ತು ಆದರದ ಉತ್ತಮ ರೂಪ ಇದು. ರುಕೂಅ್ ಮಾಡುವಾಗ ನಮ್ಮ ಶರೀರ ಮಾತ್ರವಲ್ಲ ಮನಸ್ಸನ್ನೂ ಪ್ರಭುವಿನ ಮುಂದೆ ಸಮರ್ಪಿಸುವುದು. ಅಲ್ಲಾಹನಲ್ಲಿ ಖಾಸಗಿ (ವೈಯಕ್ತಿಕ) ಸಂಭಾಷಣೆಯಲ್ಲಿ ನಿರತನಾಗಿರುವುದರ ನಡುವೆ ಒಂದು ಪ್ರತ್ಯೇಕ ಹಂತದಲ್ಲಿ ನಾವು ಅವನ ಎದುರು ಆದರಪೂರ್ವಕವಾಗಿ ತಲೆ ಬಾಗಿಸಿ سُبْحَانَ رَبِّيَ الْعَظِيم (ಮಹಾನನಾದ ಅಲ್ಲಾಹನು ಪರಿಶುದ್ಧನು) ಎಂದು ಸ್ತುತಿ ಕೀರ್ತನೆ ಮಾಡುವೆವು.

سُبْحَانَكَ اَللّٰهُمَّ رَبَّنَا وَبِحَمْدِكَ، اَللّٰهُمَّ اغْفِرْلِي

(ಅಲ್ಲಾಹನೇ, ನಮ್ಮ ಪ್ರಭೂ, ನಿನ್ನ ಪರಿಶುದ್ಧತೆಯನ್ನು ನಾವು ಕೀರ್ತನೆ ಮಾಡುವೆವು. ನಿನ್ನನ್ನು ಸ್ತುತಿಸುವೆವು. ಅಲ್ಲಾಹನೇ, ನೀನು ನನ್ನನ್ನು ಕ್ಷಮಿಸು) ಎಂದು ಹೇಳುವುದು ಉತ್ತಮವಾಗಿದೆ. ಆಗ ಸಾಕ್ಷಾತ್ ಕರುಣಾನಿಧಿಯಾಗಿರುವ ಯಜಮಾನನು ನಮ್ಮನ್ನು ಅವನಿಗೆ ಹೆಚ್ಚು ಹತ್ತಿರ ಮಾಡುವನು. ತನ್ನ ಪ್ರೀತಿ ವಾತ್ಸಲ್ಯಗಳಿಂದ ನಮಗೆ ಧಾರಾಳವಾಗಿ ಕೊಡುವನೆಂಬುದು ಸತ್ಯ.

ಆಗ ನಮ್ಮಲ್ಲಿ ಯಜಮಾನನಾದ ಪ್ರಭು ನಮ್ಮನ್ನು ಹೆಚ್ಚು ಸ್ವಾಗತಿಸಿರುವನು ಎಂಬ ದೃಢವಿಶ್ವಾಸ ಮನದಲ್ಲಿರಬೇಕು. ಈ ದೃಢವಿಶ್ವಾಸದ ಘೋಷಣೆ

ರುಕೂಅ್‌ನಿಂದ ಏಳುವಾಗ ನಾವು ಹೇಳುವೆವು, سَمِعَ اللّٰهُ لِمَنْ حَمِدَهُ، (ತನ್ನನ್ನು ಸ್ತುತಿಸಿದವನ ಸ್ತುತಿಯನ್ನು ಅಲ್ಲಾಹನು ಆಲಿಸಿದನು) ಎಂದು ಹೇಳಿ ತಲೆಯೆತ್ತಿ ಕೈಗಳನ್ನು ಭುಜಗಳ ವರೆಗೆ ಎತ್ತಬೇಕು. ಇದಕ್ಕೆ اعتدال ಎಂದು ಹೆಸರು. ನೇರ ನಿಂತ ಬಳಿಕ ಕೈಗಳನ್ನು ಎರಡೂ ಕಡೆ ತಗ್ಗಿಸಬಹುದು. سَمِعَ اللّٰهُ لِمَنْ حَمِدَهُ،ದ ನಂತರ

رَبَّنَا لَكَ الْحَمْدُ، مِلْأَ السَّمٰوَاتِ وَمِلْأَ الْاَرْضِ،

وَمِلْأَ مَا شِئْتَ مِنْ شَيْءٍ بَعْدُ

(ನಮ್ಮ ಪ್ರಭುವೇ, ಆಕಾಶ ಭೂಮಿಗಳು ಮತ್ತು ನೀನು ಉದ್ದೇಶಿಸಿದ ಬೇರೆಲ್ಲ ವಸ್ತುಗಳ ತುಂಬ ನಿನಗೆ ಸ್ತುತಿ) ಎಂದು ಹೇಳಿ ಅಲ್ಲಾಹನನ್ನು ಸ್ತುತಿಸಬೇಕು.

ಆಮೇಲೆ اَللّٰهُ اَكْبَرْ ಎಂದು ಹೇಳುತ್ತಾ ಸುಜೂದಿಗೆ (ಸಾಷ್ಟಾಂಗ) ಹೋಗಬೇಕು. ಹಣೆ, ಮೂಗು, ಮುಂಗೈಗಳು, ಮಂಡಿ (ಮೊಣಕಾಲಿನ ಗಂಟು) ಕಾಲ ಬೆರಳುಗಳ ಅಡಿಭಾಗ ಮುಂತಾದ ಎಂಟು ಅಂಗಗಳು ನೆಲದಲ್ಲಿ ಇಡಬೇಕು. ಹಣೆ ಕೂದಲಿನಿಂದ ಅಥವಾ ಬಟ್ಟೆಗಳಿಂದ ಮುಚ್ಚಿರಬಾರದು. ಮುಂಗೈಯನ್ನು ನೆಲದಲ್ಲಿ ಹರಡಿ ಇರಿಸಬಾರದು. ಪುರುಷರು ಮೊಣಕೈಗಳನ್ನು ಸ್ವಲ್ಪ ಅಗಲವಾಗಿ ಇಡಬೇಕು. ಸುಜೂದ್ ಶಾರೀರಿಕ ವಿನಯದ ಪರಮ ರೂಪವಾಗಿದೆ. ಆಧ್ಯಾತ್ಮಿಕವಾಗಿ ಅಲ್ಲಾಹನಿಗೆ ಹೆಚ್ಚು ಹತ್ತಿರವಾಗಲು ಭಯಭಕ್ತಿ ಗೌರವಗಳೊಂದಿಗೆ ಬೇಡಬೇಕಾದುದನ್ನು ಬೇಡಿಕೊಳ್ಳುವುದಕ್ಕೂ ಸೂಕ್ತವಾದ ಸಂದರ್ಭ ಸುಜೂದ್ ಆಗಿದೆ.

ಇದರಲ್ಲಿ سُبْحَانَ رَبِّيَ الْاَعْلٰى (ಉನ್ನತನಾದ ನನ್ನ ಪ್ರಭು ಪರಿಶುದ್ಧನಾಗಿರುವನು) ಎಂಬುದನ್ನು ಮೂರು ಸಲ ಹೇಳಬೇಕು. سُبْحَانَكَ اَللّٰهُمَّ رَبَّنَا وَبِحَمْدِكَ، اَللّٰهُمَّ اغْفِرْلِيْ ಎಂದೂ ಹೇಳುವುದು ಉತ್ತಮ ಸುನ್ನತ್ತಾಗಿದೆ. ಉತ್ತರ ದೊರೆಯುವುದಕ್ಕೆ ಅತ್ಯಂತ ಅನುಕೂಲವಾದ ಸಂದರ್ಭವಾದ್ದರಿಂದ ಸುಜೂದಿನಲ್ಲಿ ಬೇರೆ ಪ್ರಾರ್ಥನೆಗಳನ್ನು ಪ್ರವಾದಿ ವರ್ಯರು(ಸ) ಕಲಿಸಿದ್ದಾರೆ.

ಉದಾ:

رَبَّنَآ اٰتِنَا فِي الدُّنْيَا حَسَنَةً وَّفِي الْاٰخِرَةِ حَسَنَةً وَّقِنَا عَذَابَ النَّارِ ﴿٢٠١﴾

ಅತ್ಯಧಿಕ ವಿನಯ ಶ್ರದ್ಧೆ ಜೊತೆಗಿರಬೇಕಾದ ಸಂದರ್ಭ ಸುಜೂದ್ ಆಗಿದೆ. ಸುಜೂದ್‌ನಲ್ಲಿದ್ದಾಗ ನಮ್ಮ ಪ್ರಾರ್ಥನೆಗಳಿಗೆ ಉತ್ತರ ದೊರೆಯುತ್ತದೆ. ಆ ಮೇಲೆ ನೇರವಾಗಿ ಕುಳಿತುಕೊಳ್ಳುವುದು, ಎಡಕಾಲನ್ನು ನೆಲದಲ್ಲಿ ಹರಡಿ ಅದರ ಮೇಲೆ ಕುಳಿತು ಕೊಳ್ಳಬೇಕು. ಬಲಗಾಲಿನ ಬೆರಳುಗಳ ಅಡಿಭಾಗವನ್ನು ನೆಲದಲ್ಲಿಡುವುದು جُلُوسُ الْإِفْتِرَاش ಎಂದು ಇದರ ಹೆಸರಾಗಿದೆ. ಹೀಗೆ ಕುಳಿತುಕೊಂಡಾಗ,

رَبِّ اغْفِرْلِي، وَارْحَمْنِي، وَاجْبُرْنِي، وَارْفَعْنِي وَارْزُقْنِي، وَاهْدِنِي، وَعَافِنِي

(ನನ್ನ ಪ್ರಭೂ! ನನಗೆ ಕ್ಷಮೆ ನೀಡು. ನನ್ನೊಂದಿಗೆ ಕರುಣೆದೋರು, ನನ್ನ ತಪ್ಪುಗಳನ್ನು ತಿದ್ದು. ನನ್ನನ್ನು ಉತ್ಕೃಷ್ಟನನ್ನಾಗಿಸು. ನನಗೆ ಜೀವನಾಧಾರ ನೀಡು, ನನ್ನನ್ನು ಸನ್ಮಾರ್ಗದಲ್ಲಿರಿಸು. ನನಗೆ ಆರೋಗ್ಯ ನೀಡು) ಎಂದು ಹೇಳಬೇಕು. ಬಳಿಕ ಇನ್ನೊಂದು ಸಲ ಮುಂಚಿನಂತೆ ಸುಜೂದ್ ಮಾಡಬೇಕು. ಎರಡನೇ ಸುಜೂದಿನಿಂದ ಏಳುವುದರೊಂದಿಗೆ ರಕಅತ್ ಪೂರ್ತಿಗೊಳ್ಳುತ್ತದೆ. ರುಕೂಅ್ ಸುಜೂದ್‌ಗಳಿಗೆ ಹೋಗುವಾಗಲೂ ಸುಜೂದಿನಿಂದ ಏಳುವಾಗಲೂ اَللّٰهُ اَكْبَرْ ಎಂದು ಹೇಳುವುದು ಸುನ್ನತ್ತಾಗಿದೆ.

ಮೊದಲ ತಶಹ್ಹುದ್ ಮುಗಿಸಿದರೆ- اَللّٰهُ اَكْبَرْ ಎಂದು ಹೇಳುತ್ತಾ ಎದ್ದೇಳುವುದು, ತಕ್‌ಬೀರತುಲ್ ಇಹ್‌ರಾಮ್ ಹೇಳುವಾಗ ಮಾಡುವಂತೆ ಎರಡೂ ಮುಂಗೈಗಳನ್ನು ಎದೆಕೊರಳಿನವರೆಗೆ ಎತ್ತಿದ ಬಳಿಕ ಕೈ ಕೆಳಗೆ ತಂದು ಕಟ್ಟಬೇಕು. ರುಕೂಅ್, ಸುಜೂದ್, ಇಅ್‌ತಿದಾಲ್‌ಗಳಲ್ಲಿ ಮತ್ತು ಎರಡು ಸುಜೂದ್‌ಗಳ ಮಧ್ಯೆ ಕುಳಿತುಕೊಳ್ಳುವುದರಲ್ಲಿ ಸ್ವಲ್ಪ ವಿರಮಿಸಬೇಕು. ಇದನ್ನು طمأنينة ಎಂದು ಹೇಳುವರು.

ಮೇಲೆ ವಿವರಿಸಿದ ರುಕೂಅ್, ಇಅ್‌ತಿದಾಲ್, ಎರಡು ಸುಜೂದ್, ಸುಜೂದಿನ ನಡುವೆ ಕುಳಿತುಕೊಳ್ಳುವುದು, ಇತ್ಯಾದಿಗಳ ಮಧ್ಯದಲ್ಲಿ ತಂಗುವುದು ಇವೆಲ್ಲವೂ ಫರ್ಳ್‌ಗಳಾಗಿವೆ. ಉಳಿದವೆಲ್ಲ ಸುನ್ನತ್‌ಗಳಾಗಿವೆ.

ನೀವು ಮಾಡಿರಿ:

1) ನಮಾಝಿನ ದುಆಗಳನ್ನು ಗಟ್ಟಿಯಾಗಿ ಹೇಳಿ ಸರಿಯಾದ ರೀತಿಯಲ್ಲಿ ನಮಾಝ್ ಮಾಡಿ ತೋರಿಸಿರಿ.

ಅಭ್ಯಾಸ:

A. ಅರ್ಥ ಬರೆಯಿರಿ.

1) سَمِعَ اللّٰهُ لِمَنْ حَمِدَهُ،

2) سُبْحَانَ رَبِّىَ الْاَعْلٰى

3) رَبَّنَا لَكَ الْحَمْدُ،

4) وَاهْدِنِىْ وَعَافِنِىْ

5) طمأنينة

B. ಉತ್ತರ ಬರೆಯಿರಿ.

1) ರುಕೂಅ್, ಸುಜೂದಿನಲ್ಲಿ ಹೇಳುವ ಪ್ರಾರ್ಥನೆಗಳಾವುವು?

2) ಸುಜೂದ್ ಹೇಗೆ ಮಾಡುವುದು? ವಿವರಿಸಿರಿ.

❊❊❊

ಪಾಠ: 9

ಮೊದಲ ಅತ್ತಹಿಯ್ಯಾತ್

اَلتَّشَهُّدُ الْاَوَّلُ

ಎರಡು ಸುಜೂದ್ ಮಾಡಿದಾಗ ನಮಾಝ್‌ನಲ್ಲಿ ಒಂದು ರಕಅತ್ ಪೂರ್ತಿಯಾಯಿತು. ಮೂರು ಅಥವಾ ನಾಲ್ಕು ರಕಅತ್‌ಗಳಿರುವ ನಮಾಝಿನಲ್ಲಿ ಎರಡನೇ ರಕಅತ್ತಿನ ಕೊನೆಗೆ ಕುಳಿತು 'ತಶಹ್ಹುದ್' ಮತ್ತು ಸ್ವಲಾತ್ ಹೇಳಬೇಕು. ಇದು ಪ್ರಬಲ ಸುನ್ನತ್ ಆಗಿದೆ. ಇದನ್ನು ಒಂದನೇ ತಶಹ್ಹುದ್ ಎಂದು ಹೇಳುವುದು. ಸುಜೂದ್‌ಗಳ ಎಡೆಯಲ್ಲಿ ಕುಳಿತುಕೊಳ್ಳುವ ರೀತಿಯಲ್ಲಿಯೇ ಒಂದನೇ ತಶಹ್ಹುದಿಗೂ ಕುಳಿತುಕೊಳ್ಳಬೇಕು.

ತಶಹ್ಹುದ್:

اَلتَّحِيَّاتُ الْمُبَارَكَاتُ الصَّلَوَاتُ الطَّيِّبَاتُ لِلّٰهِ اَلسَّلَامُ عَلَيْكَ اَيُّهَا النَّبِيُّ وَرَحْمَةُ اللّٰهِ وَبَرَكَاتُهُ اَلسَّلَامُ عَلَيْنَا وَعَلٰى عِبَادِ اللّٰهِ الصَّالِحِيْنَ ـ اَشْهَدُ اَنْ لَّآ اِلٰهَ اِلَّا اللّٰهُ وَاَشْهَدُ اَنَّ مُحَمَّدًا رَسُولُ اللّٰهِ

ಅರ್ಥ:

ಎಲ್ಲ ಪ್ರಶಂಸೆಗಳು,	اَلتَّحِيَّاتُ
ಅನುಗ್ರಹೀತ ಕರ್ಮಗಳು	اَلْمُبَارَكَاتُ
ನಮಾಝ್‌ಗಳು	اَلصَّلَوَاتُ

ಸತ್ಕರ್ಮಗಳು	الطَّيِّبَاتُ
ಅಲ್ಲಾಹನಿಗಾಗಿದೆ.	لِلّٰهِ
ಪ್ರವಾದಿಯವರೇ! ದೇವನ ರಕ್ಷಣೆಯೂ ಶಾಂತಿಯೂ ನಿಮ್ಮ ಮೇಲಿರಲಿ.	اَلسَّلَامُ عَلَيْكَ اَيُّهَا النَّبِيُّ
ಅಲ್ಲಾಹನ ಕರುಣೆಯೂ ಅನುಗ್ರಹವೂ	وَرَحْمَةُ اللّٰهِ وَبَرَكَاتُهُ
ದೇವನ ರಕ್ಷಣೆಯೂ ಶಾಂತಿಯೂ ನಮಗೂ ಉಂಟಾಗಲಿ.	اَلسَّلَامُ عَلَيْنَا
ಅಲ್ಲಾಹನ ಸದಾಚಾರಿಗಳಾದ ದಾಸರಿಗೂ.	وَعَلٰى عِبَادِ اللّٰهِ الصَّالِحِيْنَ
ಅಲ್ಲಾಹನಲ್ಲದೆ ಯಾವ ಆರಾಧ್ಯನೂ ಇಲ್ಲವೆಂದು ನಾನು ಸಾಕ್ಷ್ಯ ವಹಿಸುವೆನು.	اَشْهَدُ اَنْ لَّآ اِلٰهَ اِلَّا اللّٰهُ
ಮತ್ತು ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರೆಂದೂ ನಾನು ಸಾಕ್ಷ್ಯವಹಿಸುತ್ತೇನೆ.	وَاَشْهَدُ اَنَّ مُحَمَّدًا رَسُولُ اللّٰهِ

اَللّٰهُمَّ صَلِّ عَلٰى مُحَمَّدٍ وَعَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيمَ وَعَلٰى
اٰلِ اِبْرَاهِيمَ وَبَارِكْ عَلٰى مُحَمَّدٍ وَعَلٰى اٰلِ مُحَمَّدٍ كَمَا بَارَكْتَ
عَلٰى اِبْرَاهِيمَ وَعَلٰى اٰلِ اِبْرَاهِيمَ فِى الْعَالَمِينَ اِنَّكَ حَمِيدٌ مَّجِيدٌ۔

ಅರ್ಥ:

ಅಲ್ಲಾಹನೇ =	اَللّٰهُمَّ
ಪ್ರವಾದಿ ಮುಹಮ್ಮದ್‌ರಿಗೆ(ಸ) ನೀನು ಒಳಿತನ್ನು ಮಾಡು =	صَلِّ عَلٰى مُحَمَّدٍ

ಪ್ರವಾದಿ ಮುಹಮ್ಮದ್‌ರ(ಸ) ಕುಟುಂಬಕ್ಕೂ = وَعَلَى آلِ مُحَمَّدٍ

ಪ್ರವಾದಿ ಇಬ್ರಾಹೀಮರಿಗೆ ನೀನು ಒಳಿತನ್ನು ಮಾಡಿರುವಂತೆ = كَمَا صَلَّيْتَ عَلَى اِبْرَاهِيمَ

ಪ್ರವಾದಿ ಇಬ್ರಾಹೀಮರ ಕುಟುಂಬಕ್ಕೂ = وَعَلَى آلِ اِبْرَاهِيمَ

ಪ್ರವಾದಿ ಮುಹಮ್ಮದ್‌ರ(ಸ) ಮೇಲೆ ಅನುಗ್ರಹವನ್ನು ವರ್ಷಿಸು = وَبَارِكْ عَلَى مُحَمَّدٍ

ಪ್ರವಾದಿ ಮುಹಮ್ಮದ್‌ರ(ಸ) ಕುಟುಂಬಕ್ಕೂ = وَعَلَى آلِ مُحَمَّدٍ

ಪ್ರವಾದಿ ಇಬ್ರಾಹೀಮರಿಗೆ ನೀನು ಅನುಗ್ರಹ ನೀಡಿರುವಂತೆ = كَمَا بَارَكْتَ عَلَى اِبْرَاهِيمَ

ಪ್ರವಾದಿ ಇಬ್ರಾಹೀಮರ ಕುಟುಂಬಕ್ಕೂ = وَعَلَى آلِ اِبْرَاهِيمَ

ನೀನು ಸರ್ವಲೋಕದವರಿಂದಲೂ ಸ್ತುತಿಸಲ್ಪಟ್ಟವನೂ ಶ್ರೇಷ್ಠನೂ ಆಗಿರುವಿ. فِى الْعَالَمِينَ اِنَّكَ حَمِيدٌ مَّجِيدٌ

ನಾವು ಏನು ಕಲಿತೆವು?

1) ಎರಡಕ್ಕಿಂತ ಹೆಚ್ಚು ರಕಅತಿರುವ ನಮಾಝ್‌ಗಳಲ್ಲಿ ಎರಡನೆ ರಕಅತಿನ ಕೊನೆಯಲ್ಲಿ ತಶಹ್ಹುದ್ ಮತ್ತು ಸ್ವಲಾತ್ ಹೇಳಬೇಕು.

ಅಭ್ಯಾಸ:

1) ತಶಹ್ಹುದ್ ಮತ್ತು ಸ್ವಲಾತ್‌ಗಳನ್ನು ಅರ್ಥ ಸಹಿತ ಕಂಠಪಾಠ ಮಾಡಿರಿ.

❋❋❋

ಪಾಠ: 10

ಕೊನೆಯ ಅತ್ತಹಿಯ್ಯಾತ್

اَلتَّشَهُّدُ الْاَخِير

ನಮಾಝ್‌ನ ಕೊನೆಯ ರಕಅತಿನ ಸುಜೂದ್ ಮುಗಿದರೆ ತಶಹ್ಹುದ್‌ಗಾಗಿ ಕುಳಿತುಕೊಳ್ಳುವುದೂ ತಶಹ್ಹುದ್ ಮತ್ತು ಸ್ವಲಾತ್‌ಗಳನ್ನು ಹೇಳುವುದು ಕಡ್ಡಾಯವಾಗಿದೆ. ಕೊನೆಯ ತಶಹ್ಹುದ್‌ಗೆ ಕುಳಿತುಕೊಳ್ಳುವಾಗ ಬಲಕಾಲ ಬೆರಳುಗಳ ಒಳಭಾಗ ನೆಲಕ್ಕೆ ತಾಗುವಂತೆ ಮೊಣಕಾಲನ್ನು ಎತ್ತಿ ಇಡಬೇಕು. ಎಡಕಾಲಿನ ಪಾದವನ್ನು ಅದರ ಎಡೆಯಿಂದ ಹೊರಕ್ಕೆ ಇಡಬೇಕು.

ಕೈಗಳನ್ನು ಮೊಣಕಾಲಿನ ಮೇಲೆ ಬಿಡಿಸಿಡಬೇಕು. ಬಲಗೈಯ ತೋರು ಬೆರಳನ್ನು ಉದ್ದವಾಗಿರಿಸಿ ಉಳಿದ ಬೆರಳುಗಳನ್ನು ಮಡಚಿಡಬೇಕು. ತಶಹ್ಹುದ್‌ನಲ್ಲಿ اَشْهَدُ اَنْ لَّآ اِلٰهَ اِلَّا اللّٰهُ ಎಂದು ಹೇಳುವಾಗ ಹೀಗೆ ಮಾಡುವುದು ಸುನ್ನತ್ತಾಗಿದೆ. ಅವಸಾನದ ಕುಳಿತುಕೊಳ್ಳುವುದರಲ್ಲಿ ತಶಹ್ಹುದ್ ಮತ್ತು ಸ್ವಲಾತ್ ಮುಗಿದರೆ ಕೆಳಗೆ ಕೊಟ್ಟಿರುವ ದುಆ ಹೇಳಬೇಕು.

اَللّٰهُمَّ اغْفِرْلِى مَا قَدَّمْتُ وَمَا اَخَّرْتُ وَمَا اَسْرَرْتُ وَمَآ اَعْلَنْتُ وَمَا اُسْرَفْتُ وَمَآ اَنْتَ اَعْلَمُ بِهِ مِنِّى۔ اَنَّكَ اَنْتَ الْمُقَدِّمُ وَ اَنْتَ الْمُؤَخِّرُ لَآاِلٰهَ اِلَّا اَنْتَ.

اَللّٰهُمَّ اِنِّى اَعُوذُ بِكَ مِنْ عَذَابِ الْقَبْرِ وَمِنْ عَذَابِ النَّارِ وَمِنْ فِتْنَةِ الْمَحْيَا وَالْمَمَاتِ وَمِنْ فِتْنَةِ الْمَسِيحِ الدَّجَّالِ

ಅರ್ಥ:

اَللّٰهُمَّ اغْفِرْلِى	ಅಲ್ಲಾಹನೇ ನೀನು ಕ್ಷಮೆ ನೀಡು
مَا قَدَّمْتُ	ನಾನು ಮಾಡಿದ್ದು
وَمَا اَخَّرْتُ	ಮಾಡದೇ ದೂರವಿಟ್ಟದ್ದು
وَمَا اَسْرَرْتُ	ನಾನು ರಹಸ್ಯವಾಗಿ ಮಾಡಿದ್ದು
وَمَآ اَعْلَنْتُ	ನಾನು ಬಹಿರಂಗವಾಗಿ ಮಾಡಿದ್ದು
وَمَا أَسْرَفْتُ	ನಾನು ಮಿತಿ ಮೀರಿ ವರ್ತಿಸಿದ್ದು
وَمَآ اَنْتَ اَعْلَمُ بِهِ مِنِّى	ನನಗಿಂತ ಹೆಚ್ಚು ನೀನು ತಿಳಿದಿರುವೆ ಎಲ್ಲವನ್ನೂ
أَنَّكَ اَنْتَ الْمُقَدِّمُ	ನಿಶ್ಚಯವಾಗಿಯೂ ನೀನೇ ಆರಂಭಿಸುವವನು
وَاَنْتَ الْمُؤَخِّرُ	ವಿಳಂಬಿಸುವವನು ನೀನೇ
لَآاِلٰهَ اِلَّآ اَنْتَ	ನೀನಲ್ಲದೆ ಆರಾಧ್ಯನಿಲ್ಲ
اَللّٰهُمَّ اِنِّى اَعُوذُ بِكَ	ಅಲ್ಲಾಹನೇ ನಾನು ನಿನ್ನಲ್ಲಿ ಅಭಯ ಯಾಚಿಸುವೆನು
مِنْ عَذَابِ الْقَبْرِ	ಗೋರಿಯ ಶಿಕ್ಷೆಯಿಂದ
وَمِنْ عَذَابِ النَّارِ	ನರಕ ಶಿಕ್ಷೆಯಿಂದ
وَمِنْ فِتْنَةِ الْمَحْيَا وَالْمَمَاتِ	ಜೀವನ ಮರಣಗಳ ವಿನಾಶಗಳಿಂದ
وَمِنْ فِتْنَةِ الْمَسِيحِ الدَّجَّالِ	ಮಸೀಹುದ್ದಜ್ಜಾಲನ ಕ್ಷೋಭೆಯಿಂದ

ದುಆ ಮುಗಿದೊಡನೆ اَلسَّلَامُ عَلَيْكُمْ 'ಅಸ್ಸಲಾಮು ಅಲೈಕುಮ್' ಎಂದು ಹೇಳಿ ಬಲಭಾಗಕ್ಕೂ ಇನ್ನೊಮ್ಮೆ اَلسَّلَامُ عَلَيْكُمْ 'ಅಸ್ಸಲಾಮು ಅಲೈಕುಮ್' ಎಂದು ಹೇಳಿ ಎಡಭಾಗಕ್ಕೂ ಮುಖ ತಿರುಗಿಸುವುದರೊಂದಿಗೆ ನಮಾಝ್ ಪೂರ್ತಿಯಾಯಿತು.

ಇದರಲ್ಲಿ اَلسَّلَامُ عَلَيْكُمْ وَرَحْمَةُ اللّٰهِ 'ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್' ಎಂದು ಹೇಳುವುದು ಸುನ್ನತ್ತಾಗಿದೆ.

ನಾವು ಏನು ಕಲಿತೆವು?

1) ನಮಾಝಿನ ಕೊನೆಯ ರಕಅತಿನಲ್ಲಿ ತಶಹ್ಹುದ್, ಸ್ವಲಾತ್ ಮತ್ತು ದುಆವನ್ನು ಹೇಳಬೇಕು.

2) ನಮಾಝಿನಿಂದ ವಿರಮಿಸುವಾಗ اَلسَّلَامُ عَلَيْكُمْ وَرَحْمَةُ اللّٰهِ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ಎಂದು ಸಲಾಮ್ ಹೇಳುವುದು.

ಅಭ್ಯಾಸ:

ಕೊನೆಯ ಅತ್ತಹಿಯ್ಯಾತನ್ನು ಅರ್ಥ ಸಹಿತ ಕಂಠಪಾಠ ಮಾಡಿರಿ.

❋❋❋

ಪಾಠ: 11

ದಿಕ್ರ್ ಮತ್ತು ದುಆಗಳು

الذِّكْرُ وَالدُّعَاء

ನಮಾಝ್ ಮಾಡಿ ಆದ ಮೇಲೆ ಅಲ್ಲಿಯೇ ಕುಳಿತು ದಿಕ್ರ್ ದುಆಗಳನ್ನು ಹೇಳುವುದು ಉತ್ತಮ. ಹೃದಯಂಗಮವಾಗಿ ಅಲ್ಲಾಹನನ್ನು ಸ್ಮರಿಸುವುದು, ಅವನನ್ನು ಸ್ತುತಿಸುವುದು, ಅವನ ಪರಿಶುದ್ಧತೆಯನ್ನು ಪ್ರಶಂಸಿಸಿ ಕೀರ್ತನೆ ಮಾಡುವುದು, ದಿಕ್ರ್ ಹೇಳುವುದರ ಉದ್ದೇಶವಾಗಿದೆ. ದಿಕ್ರ್‌ಗಳು ಅಂತ್ಯ ದಿವಸದ ವಿಚಾರಣೆಯ ವೇಳೆ ತಕ್ಕಡಿಯಲ್ಲಿ ಒಳಿತಿನ ತಟ್ಟೆಯ ತೂಕ ವೃದ್ಧಿಸುವಂಥದ್ದು ಮತ್ತು ಅಲ್ಲಾಹನಿಗೆ ಹೆಚ್ಚು ಇಷ್ಟವುಳ್ಳದ್ದು ಆಗಿದೆ. ಭಯಭಕ್ತಿಯಿಂದ ಏಕಾಗ್ರತೆಯಲ್ಲಿ ದಿಕ್ರ್ ಹೇಳುವವರಿಗೆ ಅಲ್ಲಾಹನ ಸಹಾಯ ದೊರೆಯುವುದು. ಅಲ್ಲಾಹನನ್ನು ಸ್ಮರಿಸುವವರನ್ನು ಅಲ್ಲಾಹನು ಸ್ಮರಿಸುತ್ತಾನೆ. ಫರ್ಝ್ (ಕಡ್ಡಾಯ) ನಮಾಝಿನ ನಂತರ ದಿಕ್ರ್ ಹೇಳುವುದು, ಪ್ರವಾದಿವರ್ಯರ(ಸ) ಮೇಲೆ ಸ್ವಲಾತ್ ಹೇಳುವುದು ಉತ್ತಮವಾಗಿದೆ.

ನಮಾಝಿನ ನಂತರದ ಕೆಲವು ದಿಕ್ರ್‌ಗಳನ್ನು ಕೆಳಗೆ ನೀಡಲಾಗಿದೆ. ನಮಾಝ್ ಮುಗಿದೊಡನೆ أَسْتَغْفِرُ اللّٰه 'ಅಸ್ತಗ್‌ಫಿರುಲ್ಲಾಹ್' ಎಂದು ಮೂರು ಸಲ ಹೇಳಬೇಕು. ಆಮೇಲೆ ಇಲ್ಲಿ ಕೊಟ್ಟಿರುವಂತೆ ಹೇಳಿರಿ:

اَللّٰهُمَّ اَنْتَ السَّلَامُ وَمِنْكَ السَّلَامُ، تَبَارَكْتَ يَاذَا الْجَلَالِ وَالْاِكْرَامِ
لَآ اِلٰهَ اِلَّا اللّٰهُ وَحْدَهُ لَا شَرِيْكَ لَهُ لَهُ الْمُلْكُ وَلَهُ الْحَمْدُ وَهُوَ عَلٰى
كُلِّ شَيْءٍ قَدِيْرٌ۔ اَللّٰهُمَّ لَا مَانِعَ لِمَآ اَعْطَيْتَ وَلَا مُعْطِيَ لِمَا مَنَعْتَ وَلَا
يَنْفَعُ ذَاالْجَدِّ مِنْكَ الْجَدُّ

ಅರ್ಥ:

ಅಲ್ಲಾಹನೇ ನೀನು ಶಾಂತಿಯಾಗಿರುವೆ	اَللّٰهُمَّ اَنْتَ السَّلَامُ
ನಿನ್ನಿಂದ ಶಾಂತಿಯಿದೆ	وَمِنْكَ السَّلَامُ
ಮಹತ್ವ ಗೌರವಗಳಿರುವವನು	، تَبَارَكْتَ يَاذَا الْجَلَالِ وَالْاِكْرَامِ
ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ	لَا اِلٰهَ اِلَّا اللّٰهُ
ಅವನು ಏಕನು	وَحْدَهُ
ಅವನಿಗೆ ಭಾಗೀದಾರರಿಲ್ಲ	لَا شَرِيْكَ لَهُ
ಆಧಿಪತ್ಯ ಅವನದ್ದಾಗಿದೆ	لَهُ الْمُلْكُ
ಅವನಿಗೆ ಸ್ತುತಿ	وَلَهُ الْحَمْدُ
ಅವನು ಎಲ್ಲ ವಿಷಯಗಳ ಸಾಮರ್ಥ್ಯವುಳ್ಳವನು	وَهُوَ عَلٰى كُلِّ شَيْءٍ قَدِيْرٌ
ಅಲ್ಲಾಹನೇ	اَللّٰهُمَّ
ನೀನು ಕೊಟ್ಟಿದ್ದನ್ನು ತಡೆಹಿಡಿಯುವವರಿಲ್ಲ	لَا مَانِعَ لِمَا اَعْطَيْتَ
ನೀನು ತಡೆ ಹಿಡಿದದ್ದನ್ನು ಕೊಡುವವನೂ ಇಲ್ಲ	وَلَا مُعْطِيَ لِمَا مَنَعْتَ
ಶ್ರೀಮಂತಿಕೆ ಇರುವವನಿಗೆ ಪ್ರಯೋಜನವಾಗುವುದಿಲ್ಲ	وَلَا يَنْفَعُ ذَالْجَدِّ
ನಿನ್ನಿಂದ ಪಾರಾಗಲು ಶ್ರೀಮಂತಿಕೆ	مِنْكَ الْجَدُّ

ಇದಾದ ಮೇಲೆ

سُبْحَانَ اللّٰه	ಸುಬ್‌ಹಾನಲ್ಲಾಹ್
اَلْحَمْدُ لِلّٰهِ	ಅಲ್‌ಹಮ್ದುಲಿಲ್ಲಾಹ್
اَللّٰهُ اَكْبَرُ	ಅಲ್ಲಾಹು ಅಕ್ಬರ್

ಎಂಬ ದಿಕ್ರ್‌ಗಳನ್ನು ತಲಾ 33 ಸಲ ಹೇಳಬೇಕು. ಆಮೇಲೆ ಪ್ರವಾದಿಯವರ(ಸ) ಹೆಸರಲ್ಲಿ ಸ್ವಲಾತ್, ದುಆವನ್ನೂ ಹೇಳಬೇಕು. ದುಆ ಮಾಡುವಾಗ ಕೈಗಳನ್ನು ಎತ್ತಿ ಹಿಡಿದು ಕಿಬ್ಲಾಕ್ಕೆ ಎದುರಾಗಿ ಕುಳಿತುಕೊಳ್ಳುವುದು ಸುನ್ನತ್ತಾಗಿದೆ. ನಮಾಝಿನ ನಂತರದ ಪ್ರಾರ್ಥನೆಗೆ ಉತ್ತರ ದೊರಕುವುದೆಂದು ಪ್ರವಾದಿವರ್ಯರು(ಸ) ಪ್ರತ್ಯೇಕವಾಗಿ ಕಲಿಸಿದ್ದಾರೆ. ಕೆಲವು ಪ್ರಾರ್ಥನೆಗಳನ್ನು ಕೆಳಗೆ ನೀಡಲಾಗಿದೆ.

رَبَّنَا فَاغْفِرْ لَنَا ذُنُوبَنَا وَكَفِّرْ عَنَّا سَيِّاٰتِنَا وَتَوَفَّنَا مَعَ الْاَبْرَارِ ﴿١٩٣﴾

(ನಮ್ಮ ಪ್ರಭೂ! ನಮ್ಮಿಂದ ಸಂಭವಿಸಿ ಹೋಗಿದ್ದ ಅಪರಾಧಗಳನ್ನು ಕ್ಷಮಿಸು. ನಮ್ಮಲ್ಲಿರುವ ಕೆಡುಕುಗಳನ್ನು ದೂರೀಕರಿಸು ಮತ್ತು ನಮ್ಮ ಅವಸಾನವನ್ನು ಸಜ್ಜನರೊಂದಿಗೆ ಮಾಡು.)

رَبَّنَا لَا تُزِغْ قُلُوبَنَا بَعْدَ اِذْ هَدَيْتَنَا وَهَبْ لَنَا مِنْ لَّدُنْكَ رَحْمَةً ۚ
اِنَّكَ اَنْتَ الْوَهَّابُ ﴿٨﴾

(ಓ ನಮ್ಮ ಪ್ರಭೂ, ನೀನು ನಮ್ಮನ್ನು ನೇರಮಾರ್ಗದಲ್ಲಿ ಹಾಕಿರುತ್ತ ಪುನಃ ನಮ್ಮ ಮನಸ್ಸುಗಳನ್ನು ದೋಷಗಳಲ್ಲಿ ಸಿಲುಕಿಸಿಬಿಡಬೇಡ. ನೀನು ನಿನ್ನ ಅನುಗ್ರಹ ಭಂಡಾರದಿಂದ ಕೃಪೆಯನ್ನು ನೀಡು. ನೀನೇ ನೈಜ ಮಹಾದಾನಿಯಾಗಿರುತ್ತೀ.)

رَبَّنَا وَاٰتِنَا مَا وَعَدْتَّنَا عَلٰى رُسُلِكَ وَلَا تُخْزِنَا يَوْمَ الْقِيٰمَةِ ۗ اِنَّكَ لَا تُخْلِفُ الْمِيْعَادَ ﴿١٩٤﴾

(ಓ ನಮ್ಮ ಪ್ರಭೂ, ನೀನು ನಿನ್ನ ಸಂದೇಶವಾಹಕರ ಮೂಲಕ ಮಾಡಿರುವ ವಾಗ್ದಾನಗಳನ್ನು ನಮಗೆ ನೆರವೇರಿಸಿಕೊಡು ಮತ್ತು ಪುನರುತ್ಥಾನ ದಿನದಂದು ನಮ್ಮನ್ನು ಅವಮಾನಕ್ಕೊಳಪಡಿಸಬೇಡ. ನಿಶ್ಚಯವಾಗಿಯೂ ನೀನು ನಿನ್ನ ವಾಗ್ದಾನಕ್ಕೆ ವ್ಯತಿರಿಕ್ತವಾಗಿ ನಡೆಯುವವನಲ್ಲ.)

رَبَّنَا هَبْ لَنَا مِنْ اَزْوَاجِنَا وَذُرِّيّٰتِنَا قُرَّةَ اَعْيُنٍ وَّاجْعَلْنَا
لِلْمُتَّقِيْنَ اِمَامًا ﴿٧٤﴾

(ನಮ್ಮ ಪ್ರಭೂ! ನಮ್ಮ ಪತ್ನಿಯರಿಂದಲೂ ಮಕ್ಕಳಿಂದಲೂ ನಮ್ಮ ಕಣ್ಮನಗಳನ್ನು ತಣಿಸು ಮತ್ತು ನಮ್ಮನ್ನು ಧರ್ಮನಿಷ್ಠರ ನಾಯಕರಾಗಿ ಮಾಡು.)

رَبَّنَا اصْرِفْ عَنَّا عَذَابَ جَهَنَّمَ ۖ إِنَّ عَذَابَهَا كَانَ
غَرَامًا ﴿٦٥﴾ إِنَّهَا سَاءَتْ مُسْتَقَرًّا وَمُقَامًا ﴿٦٦﴾

(ನಮ್ಮ ಪ್ರಭೂ! ನಮ್ಮನ್ನು ನರಕದ ಯಾತನೆಯಿಂದ ರಕ್ಷಿಸು. ಅದರ ಯಾತನೆಯಂತೂ ಪ್ರಾಣಾಂತಿಕವಾಗಿದೆ. ಅದು ಅತ್ಯಂತ ನಿಕೃಷ್ಟ ನೆಲೆ ಮತ್ತು ಸ್ಥಾನವಾಗಿರುತ್ತದೆ.)

رَبَّنَا اغْفِرْ لَنَا وَلِإِخْوَانِنَا الَّذِينَ سَبَقُونَا بِالْإِيمَانِ وَلَا تَجْعَلْ فِي قُلُوبِنَا غِلًّا
لِّلَّذِينَ آمَنُوا رَبَّنَا إِنَّكَ رَءُوفٌ رَّحِيمٌ ﴿١٠﴾

(ನಮ್ಮ ಪ್ರಭೂ! ನಮ್ಮನ್ನೂ ನಮಗಿಂತ ಮುಂಚೆ ಸತ್ಯವಿಶ್ವಾಸ ಸ್ವೀಕಾರ ಮಾಡಿದ್ದ ನಮ್ಮೆಲ್ಲ ಸಹೋದರರನ್ನೂ ಕ್ಷಮಿಸಿ ಬಿಡು ಮತ್ತು ನಮ್ಮ ಮನಗಳಲ್ಲಿ ಸತ್ಯವಿಶ್ವಾಸಿಗಳ ಬಗ್ಗೆ ಯಾವುದೇ ಹಗೆತನವನ್ನಿರಿಸದಿರು. ನಮ್ಮ ಪ್ರಭೂ, ನೀನು ಮಹಾ ವಾತ್ಸಲ್ಯಪೂರ್ಣನೂ ಕರುಣಾನಿಧಿಯೂ ಆಗಿರುವೆ.)

رَبَّنَا تَقَبَّلْ مِنَّا ۖ إِنَّكَ أَنتَ السَّمِيعُ الْعَلِيمُ ﴿١٢٧﴾ وَتُبْ عَلَيْنَا ۖ إِنَّكَ أَنتَ
التَّوَّابُ الرَّحِيمُ ﴿١٢٨﴾

(ಓ ನಮ್ಮ ಪ್ರಭೂ! ನಮ್ಮಿಂದ ಈ ಸೇವೆಯನ್ನು ಸ್ವೀಕರಿಸು; ನಿಶ್ಚಯವಾಗಿಯೂ ನೀನು ಎಲ್ಲವನ್ನೂ ಆಲಿಸುವವನೂ ಎಲ್ಲವನ್ನೂ ತಿಳಿದವನೂ ಆಗಿರುತ್ತೀ. ನಮ್ಮ ಅಪರಾಧಗಳನ್ನು ಕ್ಷಮಿಸು. ನೀನು ಮಹಾ ಕ್ಷಮಾದಾನಿಯೂ ಕರುಣಾನಿಧಿಯೂ ಆಗಿರುತ್ತೀಯೆ.)

رَبَّنَا لَا تُؤَاخِذْنَا إِن نَّسِينَا أَوْ أَخْطَأْنَا ۚ رَبَّنَا وَلَا تَحْمِلْ عَلَيْنَا إِصْرًا
كَمَا حَمَلْتَهُ عَلَى الَّذِينَ مِن قَبْلِنَا ۚ رَبَّنَا وَلَا تُحَمِّلْنَا مَا لَا طَاقَةَ
لَنَا بِهِ ۖ وَاعْفُ عَنَّا وَاغْفِرْ لَنَا وَارْحَمْنَا ۚ أَنتَ مَوْلَانَا
فَانصُرْنَا عَلَى الْقَوْمِ الْكَافِرِينَ ﴿٢٨٦﴾

(ಓ ನಮ್ಮ ಪ್ರಭೂ, ನಮ್ಮಿಂದ ಪ್ರಮಾದವಶಾತ್ ಅಪರಾಧಗಳಾಗಿಬಿಟ್ಟರೆ ಅವುಗಳಿಗಾಗಿ ನಮ್ಮನ್ನು ಹಿಡಿಯಬೇಡ. ಪ್ರಭೂ, ನಮ್ಮ ಪೂರ್ವಿಕರ ಮೇಲೆ

ಹೊರಿಸಿದಂತಹ ಹೊರೆಯನ್ನು ನಮ್ಮ ಮೇಲೆ ಹೊರಿಸಬೇಡ. ಓ ನಮ್ಮ ಪ್ರಭೂ, ನಮ್ಮಿಂದ ಹೊರಲು ಸಾಧ್ಯವಾಗದ ಹೊರೆಯನ್ನು ನಮ್ಮ ಮೇಲೆ ಹೊರಿಸಬೇಡ. ನಮ್ಮ ಪಾಪಗಳನ್ನು ಪರಿಹರಿಸು, ನಮ್ಮನ್ನು ಕ್ಷಮಿಸು, ನಮ್ಮ ಮೇಲೆ ಕೃಪೆದೋರು. ನೀನೇ ನಮ್ಮ ಒಡೆಯ. ಸತ್ಯನಿಷೇಧಿಗಳ ಎದುರು ನಮಗೆ ಸಹಾಯ ಮಾಡು.)

رَبَّنَآ اٰتِنَا فِى الدُّنْيَا حَسَنَةً وَّفِى الْاٰخِرَةِ حَسَنَةً وَّقِنَا عَذَابَ النَّارِ ﴿٢٠١﴾

(ಓ ನಮ್ಮ ಪ್ರಭೂ, ನಮಗೆ ಇಹಲೋಕದಲ್ಲಿಯೂ ಒಳಿತನ್ನು ದಯಪಾಲಿಸು ಪರಲೋಕದಲ್ಲಿಯೂ ಒಳಿತನ್ನು ದಯಪಾಲಿಸು ಮತ್ತು ನಮ್ಮನ್ನು ಅಗ್ನಿಯಾತನೆಯಿಂದ ರಕ್ಷಿಸು.)

اَللّٰهُمَّ اِنِّى أَسْأَلُكَ عِلْمًا نَّافِعًا وَ عَمَلاً مُتَقَبَّلاً وَرِزْقًا حَلاَلاً طَيِّبًا وَ قَلْبًا خَشِعًا

(ಅಲ್ಲಾಹನೇ ಪ್ರಯೋಜನಕಾರಿ ಜ್ಞಾನವನ್ನು ಸ್ವೀಕಾರಾರ್ಹ ಕರ್ಮವನ್ನೂ ಧರ್ಮಸಮ್ಮತವೂ ಶುದ್ಧವೂ ಆದ ಆಹಾರವನ್ನು ಮತ್ತು ಭಕ್ತಿ ತುಂಬಿದ ಹೃದಯವನ್ನು ನಾನು ನಿನ್ನಿಂದ ಬೇಡುತ್ತೇನೆ)

اَللّٰهُمَّ أَرِنِى الْحَقَّ حَقًّا وَارْزُقْنِى اتِّبَاعَهُ وَأَرِنِى الْبَاطِلَا بَاطِلً وَارْزُقْنِى اِجْتِنَا بَهُ

(ಸತ್ಯವನ್ನು ಸತ್ಯವಾಗಿ ನನಗೆ ತೋರಿಸಿಕೊಡು ಮತ್ತು ಅದನ್ನು ಅನುಸರಿಸಲು ಅನುಗ್ರಹಿಸು. ಅಸತ್ಯವನ್ನು ಅಸತ್ಯವಾಗಿ ತೋರಿಸಿಕೊಡು. ಅದರಿಂದ ದೂರ ನಿಲ್ಲಲು ಅನುಗ್ರಹಿಸು)

ನಾವು ಏನು ಕಲಿತೆವು?

1) ನಮಾಝಿನ ಬಳಿಕ ಕೂಡಲೇ ಎದ್ದು ಹೋಗದೇ ಅಲ್ಲಿಯೇ ಕುಳಿತು ದಿಕ್ರ್ ದುಆಗಳನ್ನು ನೆರವೇರಿಸುವುದು.

ಅಭ್ಯಾಸ:

1) ಪ್ರಾರ್ಥನೆಗಳನ್ನು ಅರ್ಥ ಸಹಿತ ಕಂಠಪಾಠ ಮಾಡಿರಿ.

2) ನಮಾಝಿನ ನಂತರದ ದಿಕ್ರ್‌ಗಳನ್ನು ಕಂಠಪಾಠ ಮಾಡಿ.

❋❋❋

ಪಾಠ: 12

ಸಂಘಟಿತ ನಮಾಝ್

صَلَاةُ الْجَمَاعَة

ಓರ್ವ ಅಂಧರು ಪ್ರವಾದಿವರ್ಯರ(ಸ) ಬಳಿಗೆ ಬಂದು 'ಪ್ರವಾದಿವರ್ಯರೇ! ಮಸೀದಿಗೆ ನನ್ನನ್ನು ಕೈಹಿಡಿದು ಕರಕೊಂಡು ಬರಲು ಯಾರೂ ಇಲ್ಲ. ತುಂಬ ಕಷ್ಟಪಟ್ಟು ನಾನು ಜಮಾಅತ್ ನಮಾಝ್‌ನಲ್ಲಿ ಭಾಗವಹಿಸುವುದು. ಆದ್ದರಿಂದ ನನಗೆ ವಿನಾಯಿತಿ ನೀಡುವಿರಾ!' ಎಂದು ವಿನಂತಿಸಿದರು.

ಪ್ರವಾದಿವರ್ಯರು(ಸ) ಕರುಣೆಯಲ್ಲಿ ಕೇಳಿಸಿಕೊಂಡರು. 'ಸರಿ ಹೋಗಿರಿ' ಎಂದು ಆ ವ್ಯಕ್ತಿಯ ಕಷ್ಟ ತಾಪತ್ರಯಗಳ ಮನವರಿಕೆಯಾಗಿ ವಿನಾಯಿತಿ ನೀಡಿದರು. ಆ ವ್ಯಕ್ತಿ ತಿರುಗಿ ಹೋಗುವಾಗ ಪ್ರವಾದಿವರ್ಯರು(ಸ) ಪುನಃ ಕರೆದರು. "ಮಸೀದಿಯಲ್ಲಿ ಕೊಡುವ ಅದಾನ್ ನಿಮಗೆ ಕೇಳಿಸುತ್ತಿದೆಯೇ?" ಎಂದು ಪ್ರವಾದಿವರ್ಯರು(ಸ) ಕೇಳಿದರು. 'ಹೌದು ಕೇಳಿಸುತ್ತಿದೆ.' ಅವರು ಹೇಳಿದರು. "ಹಾಗಾದರೆ ಅದಕ್ಕೆ ಉತ್ತರಿಸಬೇಕು" ಎಂದು ಪ್ರವಾದಿ(ಸ) ಹೇಳಿದರು.

ಮುಸ್ಲಿಮರು ಅವರವರ ಪ್ರದೇಶಗಳಲ್ಲಿ ಐದು ಹೊತ್ತಿನ ಫರ್ಝ್ فرض ನಮಾಝನ್ನು ಜಮಾಅತ್ತಾಗಿ ನಿರ್ವಹಿಸುವುದು ಕಡ್ಡಾಯವಾಗಿದೆ. ಒಬ್ಬ ನಾಯಕ (ಇಮಾಮ್)ನ ಹಿಂದೆ ಒಂದುಗೂಡಿ ಸಂಘಟಿತವಾಗಿ ನಮಾಝ್ ಮಾಡುವುದಕ್ಕೆ صَلَاةُ الْجَمَاعَة ಸ್ವಲಾತುಲ್ ಜಮಾಅತ್ (ಸಂಘಟಿತ ನಮಾಝ್) ಎನ್ನುವುದು. ಮೇಲಿನ ಘಟನೆಯಲ್ಲಿ ಜಮಾಅತ್ತಾಗಿ (ಸಂಘಟಿತವಾಗಿ) ನಮಾಝ್ ಮಾಡುವುದಕ್ಕೆ ಇಸ್ಲಾಮ್ ನೀಡಿದ ಮಹತ್ವವು ವ್ಯಕ್ತವಾಗುತ್ತದೆ.

ನಮಾಝ್‌ನಲ್ಲಿ ನೇತೃತ್ವ ವಹಿಸುವವರಿಗೆ إمام ಎಂದು ಅವರನ್ನು ಅನುಸರಿಸಿ ನಮಾಝ್ ಮಾಡುವವರಿಗೆ مَأْمُوم ಎಂದೂ ಹೇಳುವುದು. ಇಬ್ಬರೇ ಇರುವಾಗ ಒಬ್ಬನು ಇಮಾಮ್ ಆಗಿ ಮತ್ತೊಬ್ಬ ಮಅ್‌ಮೂಮ್ ಆಗಿ ನಮಾಝ್ ಮಾಡಿದರೂ ಅದು ಜಮಾಅತ್ ನಮಾಝ್ ಆಗುತ್ತದೆ.

ಜಮಾಅತ್ ನಮಾಝ್‌ನಲ್ಲಿ ಪಾಲ್ಗೊಳ್ಳುವುದು ಪುಣ್ಯ ಕಾರ್ಯವಾಗಿದೆ. ಅದು ಒಬ್ಬಂಟಿಯಾಗಿ ನಮಾಝ್ ಮಾಡುವುದಕ್ಕಿಂತ ಇಪ್ಪತ್ತೇಳು ಪಟ್ಟು ಶ್ರೇಷ್ಠವಾದುದು.

ಇಮಾಮ್ ಸಲಾಮ್ ಹೇಳಿ ನಮಾಝಿನಿಂದ ವಿರಮಿಸುವ ಮುಂಚೆ ಯಾವ ಸಮಯದಲ್ಲಿ ಬೇಕಿದ್ದರೂ ಇಮಾಮನ್ನು ಅನುಸರಿಸಲು ಆಗುತ್ತದೆ. ಯಾವಾಗ ಅನುಸರಿಸಿದರೂ ಜಮಾಅತಿನಲ್ಲಿ ಸೇರಿದ ಪುಣ್ಯ ಲಭ್ಯವಾಗುತ್ತದೆ. ಆದರೆ ಆರಂಭದಲ್ಲಿ ಇಮಾಮ್ **'ತಕ್‌ಬೀರತುಲ್ ಇಹ್ರಾಮ್'** ಹೇಳುವಾಗಲೇ ಅನುಸರಿಸುವುದು, ನಮಾಝ್ ಪೂರ್ತಿ ಜಮಾಅತಾಗಿ ನಿರ್ವಹಿಸುವುದು ಉತ್ತಮವಾಗಿದೆ.

ಇಮಾಮ್ **'ತಕ್‌ಬೀರತುಲ್ ಇಹ್ರಾಮ್'** ಹೇಳುವ ಮುಂಚೆ ಮಅ್‌ಮೂಮ್ ತಕ್‌ಬೀರತುಲ್ ಇಹ್ರಾಮ್ ಹೇಳಬಾರದು. ಅದೇ ರೀತಿ ಇಮಾಮರ ಚಲನೆಗಿಂತ ಮುಂಚೆ ಯಾವುದನ್ನೂ ಮಾಡಬಾರದು. ನಮಾಝ್ ಆಗುವವರೆಗೂ ಇಮಾಮರ ಚಲನೆಯನ್ನು ಅನುಸರಿಸುತ್ತಿರಬೇಕು. ಇಮಾಮ್ ಮೊದಲ ಸಲಾಮ್ ಹೇಳಿದ ಮೇಲೆಯೇ ಮಅ್‌ಮೂಮ್ ಸಲಾಮ್ ಹೇಳಬೇಕು.

ಜಮಾಅತ್ ನಮಾಝ್‌ನ ನಿಯಮಗಳನ್ನು ಕೆಳಗೆ ಕೊಡಲಾಗಿದೆ.

1. ಇಮಾಮ್‌ನ ಜೊತೆ ಸೇರಿ ನಮಾಝ್ ಮಾಡುವೆನೆಂಬ ನಿಯ್ಯತ್ (ಸಂಕಲ್ಪ) ಇರಬೇಕು.

2. ಮಅ್‌ಮೂಮ್ ಇಮಾಮ್‌ಗಿಂತ ಮುಂದಕ್ಕೆ ನಿಲ್ಲಬಾರದು. ಮಅ್‌ಮೂಮ್ ಒಬ್ಬನೇ ಆಗಿದ್ದರೆ ಇಮಾಮ್‌ರ ಬಲಭಾಗದಲ್ಲಿ ಸ್ವಲ್ಪ ಮಾತ್ರ ಹಿಂದೆ ನಿಲ್ಲುವುದೇ ಉತ್ತಮ. ಆ ಬಳಿಕ ಇನ್ನೊಬ್ಬ ಬಂದರೆ ಆತ ಇಮಾಮ್‌ನ ಹಿಂದೆ ಎಡಭಾಗದಲ್ಲಿ ನಿಂತು ತಕ್‌ಬೀರ್ ಹೇಳಬೇಕು. ಆ ಮೇಲೆ ಇಬ್ಬರೂ ಹಿಂದಕ್ಕೆ ಬಂದು ಇಮಾಮರ ಹಿಂದಿನ ಸಾಲಿನಲ್ಲಿ ನಿಲ್ಲಬೇಕು.

3. ಇಮಾಮ್ ಮತ್ತು ಮಅ್‌ಮೂಮ್ ಒಂದೆಡೆ ಇರಬೇಕು.

4. ಮಅ್‌ಮೂಮಿಗೆ ಇಮಾಮರ ಚಲನೆಗಳನ್ನು ಎದುರಿಗೇ ಕಂಡು ಅಥವಾ ಸದ್ದು ಕೇಳಿ ತಿಳಿಯಲು ಸಾಧ್ಯವಿರಬೇಕು.

5. ಕ್ರಮ ತಪ್ಪದೆ ಇಮಾಮರ ಚಟುವಟಿಕೆಗಳನ್ನು (ಪ್ರವೃತ್ತಿಗಳನ್ನು) ಅನುಸರಿಸಬೇಕು.

6. ಮಅ್‌ಮೂಮ್‌ನ ಚಲನೆ ಇಮಾಮ್‌ರ ಚಲನೆಗಿಂತ ಮುಂಚೆ ಆಗಬಾರದು.

7. ಸಕಾರಣವಿಲ್ಲದೆ ಒಂದಕ್ಕಿಂತ ಹೆಚ್ಚು ಪ್ರವೃತ್ತಿಗಳು ಇಮಾಮರಿಗಿಂತ ಹಿಂದೆ ಆಗದಿರುವುದು. ಉದಾಹರಣೆಗೆ ಇಮಾಮ್ ರುಕೂಅ್ ಇಅ್ತಿದಾಲ್ ಗಳನ್ನು ಮುಗಿಸಿ ಸುಜೂದಿಗೆ ಹೋಗುವಾಗ ಮಅ್ಮೂಮ್ ರುಕೂಅ್ಗೆ ಕೂಡಾ ಬಾಗದೆ ನಿಂತಿರುವುದು. ಯಾವುದೇ ಕಾರಣವಿಲ್ಲದೆ ಹೀಗೆ ಮಾಡಿದರೆ ನಮಾಝ್ ಸಿಂಧುವಾಗುವುದಿಲ್ಲ.

8. ಇಮಾಮ್ ಮಅ್ಮೂಮ್‌ನ ನಮಾಝ್ ಒಂದೇ ತರದ್ದಾಗಿರುವುದು. ಇಬ್ಬರ ನಮಾಝ್‌ನ ರೀತಿಯಲ್ಲಿ ವ್ಯತ್ಯಾಸವಾದರೆ ಚಲನೆಯನ್ನು ಅನುಸರಿಸುವುದು ಸಾಧ್ಯವಾಗದಲ್ಲವೇ? ಉದಾಹರಣೆಗೆ, ಮಯ್ಯಿತ್ ನಮಾಝ್ (ಜನಾಝಾ ನಮಾಝ್) ಮಾಡುವವನನ್ನು ಝುಹರ್ ನಮಾಝ್ ಮಾಡುವವನು ಅನುಸರಿಸುವುದು ಸರಿಯಾಗದು. ನಮಾಝ್ ಮಾಡುವಾಗ ಮೇಲೆ ವಿವರಿಸಿದ ನಿಬಂಧನೆಗಳ ಬಗ್ಗೆ ಎಚ್ಚರವಹಿಸಬೇಕು.

ಇಮಾಮತ್ (الْإِمَامَة)

ಜಮಾಅತ್ ನಮಾಝ್‌ನಲ್ಲಿ ಹೆಚ್ಚು ಕುರ್‌ಆನ್ ತಿಳಿದವರು ಮತ್ತು ಉತ್ತಮವಾಗಿ ಕುರ್‌ಆನ್ ಓದಲು ಬರುವವರು ಇಮಾಮ್ ನಿಲ್ಲಬೇಕು. ಈ ವಿಷಯದಲ್ಲಿ ಎಲ್ಲರೂ ಸಮಾನರಿದ್ದರೆ ಅವರಲ್ಲಿ ಹೆಚ್ಚು ಪ್ರಾಯವಾದ ಹಿರಿಯ ವ್ಯಕ್ತಿ ಇಮಾಮ್ ಆಗಿ ನಿಲ್ಲಬೇಕು. ಇಮಾಮ್‌ನ ಹೊಣೆಗಾರಿಕೆ ನೀಡಿದ ವ್ಯಕ್ತಿ ಇರುವಾಗ ಆತನನ್ನು ಬೇರೆ ನಿಲ್ಲಿಸಿ ಇನ್ನೊಬ್ಬ ಇಮಾಮ್ ಆಗುವುದು ಸರಿಯಲ್ಲ. ಆದರೆ ಅಧಿಕೃತ ಇಮಾಮರ ಅನುಮತಿಯಿಂದ ಇನ್ನೊಬ್ಬ ಇಮಾಮ್ ಆಗಬಹುದಾಗಿದೆ. ವಿವೇಚನ ಸಾಮರ್ಥ್ಯವಿರುವ (ಬುದ್ಧಿಶಕ್ತಿಯಿರುವ) ಮಕ್ಕಳಿಗೂ ಕಣ್ಣು ಕಾಣಿಸದವರಿಗೂ ಇಮಾಮ್ ಆಗಿ ನಿಲ್ಲಬಹುದು.

ದುರ್ಮಾರ್ಗಗಳನ್ನೂ ಅನಾಚಾರಗಳಲ್ಲೂ ತೊಡಗಿಸಿಕೊಂಡವರನ್ನು ಇಮಾಮ್ ಆಗಿ ಮಾಡುವುದು ಒಳ್ಳೆಯದಲ್ಲ. ಸ್ತ್ರೀಗೆ ಸ್ತ್ರೀ ಇಮಾಮ್ ಆಗಿ ನಿಲ್ಲಬಹುದಾಗಿದೆ. ಆದರೆ ಸ್ತ್ರೀ ಪುರುಷರು ಇರುವ ಜಮಾಅತಿನಲ್ಲಿ ಪುರುಷನೇ ಇಮಾಮ್ ಆಗಿರಬೇಕು.

ಜಮಾಅತಾಗಿ ನಮಾಝ್ ಮಾಡುವಾಗ ನಮಾಝ್ ಹೆಚ್ಚು ದೀರ್ಘಗೊಳಿಸದಿರುವುದು ಸುನ್ನತ್ತಾಗಿದೆ. ಒಬ್ಬನೇ ನಮಾಝ್ ಮಾಡುವಾಗ ಸಾಧ್ಯವಿರುವಷ್ಟು ದೀರ್ಘವಾಗಿ ನಮಾಝ್ ಮಾಡುವುದು ಪುಣ್ಯಕಾರ್ಯವಾಗಿದೆ.

ಸಾಲಾಗಿ ನಿಲ್ಲುವುದು (الصَّفّ)

ಜಮಾಅತ್ ನಮಾಝ್ ಆರಂಭವಾಗುವ ಮುಂಚೆಯೇ ಕಾಲುಗಳನ್ನು ನೇರವಾಗಿಸಿ ತೋಳಿಗೆ ತೋಳು ಸೇರಿರುವಂತೆ ಸಾಲನ್ನು ಸರಿಪಡಿಸಬೇಕು. ಒಂದು

ಸಾಲು ಪೂರ್ತಿಯಾದ ಬಳಿಕವೇ ಎರಡನೇ ಸಾಲು ಮಾಡುವುದು. ಎದುರಿನ ಸಾಲಿನ ಹಿಂದೆ ಮಧ್ಯಭಾಗದಿಂದ ಹೊಸ ಸಾಲು ಪ್ರಾರಂಭಿಸುವುದು, ಸಾಲು ಸರಿಯುಂಟೋ ಎಂದು ನೋಡುವುದು ಇಮಾಮರ ಹೊಣೆಯಾಗಿರುವುದು.

ನಿಂತ ಸಾಲುಗಳ ಮಧ್ಯೆ ಅಂತರವಿರಬಾರದು. ನಮಾಝಿಗೆ ಸಾಲಾಗಿ ನಿಲ್ಲುವಾಗ ಎದುರು ಸಾಲಲ್ಲಿ ಪುರುಷರು ಅವರ ಹಿಂದೆ ಮಕ್ಕಳು, ಅತ್ಯಂತ ಕೊನೆಯಲ್ಲಿ ಸ್ತ್ರೀಯರು ಎಂಬ ಕ್ರಮವನ್ನು ಪಾಲಿಸಬೇಕು. ಪ್ರವಾದಿವರ್ಯರ(ಸ) ಕಾಲದಲ್ಲಿ 'ಮಸ್ಜಿದುನ್ನಬವಿ'ಯಲ್ಲಿ ಹಾಗೆ ನಿಲ್ಲುತ್ತಿದ್ದರು. ಈ ಕಾಲದ ಮಸೀದಿಗಳಲ್ಲಿ ಸ್ತ್ರೀಯರ ನಮಾಝಿಗೆಂದು ಪ್ರತ್ಯೇಕ ಸ್ಥಳದ ಏರ್ಪಾಡು ಮಾಡಲಾಗುತ್ತದೆ. ಹಾಗಿರುವುದಾದರೆ ಅಲ್ಲಿ ಮಹಿಳೆಯರು ನಿಲ್ಲಬಹುದು.

ನಾವು ಏನು ಕಲಿತೆವು?

1) ಮುಸ್ಲಿಮರು ವಾಸಿಸುವ ಪ್ರದೇಶದಲ್ಲಿ ಐದು ಹೊತ್ತಿನ ನಮಾಝ್ ಜಮಾಅತಾಗಿ ನಿರ್ವಹಿಸುವುದು ಕಡ್ಡಾಯ.

2) ಜಮಾಅತ್ ನಮಾಝ್‌ಗೆ ಒಬ್ಬಂಟಿಯಾಗಿ ಮಾಡುವ ನಮಾಝ್‌ಗಿಂತ ಅಧಿಕ ಪುಣ್ಯವಿದೆ.

3) ಜಮಾಅತ್ ನಮಾಝ್ ಆರಂಭಿಸುವ ಮೊದಲು ಅನುಸರಿಸುವವರ ಸಾಲು ಸರಿಪಡಿಸಬೇಕು.

4) ಕುರ್‌ಆನ್ ಹೆಚ್ಚು ತಿಳಿದವರು ನಮಾಝ್‌ನಲ್ಲಿ ಇಮಾಮಾಗಿ ನಿಲ್ಲುವುದು.

5) ಸಾಲು ನಿಲ್ಲುವಾಗ ಮುಂದೆ ಪುರುಷರು ಬಳಿಕ ಮಕ್ಕಳು ಕೊನೆಗೆ ಸ್ತ್ರೀಯರು ಎಂಬ ಕ್ರಮದಲ್ಲಿ ನಿಲ್ಲುವುದು.

ಅಭ್ಯಾಸ:

1) ಇಮಾಮನ್ನು ಅನುಸರಿಸಿ ಮಾಡುವ ನಮಾಝ್ ಸರಿಯಾಗುವುದಕ್ಕೆ ಯಾವೆಲ್ಲ ನಿಬಂಧನೆಗಳಿವೆ?

2) ಜಮಾಅತ್ ನಮಾಝಿಗೆ ಸಾಲಾಗಿ ನಿಲ್ಲುವಾಗ ಗಮನಿಸಬೇಕಾದ ವಿಷಯಗಳಾವುವು?

3) ಸಂಘಟಿತ ನಮಾಝಿನಲ್ಲಿ ಯಾರು ಇಮಾಮ್ ಆಗಿ ನಿಲ್ಲಬೇಕು?

***

ಪಾಠ: 13

ಜುಮಾ ನಮಾಝ್

اَلْجُمُعَة

يَاَيُّهَا الَّذِيْنَ اٰمَنُوْٓا اِذَا نُوْدِيَ لِلصَّلٰوةِ مِنْ يَّوْمِ الْجُمُعَةِ فَاسْعَوْا
اِلٰى ذِكْرِ اللّٰهِ وَذَرُوا الْبَيْعَ ۚ ذٰلِكُمْ خَيْرٌ لَّكُمْ اِنْ كُنْتُمْ تَعْلَمُوْنَ ⑨

"ಓ ಸತ್ಯವಿಶ್ವಾಸಿಗಳೇ! ಶುಕ್ರವಾರ ದಿನ ನಮಾಝಿಗಾಗಿ ಕರೆಯಲಾದಾಗ ಅಲ್ಲಾಹನ 'ಸ್ಮರಣೆಯು' ಕಡೆಗೆ ಧಾವಿಸಿರಿ ಮತ್ತು ಕ್ರಯ-ವಿಕ್ರಯಗಳನ್ನು ಬಿಟ್ಟುಬಿಡಿರಿ. ನೀವು ಅರಿತವರಾಗಿದ್ದರೆ ಇದು ನಿಮಗೆ ಅತ್ಯುತ್ತಮವಾಗಿದೆ."

ಶುಕ್ರವಾರ ಹೆಚ್ಚು ಮಹತ್ವದ ದಿವಸವಾಗಿದೆ. ಆ ದಿನವು ಜುಮಾದ ದಿವಸವೆಂದು ಪ್ರಸಿದ್ಧಿಯಿದೆ. ಶುಕ್ರವಾರದ ظهر ನ ಹೊತ್ತಿನಲ್ಲಿ ಜುಮಾ ನಮಾಝ್ ಮತ್ತು ಖುತ್‌ಬಾ (ಪ್ರವಚನ) ನಿರ್ವಹಿಸುವುದು ಕಡ್ಡಾಯವಾಗಿದೆ. ಪ್ರಯಾಣಿಕರು, ಸ್ತ್ರೀಯರು, ಮಕ್ಕಳನ್ನು ಬಿಟ್ಟು ಇತರರಿಗೆ ಜುಮಾ ಕಡ್ಡಾಯವಾಗಿದೆ. ಮಕ್ಕಳನ್ನು ಜುಮಾದಲ್ಲಿ ಪಾಲ್ಗೊಳ್ಳುವಂತೆ ಮಾಡಿ ಅಭ್ಯಾಸ ಮಾಡಿಸಬೇಕು. ಸ್ತ್ರೀಯರಿಗೂ ಜುಮಾ ನಮಾಝ್‌ನಲ್ಲಿ ಭಾಗವಹಿಸುವುದಕ್ಕೆ ಅನುಮತಿಯಿದೆ. ಜುಮಾದಲ್ಲಿ ಎರಡು ಖುತ್‌ಬಾಗಳು ಮತ್ತು ಎರಡು ರಕಅತ್ ನಮಾಝ್ ಇದೆ. ظهر ನಮಾಝ್‌ನ ಸಮಯ ಆದಾಗ ಇಮಾಮ್ ಖುತ್‌ಬಾ ಪ್ರವಚನಕ್ಕೆ ತೊಡಗುತ್ತಾರೆ. ಹಮ್ದ್, ಸ್ವಲಾತ್, ತಕ್‌ವಾ (ದೇವಭಯ) ರೂಢಿಸಿಕೊಳ್ಳುವುದಕ್ಕೆ ಉಪದೇಶ ನೀಡಲಾಗುವುದು. ಕುರ್‌ಆನಿನ ಕೆಲವು ಆಯತ್‌ಗಳನ್ನು ಓದಿ ಸತ್ಯವಿಶ್ವಾಸಿಗಳ ಹಿತಕ್ಕಾಗಿ ಪ್ರಾರ್ಥಿಸುವುದು ಖುತ್‌ಬಾದ ಫರ್ಝ್ ಆಗಿದೆ. ಎರಡು ಖುತ್‌ಬಾಗಳ ನಡುವೆ ಸ್ವಲ್ಪ ಹೊತ್ತು ಕುಳಿತುಕೊಳ್ಳುವುದು ಸುನ್ನತ್ತಾಗಿದೆ. ಖುತ್‌ಬಾ ಕೊಡುವ ವ್ಯಕ್ತಿಗೆ خطيب (ಖತೀಬ್) ಎಂದು ಹೆಸರು.

ಗುರುವಾರ ಅಸ್ತಮಿಸಿದ ಬಳಿಕ ಆರಂಭಗೊಳ್ಳುವ ಶುಕ್ರವಾರದ ರಾತ್ರಿ ಹಗಲುಗಳಲ್ಲಿ سُورَةُ الْكَهْف ಓದುವುದು, ಮತ್ತು ಹೆಚ್ಚು ಸ್ವಲಾತ್ ಹೇಳುವುದು ಉತ್ತಮ. ಶುಕ್ರವಾರ ಜುಮಾ ನಡೆಯುವುದಕ್ಕೆ ಮುಂಚೆ ಸ್ನಾನ ಮಾಡಿ ಉತ್ತಮ ಬಟ್ಟೆಬರೆ ತೊಡುವುದು ಉತ್ತಮವಾಗಿದೆ. ಸುಗಂಧ ಪೂಸುವುದು ಸುನ್ನತ್ತಾಗಿದೆ. ಝುಹರ್ ಹೊತ್ತು ಆಗುವುದಕ್ಕಿಂತ ಮುಂಚಿತವಾಗಿ ಮಸೀದಿಗೆ ಹೋಗಿ ಕುಳಿತು ಕೊಳ್ಳುವುದಕ್ಕೆ ಮುಂಚೆ 2 ರಕಅತ್ ತಹಿಯ್ಯತ್ ನಮಾಝ್ ಮಾಡುವುದೂ ಖುತ್‌ಬಾ ಆರಂಭಿಸುವ ವರೆಗೆ ಕುರ್‌ಆನ್ ಓದುವುದೂ ಪುಣ್ಯದಾಯಕವಾದುದು.

ಮುಸ್ಲಿಮ್ ಸಮಾಜಕ್ಕೆ ಬದುಕಿನ ವಿವಿಧ ವಿಷಯಗಳಲ್ಲಿ ಅಗತ್ಯವಾದ ಉಪದೇಶ ನಿರ್ದೇಶನಗಳನ್ನು ಪ್ರತಿವಾರ ನೀಡುವ ಉದ್ದೇಶವನ್ನು ಜುಮಾ ಖುತ್‌ಬಾ ಹೊಂದಿದೆ.

ಖುತ್‌ಬಾದ ಬಳಿಕ ಜಮಾಅತ್ ನಮಾಝ್ ಪ್ರಾರಂಭಿಸುವುದು. ಜುಮಾ ನಮಾಝ್ ಎರಡು ರಕಅತ್ ಆಗಿದೆ. ಜುಮಾ ಇಮಾಮರ ಜೊತೆಗೂಡಿ ನಮಾಝನ್ನು ಮಾಡುತ್ತಿದ್ದೇನೆ ಎಂದು ಮಅ್‌ಮೂಮ್ ಸಂಕಲ್ಪ (ನಿಯ್ಯತ್) ಮಾಡಬೇಕು. ಇಮಾಮ್ ಆದವನು ತಾನು ಇಮಾಮ್ ಆಗಿ ನಮಾಝ್ ಮಾಡುತ್ತಿರುವೆನೆಂದು ನಿಯ್ಯತ್ ಮಾಡಬೇಕು. ಜುಮಾ ನಮಾಝಿನ ಎರಡು ರಕಅತ್‌ಗಳಲ್ಲಿ ಇಮಾಮ್ ಫಾತಿಹಾ ಮತ್ತು ಸೂರಃಗಳನ್ನು ಗಟ್ಟಿಯಾಗಿ ಓದಬೇಕು. ಮಅ್‌ಮೂಮ್ ಫಾತಿಹಾವನ್ನು ಮೆಲ್ಲಗೆ ಓದಿ ಆ ಬಳಿಕ ಇಮಾಮ್ ಓದುವ ಸೂರಃವನ್ನು ಗಮನವಿಟ್ಟು ಆಲಿಸಬೇಕು. ಝುಹರ್‌ನ ಬಳಿಕ ಇರುವಂಥ ಸುನ್ನತ್ ನಮಾಝ್ ಜುಮಾದ ಬಳಿಕವೂ ಸುನ್ನತ್ ಆಗಿದೆ. ಜುಮಾದ ಬಾಂಗ್ ಕರೆಯಿಂದ ಹಿಡಿದು ನಮಾಝ್ ಮುಗಿಯುವ ತನಕ ವ್ಯಾಪಾರ ವ್ಯವಹಾರಾದಿಗಳು ಹರಾಮ್(ನಿಷಿದ್ಧ) ಎಂದು ಪ್ರವಾದಿವರ್ಯರು(ಸ) ಕಲಿಸಿದ್ದಾರೆ. ಆ ಹೊತ್ತು ಯಾವುದೇ ರೀತಿಯ ಒಪ್ಪಂದಗಳನ್ನು ಮಾಡುವ ಹಾಗಿಲ್ಲ. ಮುಸ್ಲಿಮರು ಈ ರೀತಿ ಸ್ಥಿರವಾಗಿ ಜುಮಾವನ್ನು ಅಸ್ತಿತ್ವದಲ್ಲಿ ಉಳಿಸಿದರೆ ಅವರೊಳಗೆ ದೇವಭಕ್ತಿ, ಒಗ್ಗಟ್ಟಿನ ಪ್ರಜ್ಞೆಯುಂಟಾಗುವುದು.

ನಾವು ಏನು ಕಲಿತೆವು?

1) ಶುಕ್ರವಾರ ದಿವಸದ ಜುಮಾದಲ್ಲಿ ಪಾಲ್ಗೊಳ್ಳಬೇಕಾದುದು ಮುಸ್ಲಿಮರಿಗೆ ಕಡ್ಡಾಯವಾಗಿದೆ.

2) ಜುಮಾದ ಖುತ್‌ಬಾವನ್ನು ಗಮನವಿಟ್ಟು ಕೇಳಬೇಕು.

3) ಜುಮಾದ ಬಾಂಗ್ ಕರೆ ಕೇಳಿಸಿದರೆ ಮಾರುವುದು, ಕೊಳ್ಳುವುದು ಮತ್ತಿತರ ವ್ಯವಹಾರಗಳು ನಿಷಿದ್ಧವಾಗಿದೆ.

4) ಜುಮಾವನ್ನು ಅಸ್ತಿತ್ವಕ್ಕೆ ತಂದರೆ ಅವರೊಳಗೆ ದೇವಭಕ್ತಿ, ಒಗ್ಗಟ್ಟಿನ ಪ್ರಜ್ಞೆ ಉಂಟಾಗುವುದು.

ಅಭ್ಯಾಸ:

1) ಖುತ್‌ಬಾದ ಫರ್ಝ್‌ಗಳಾವುವು?

2) ಜುಮಾ ಯಾರಿಗೆಲ್ಲ ಕಡ್ಡಾಯವಿಲ್ಲ?

3) ಜುಮಾ ಖುತ್‌ಬಾದ ಉದ್ದೇಶವೇನು?

4) ಶುಕ್ರವಾರ ನಾವು ಮಾಡಬೇಕಾದ ಸುನ್ನತ್ತಾಗಿರುವ ವಿಷಯಗಳು ಯಾವುವು?

❋❋❋

ಪಾಠ: 14

ಸುನ್ನತ್(ಐಚ್ಛಿಕ) ನಮಾಝ್‌ಗಳು

ರಬೀಅ್ ಬಿನ್ ಕಅಬ್‌ರು(ರ) ಪ್ರವಾದಿವರ್ಯರ(ಸ) ಸೇವೆ ಮಾಡುತ್ತಾ ಅವರ(ಸ) ಜೊತೆಯಲ್ಲಿ ವಾಸಿಸುತ್ತಿದ್ದ ಸಹಾಬಿಯಾಗಿದ್ದರು. ಒಮ್ಮೆ ಅವರು ಪ್ರವಾದಿಯವರಿಗೆ(ಸ) ವುಝೂವಿಗೆ ಅಗತ್ಯವಿರುವ ನೀರು ಇತ್ಯಾದಿಗಳನ್ನು ತಂದು ಕೊಟ್ಟರು. ಉಪಕಾರಕ್ಕೆ ಪ್ರತಿಯಾಗಿ ಉಪಕರಿಸುವುದು ಪ್ರವಾದಿವರ್ಯರ(ಸ) ಗುಣವಾಗಿತ್ತು. ಆಗ ಪ್ರವಾದಿವರ್ಯರು(ಸ) ಅವರಲ್ಲಿ ಹೇಳಿದರು, ರಬೀಅ ನಿಮಗೇನು ಬೇಕು? ನನ್ನೊಂದಿಗೆ ಕೇಳುವಿರಾ?"

"ಸ್ವರ್ಗದಲ್ಲಿಯೂ ತಮ್ಮ ಸಹವಾಸ ನನಗೆ ಬೇಕಾಗಿದೆ" ಎಂದು ಹೆಚ್ಚು ಆಲೋಚಿಸದೆಯೇ ಅವರು ಹೇಳಿದರು.

"ಬೇರೇನೂ ಕೇಳುವುದಕ್ಕೆ ಇಲ್ಲವೇ?"

"ಇಲ್ಲ. ಅದು ಮಾತ್ರ ನನ್ನ ಅತ್ಯುಚ್ಚ ಬಯಕೆ ಆಗಿದೆ."

"ಹಾಗಾದರೆ ನೀವು ಹೆಚ್ಚು ಸುನ್ನತ್ ನಮಾಝ್‌ಗಳನ್ನು ಅನುಷ್ಠಾನಿಸಿರಿ" ಎಂದು ರಬೀಅರ ಬಯಕೆ ಈಡೇರುವ ದಾರಿಯನ್ನು ಪ್ರವಾದಿವರ್ಯರು(ಸ) ಸೂಚಿಸಿದರು.

ಕಡ್ಡಾಯ ನಮಾಝ್ ಮಾಡಿಯೂ ನಾವು ಸುನ್ನತ್ ನಮಾಝನ್ನು ಕೂಡಾ ಅನುಷ್ಠಾನಿಸಬೇಕಾಗಿದೆ. ಅದರ ಮಹತ್ವ ಮೇಲಿನ ಘಟನೆಯಿಂದ ನಮಗೆ ಮನವರಿಕೆಯಾಗುತ್ತದೆ. ಫರ್ಝ್ ನಮಾಝ್‌ಗಳಲ್ಲಿ ಆಗುವ ಸಣ್ಣಪುಟ್ಟ ಪಾಪಗಳು ಸುನ್ನತ್ ನಮಾಝ್‌ನಿಂದ ಪರಿಹಾರವಾಗುವುದೆಂದು ಹದೀಸ್‌ನಲ್ಲಿದೆ.

ಕೆಲವು ಸುನ್ನತ್ ನಮಾಝ್‌ಗಳನ್ನು ಪ್ರವಾದಿವರ್ಯರು(ಸ) ನಮಗೆ ಕಲಿಸಿ ಕೊಟ್ಟಿರುವರು. ನಾವು ಪ್ರವಾದಿವರ್ಯರು(ಸ) ಸಾಮಾನ್ಯವಾಗಿ ನಿರ್ವಹಿಸುತ್ತಿದ್ದ ಕೆಲವು ಸುನ್ನತ್ ನಮಾಝ್‌ಗಳ ಕುರಿತು ಕಲಿಯೋಣ.

1. الرَّوَاتِبُ : ರವಾತಿಬ್ ನಮಾಝ್ ಸುನ್ನತ್ ನಮಾಝ್‌ಗಳ ಪೈಕಿ ಅತ್ಯಂತ ಶ್ರೇಷ್ಠವೂ ಪ್ರಮುಖವೂ ಆದ ಹತ್ತು ರಕಅತ್‌ಗಳಿವೆ.

1. ಸುಬ್‌ಹಿನ (ಫಜ್ರ್ ನಮಾಝಿನ) ಮುಂಚೆ ಎರಡು ರಕಅತ್.
2. ಝುಹರ್ ನಮಾಝಿನ ಮೊದಲ 2 ರಕಅತ್‌ಗಳು
3. ಝುಹರ್‌ನ ಬಳಿಕ 2 ರಕಅತ್
4. ಮಗ್ರಿಬ್‌ನ ನಂತರ 2 ರಕಅತ್.
5. ಇಶಾ ನಮಾಝಿನ ನಂತರ 2 ರಕಅತ್

ಫರ್ಝ್ ನಮಾಝಿನ ಸಮಯ ಸಮೀಪಿಸಿದಾಗ ಅದಕ್ಕಿಂತ ಮುಂಚೆ ನಿರ್ವಹಿಸುವ ಸುನ್ನತ್ ನಮಾಝಿಗೂ ಸಮಯವಾಯಿತು. ಫರ್ಝ್ ನಮಾಝ್‌ನ ಬಳಿಕದ ಸುನ್ನತ್ ನಮಾಝಿಗೂ ಸಮಯವಾಯಿತು.

2. الْوِتْرُ : ವಿತ್ರ್ ಅತ್ಯಂತ ಪ್ರಬಲವಾದ ಸುನ್ನತ್ ನಮಾಝ್ ಆಗಿದೆ. ಇಶಾ ನಮಾಝ್‌ನ ಬಳಿಕ ವಿತ್ರ್ ನಮಾಝಿಗೆ ಸಮಯವಾಯಿತು. ಅದು ಸುಬ್‌ಹಿ ನಮಾಝಿನ ತನಕವೂ ಮುಂದುವರಿಯುವುದು. ಇಶಾ ನಮಾಝಿನ ಬಳಿಕದ ರವಾತಿಬ್ ನಮಾಝ್ ನಿರ್ವಹಿಸಿ ಆದ ಮೇಲೆ ವಿತ್ರ್ ನಮಾಝ್ ನಿರ್ವಹಿಸಬೇಕಾಗಿದೆ.

ವಿತ್ರ್ ನಮಾಝನ್ನು ಒಂದೋ ಮೂರೋ ಐದೋ ಏಳೋ ಒಂಭತ್ತೋ ಹನ್ನೊಂದೋ ರಕಅತ್‌ಗಳಂತೆ ನಿರ್ವಹಿಸಬಹುದು. ತಲಾ ಎರಡು ರಕಅತ್‌ಗಳಂತೆ ನಮಾಝ್ ಮಾಡಿ ಕೊನೆಯಲ್ಲಿ ಒಂದು ರಕಅತ್ ನಮಾಝ್ ಮಾಡಬೇಕು. ರಾತ್ರಿಯ ಕೊನೆಯ ನಮಾಝ್ ವಿತ್ರ್ ಆಗಿರಬೇಕು.

3. التَّرَاوِيحُ : ರಮಝಾನ್ ತಿಂಗಳಲ್ಲಿ ಇಶಾ ನಮಾಝಿನ ನಂತರ ತರಾವೀಹ್ ನಮಾಝ್‌ನ ಸಮಯ. ರಮಝಾನ್‌ನ ರಾತ್ರಿಯಲ್ಲಿ ದೀರ್ಘ ಸಮಯ ಕುರ್‌ಆನ್ ಓದುತ್ತಾ ಮಾಡುವ ಈ ನಮಾಝ್ ಅತ್ಯಂತ ಶ್ರೇಷ್ಠವಾದುದು. ಎರಡು ರಕಅತ್ ನಮಾಝ್ ಮಾಡಿ ಸಲಾಮ್ ಹೇಳಿ ಮುಗಿಸುವುದು ಇದರ ರೀತಿ. ತರಾವೀಹ್ ನಮಾಝನ್ನು ಎಂಟು ರಕಅತ್ತಾಗಿಯೂ 20 ರಕಅತ್ತಾಗಿಯೂ ನಿರ್ವಹಿಸುತ್ತಾರೆ. ರಕಅತ್‌ಗಳ ಸಂಖ್ಯೆಯನ್ನು ಹೆಚ್ಚಿಸದಿದ್ದರೂ ದೀರ್ಘ ಸಮಯ

ನಿಂತು ಕುರ್‌ಆನ್ ಓದುವುದು, ರುಕೂಅ್, ಸುಜೂದ್ ದೀರ್ಘವಾಗಿ ಮಾಡುವುದು ಉತ್ತಮ. ಬಳಿಕ ವಿತ್ರ್ ನಮಾಝ್ ಮಾಡಬೇಕು. ರಮಝಾನಿನಲ್ಲಿ ತರಾವೀಹ್ ವಿತ್ರ್‌ಗಳನ್ನು ಜಮಾಅತ್ ಆಗಿ ಮಾಡುವುದು ಸುನ್ನತ್ತಾಗಿದೆ.

4. تَحِيَّةُ الْمَسْجِد : ಮಸೀದಿಗೆ ಪ್ರವೇಶಿಸಿದರೆ ಒಂದು ಕಾಣಿಕೆ ಸಮರ್ಪಿಸುತ್ತಿರುವಂತೆ ಮೊದಲು ಎರಡು ರಕಅತ್ ನಮಾಝ್ ಮಾಡುವುದು ಸುನ್ನತ್ತಾಗಿದೆ. ಇದನ್ನು ತಹಿಯ್ಯತ್ ನಮಾಝ್ ಎನ್ನುವರು. ತಹಿಯ್ಯತ್ ನಮಾಝ್‌ನ ಸಮಯ ಮಸೀದಿ ಪ್ರವೇಶಿಸಿ ಕುಳಿತುಕೊಳ್ಳುವವರೆಗೆ ಇರುವುದು.

5. صَلَاةُ الضُّحَى : ಸೂರ್ಯ ಉದಯಿಸಿ ಮೇಲೇರಿದಲ್ಲಿಂದ ಮಧ್ಯಾಹ್ನದ ವರೆಗೆ ದುಹಾ ನಮಾಝಿನ ಸಮಯವಾಗಿದೆ. ಮಧ್ಯಾಹ್ನಕ್ಕಿಂತ ಮುಂಚೆ ಇರುವ ಸಮಯವನ್ನು ದುಹಾ ಎನ್ನುವುದು. ದುಹಾ ನಮಾಝ್ ಕನಿಷ್ಠ ಎರಡು ರಕಅತ್ ಮತ್ತು ಗರಿಷ್ಠ ಎಂಟು ರಕಅತ್ ಆಗಿದೆ.

6. صَلَاةُ الْعِيدَيْن : ಇಸ್ಲಾಮಿನಲ್ಲಿ ಎರಡು ಈದ್ (ಹಬ್ಬ) ಆಚರಣೆಗಳಿವೆ. ಅದರಲ್ಲಿ ಒಂದು ರಮಝಾನ್ ವ್ರತ ಪೂರ್ತಿಯಾಗಿ ಶವ್ವಾಲ್ ಒಂದನೇ ತಾರೀಕಿನಂದು. ಇದನ್ನು عِيدُ الْفِطْر ಎನ್ನುವುದು. ಎರಡನೆಯದು ದುಲ್‌ಹಜ್ಜ್ 10ನೇ ತಾರೀಕು عِيدُ الْأَضْحَى ಇದನ್ನು (ಬಕ್ರೀದ್) ಬಲಿಹಬ್ಬವೆಂದು ಹೇಳುವರು.

ಇಸ್ಲಾಮಿನಲ್ಲಿ ಹಬ್ಬಾಚರಣೆಯ ಮುಖ್ಯಭಾಗ ಈದ್ ನಮಾಝ್ ಆಗಿದೆ. ಎರಡು ಹಬ್ಬಗಳು ಅಸ್ತಿತ್ವದಲ್ಲಿರುವಂತೆ ಮಾಡುವುದು ಮುಸ್ಲಿಮರ ಸಾರ್ವಜನಿಕ ಹೊಣೆಗಾರಿಕೆಯಾಗಿದೆ. ಈದ್ ನಮಾಝ್ ಮತ್ತು ಖುತ್‌ಬಾ ತೆರೆದ ಮೈದಾನ ದಲ್ಲಿ ಆಗಿರುವುದು ಉತ್ತಮ. ಅದರಲ್ಲಿ ಸ್ತ್ರೀಯರು ಮಕ್ಕಳು ಭಾಗವಹಿಸುವುದು ಸುನ್ನತ್ತಾಗಿದೆ.

ಈದ್ ನಮಾಝ್ ಜುಮುಅದಂತೆ ಎರಡು ರಕಅತ್ ಆಗಿದೆ. ಆದರೆ ಈದ್ ಖುತ್‌ಬಾ ನಮಾಝಿನ ಬಳಿಕ ನೆರವೇರಿಸಲ್ಪಡುವುದು. ಈ ನಮಾಝಿನ ಮೊದಲ ರಕಅತಿನಲ್ಲಿ دُعَاءُ الْاِفْتِتَاح ನ ನಂತರ ಏಳು ತಕ್‌ಬೀರ್, ಎರಡನೇ ರಕಅತಿಗೆ ಎದ್ದೊಡನೆ ಐದು ತಕ್‌ಬೀರ್ ಹೇಳುವುದು ಸುನ್ನತ್ತಾಗಿದೆ.

ಒಂದೊಂದು ತಕ್‌ಬೀರ್ ಹೇಳುವಾಗಲೂ ತಕ್‌ಬೀರತುಲ್ ಇಹ್ರಾಮ್ ಹೇಳುವಾಗ ಮಾಡುವಂತೆ ಎರಡು ಮುಂಗೈಗಳನ್ನು ಭುಜಗಳ ನೇರ ಎತ್ತಿ ಮತ್ತೆ ತಗ್ಗಿಸಬೇಕು. ಪ್ರತಿಯೊಂದು ತಕ್‌ಬೀರ್‌ನ ಬಳಿಕ

سُبْحَانَ اللّٰهِ وَالْحَمْدُ لِلّٰهِ وَلَا اِلٰهَ اِلَّا اللّٰهُ وَاللّٰهُ اَكْبَرُ

(ಸುಬ್‌ಹಾನಲ್ಲಾಹಿ ವಲ್‌ಹಮ್ದುಲಿಲ್ಲಾಹಿ ವಲಾ ಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್ಬರ್) ಎಂದು ಹೇಳುವುದು ಸುನ್ನತ್ತಾಗಿದೆ. ತಕ್‌ಬೀರತುಲ್ ಇಹ್ರಾಮ್‌ನ ಬಳಿಕವೂ ಇದನ್ನು ಹೇಳಬೇಕಾಗಿಲ್ಲ. ಕೊನೆಯ ತಕ್‌ಬೀರ್ ಹೇಳಿದೊಡನೆ ಇಮಾಮ್ ಗಟ್ಟಿಯಾಗಿ ಫಾತಿಹಾ ಓದಬೇಕು. ಫಾತಿಹಾದ ಬಳಿಕ ಮೊದಲ ರಕಅತಿನಲ್ಲಿ سُورَةُ الْأَعْلَى ಎರಡನೇ ರಕಅತ್ತಿನಲ್ಲಿ سُورَةُ الْغَاشِيَةِ (ಸೂರತುಲ್ ಗಾಶಿಯ)ವನ್ನೂ ಓದುವುದು ಸುನ್ನತ್ತಾಗಿದೆ.

7. صَلَاةُ الْكُسُوف : ಅಪೂರ್ವವಾದ ಕೆಲವು ಸಂದರ್ಭಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳಾಗುತ್ತವೆ. ಅದು ಅಲ್ಲಾಹನ ದೃಷ್ಟಾಂತಗಳಾಗಿವೆ. ಸೂರ್ಯ ಮತ್ತು ಚಂದ್ರ ಗ್ರಹಣ ಬಾಧಿಸಿದಾಗ 2 ರಕಅತ್ ನಮಾಝ್ ನೆರವೇರಿಸಬೇಕು. ಮಸೀದಿಯಲ್ಲಿ ಸೇರಿ ಜಮಾಅತ್ತಾಗಿ ನಮಾಝ್ ಮಾಡುವುದು ಉತ್ತಮ. ಈ ಗ್ರಹಣ ನಮಾಝಿನ ಪ್ರತಿಯೊಂದು ರಕಅತ್‌ನಲ್ಲಿ ಎರಡು ಸಲ ರುಕೂಅ್ ಬಾಗುವುದು, ದೀರ್ಘವಾಗಿ ಕುರ್‌ಆನ್ ಓದುವುದು ಸುನ್ನತ್ತಾಗಿದೆ.

ಪ್ರತಿ ಒಂದು ರಕಅತಿನಲ್ಲಿ ಫಾತಿಹಾ ಆದ ಮೇಲೆ ಕುರ್‌ಆನಿನಿಂದ ಯಾವುದಾದರೂ ಒಂದು ಭಾಗ ಓದಬೇಕು. ಗ್ರಹಣ ನಮಾಝಿನಲ್ಲಿ ಗಟ್ಟಿಯಾಗಿಯೂ ಓದಬಹುದು. ಈದ್ ನಮಾಝಿನ ತರವೇ ಗ್ರಹಣ ನಮಾಝಿನ ಬಳಿಕ ಇಮಾಮ್ ಖುತ್‌ಬಾ ಪ್ರವಚನ ನೀಡಬೇಕು.

8. صَلَاةُ الْاِسْتِسْقَاء : ಮಳೆಯಿಲ್ಲದೆ ಕಷ್ಟಪಡುತ್ತಿರುವಾಗ ಮಳೆಗಾಗಿ ಅಲ್ಲಾಹನೊಂದಿಗೆ ಪ್ರಾರ್ಥಿಸುವ ಪ್ರತ್ಯೇಕವಾದ ನಮಾಝುನ್ನು ಸ್ವಲಾತುಲ್ ಇಸ್ತಿಸ್ಕಾಅ್ (ಮಳೆ ಬೇಡುವ ನಮಾಝ್) ಎನ್ನುವುದು. ಇದು ಎರಡು ರಕಅತ್ತಾಗಿದೆ. ಜನರು ಅಲ್ಲಾಹನಲ್ಲಿ ಕ್ಷಮೆ ಯಾಚಿಸಿ ಪಶ್ಚಾತ್ತಾಪಪಟ್ಟು ಮರಳುತ್ತಾ ಒಂದು ಮೈದಾನದಲ್ಲೋ ಮಸೀದಿಯಲ್ಲೋ ಸೇರಿ ಜಮಾಅತ್ತಾಗಿ ನಮಾಝ್ ಮಾಡುವುದು ಅತಿ ಉತ್ತಮವಾದುದು. ಸೂರ ಫಾತಿಹಾದ ಬಳಿಕ

ಮೊದಲ ರಕಅತಿನಲ್ಲಿ سُورَةُ الْأَعْلَى (ಸೂರತುಲ್ ಅಅ್‌ಲಾ) ಎರಡನೇ ರಕಅತಿನಲ್ಲಿ سُورَةُ الْغَاشِيَة (ಸೂರತುಲ್ ಗಾಶಿಯಾಃ) ಓದಬೇಕು. ಈ ನಮಾಝಿನಲ್ಲೂ ಗಟ್ಟಿಯಾಗಿ ಓದುವುದು ಸುನ್ನತ್ತಾಗಿದೆ. ನಮಾಝಿನ ಬಳಿಕ ಇಮಾಮ್ ಖುತ್ಬಾ ಪ್ರವಚನ ನೀಡಬೇಕು. ಖುತ್‌ಬಾದಲ್ಲಿ ಇಮಾಮ್ ಪ್ರಾರ್ಥಿಸುವಾಗ ಎಲ್ಲರೂ ಆಮೀನ್ ಎಂದು ಹೇಳುವುದು. ಖುತ್‌ಬಾದೊಂದಿಗೆ ಮುಂದುವರಿದು ಇಮಾಮ್ ಮತ್ತು ಇತರರು ಕಿಬ್ಲಾದ ಕಡೆಗೆ ತಿರುಗಿ ಶರೀರ ದಲ್ಲಿರುವ ಅಂಗವಸ್ತ್ರದ (ರುಮಾಲು) ಬಲಭಾಗವನ್ನು ಎಡಭಾಗಕ್ಕೂ ಎಡಭಾಗವನ್ನು ಬಲಭಾಗಕ್ಕೂ ಬದಲಿಸಿಡಬೇಕು. ಕೈ ಎತ್ತಿ ಮಳೆ ಸುರಿಸುವಂತೆ ಕರುಣಾನಿಧಿಯಾದ ಅಲ್ಲಾಹನಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥಿಸಬೇಕು.

ಅಭ್ಯಾಸ:

1) ಪ್ರಮುಖವಾದ ಸುನ್ನತ್ ನಮಾಝ್‌ಗಳಾವುವು?
2) ರವಾತಿಬ್ ಸುನ್ನತ್‌ಗಳಲ್ಲಿ ಪ್ರಬಲವಾದುದು ಯಾವುದು?
3) ವಿತ್ರ್ ನಮಾಝಿನ ಸಮಯ ಯಾವುದು?
4) ತರಾವೀಹ್ ನಮಾಝಿನ ವಿಶೇಷತೆಯೇನು?
5) ತಹಿಯ್ಯತ್ ನಮಾಝ್ ಎಂದರೇನು?

❋❋❋

ಪಾಠ: 15

ಮಯ್ಯಿತ್ ನಮಾಝ್(ಜನಾಝಾ ನಮಾಝ್)

صَلَاةُ الْجَنَازَة

ಮರಣ ಹೊಂದಿದ ವ್ಯಕ್ತಿಯ ಒಳಿತಿಗಾಗಿ ಉಳಿದವರು ಮಾಡುವ ಮಹತ್ತರವಾದ ಕರ್ಮ ಮಯ್ಯಿತ್ ನಮಾಝಾಗಿದೆ. ಇದರ ಪ್ರಮುಖ ಭಾಗ ಮೃತರಿಗಾಗಿ ನಡೆಸುವ ಪ್ರಾರ್ಥನೆಯಾಗಿರುವುದು.

ಮಯ್ಯಿತ್ ನಮಾಝಿನ ಫರ್ಝ್‌ಗಳನ್ನು ಕೆಳಗೆ ವಿವರಿಸಲಾಗಿದೆ.

1. ನಿಯ್ಯತ್ (ಸಂಕಲ್ಪ): ಇಂಥ ಮಯ್ಯಿತ್ತಿಗಾಗಿ (ಮೃತನಿಗಾಗಿ) ನಾನು ನಮಾಝ್ ಮಾಡುತ್ತೇನೆ ಎಂದು ಸಂಕಲ್ಪ ಮಾಡುವುದು.

2. ನಿಲ್ಲಲು ಆಗುವವರು ನಿಲ್ಲುವುದು.

3. ನಮಾಝ್ ಆರಂಭಿಸುವ ತಕ್ಬೀರ್ ಸಹಿತ ನಾಲ್ಕು ತಕ್‌ಬೀರ್ ಹೇಳುವುದು.

4. ಒಂದನೇ ತಕ್‌ಬೀರ್‌ನ ನಂತರ سُورَةُ الْفَاتِحَة (ಸೂರತುಲ್ ಫಾತಿಹ) ಓದುವುದು. ಎರಡನೆಯ ತಕ್‌ಬೀರ್‌ನ ನಂತರ ಸ್ವಲಾತ್ ಹೇಳುವುದು (ನಮಾಝಿನಲ್ಲಿ ಅತ್ತಹಿಯ್ಯಾತ್‌ನ ಬಳಿಕ ಹೇಳುವ ಸ್ವಲಾತನ್ನು ಹೇಳಿದರೆ ಸಾಕು.)

5. ಮೂರನೇ ತಕ್‌ಬೀರ್‌ನ ಬಳಿಕ ಮಯ್ಯಿತ್ತಿಗಾಗಿ (ಜನಾಝಕ್ಕಾಗಿ) ಪ್ರಾರ್ಥಿಸುವುದು. ಇದಕ್ಕೆ ಕೆಳಗೆ ನೀಡಿದ ಪ್ರಾರ್ಥನೆ ಅಥವಾ ಬೇರೆ ಪ್ರಾರ್ಥನೆಗಳೂ ಆದೀತು.

اَللّٰهُمَّ اغْفِرْ لَهُ وَارْحَمْهُ وَاعْفُ عَنْهُ، وَعَافِهِ، وَاَكْرِمْ نُزُلَهُ ، وَوَسِّعْ مَدْخَلَهُ وَاغْسِلْهُ بِالْمَاءِ وَالثَّلْجِ وَالْبَرْدِ ، وَنَقِّهِ مِنَ الْخَطَايَا كَمَا يُنَقَّى الثَّوْبُ الْاَبْيَضُ مِنَ الدَّنَسِ وَاَبْدِلْهُ دَارًا خَيْرًا مِّنْ دَارِهِ وَاَهْلاً خَيْرًا مِّنْ اَهْلِهِ وَزَوْجًا خَيْرًا مِّنْ زَوْجِهِ وَاَدْخِلْهُ الْجَنَّةَ وَاَعِذْهُ مِنْ عَذَابِ الْقَبْرِ وَمِنْ عَذَابِ النَّارِ

	ಅರ್ಥ:
اَللّٰهُمَّ اغْفِرْلَهُ	ಅಲ್ಲಾಹನೇ ಈ ವ್ಯಕ್ತಿಗೆ ಕ್ಷಮೆ ನೀಡು
وَارْحَمْهُ	ಅವನ ಮೇಲೆ ಕರುಣೆದೋರು
وَاعْفُ عَنْهُ وَعَافِهِ	ಅವನನ್ನು ಕ್ಷಮಿಸಿ ಸಮಾಧಾನ ಒದಗಿಸು
وَاَكْرِمْ نُزُلَهُ	ಇವನನ್ನು ಸನ್ಮಾನಿಸು
وَوَسِّعْ مُدْخَلَهُ	ಇವನು ಪ್ರವೇಶಿಸುವ ಸ್ಥಳ ವಿಶಾಲಗೊಳಿಸು
وَاغْسِلْهُ بِالْمَاءِ وَالثَّلْجِ وَالْبَرْدِ	ನೀರಿಂದ ಇಬ್ಬನಿಯಿಂದ ಹಿಮದಿಂದ ಇವನನ್ನು ತೊಳೆಯುವಂತೆ
وَنَقِّهِ مِنَ الْخَطَايَا	ಪಾಪಗಳಿಂದ ಇವನನ್ನು ಶುದ್ಧೀಕರಿಸು
كَمَا يُنَقَّى الثَّوْبُ الْاَبْيَضُ مِنَ الدَّنَسِ	ಬಿಳಿ ಬಟ್ಟೆಯಿಂದ ಕೊಳೆಯನ್ನು ಸ್ವಚ್ಛಗೊಳಿಸುವಂತೆ
وَاَبْدِلْهُ دَارًا خَيْرًا مِّنْ دَارِهِ	ಇವನ ಮನೆಗಿಂತ ಒಳ್ಳೆಯ ಮನೆಯನ್ನು
وَاَهْلاً خَيْرًا مِّنْ اَهْلِهِ	ಇವನ ಕುಟುಂಬಕ್ಕಿಂತ ಉತ್ತಮ ಕುಟುಂಬವನ್ನು
وَزَوْجًا خَيْرًا مِّنْ زَوْجِهِ	ಇವನ ಜೋಡಿಗಿಂತ ಒಳ್ಳೆಯ ಜೋಡಿಯನ್ನು ಬದಲಿಯಾಗಿ ನೀಡು
وَاَدْخِلْهُ الْجَنَّةَ	ಇವನನ್ನು ಸ್ವರ್ಗದಲ್ಲಿ ಪ್ರವೇಶಗೊಳಿಸು
وَاَعِذْهُ مِنْ عَذَابِ الْقَبْرِ وَمِنْ عَذَابِ النَّارِ	ಇವನನ್ನು ಕಬರಿನ (ಗೋರಿಯ) ಶಿಕ್ಷೆಯಿಂದಲೂ ನರಕ ಶಿಕ್ಷೆಯಿಂದಲೂ ರಕ್ಷಿಸು

6. ನಾಲ್ಕನೇ ತಕ್ಬೀರಿನ ಬಳಿಕ ಸಲಾಮ್ ಹೇಳುವುದು

اَلسَّلَامُ عَلَيْكُمْ وَرَحْمَةُ اللّٰهِ

(ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹು) ಎಂದು ಹೇಳುವುದು ಉತ್ತಮ. ಅದಕ್ಕಿಂತ ಮೊದಲು

اَللّٰهُمَّ لَا تُحَرِّمْنَا أَجْرَهُ وَلَا تَفْتِنَّا بَعْدَهُ وَاغْفِرْلَنَا وَلَهُ

"ಅಲ್ಲಾಹುಮ್ಮ ಲಾ ತುಹರ್ರಿಮ್‌ನಾ ಅಜ್ರಹೂ ವಲಾ ತಫ್ತಿನ್ನಾ ಬಅ್‌ದಹೂ ವಗ್‌ಫಿರ್‌ಲನಾ ವಲಹೂ."

(ಅಲ್ಲಾಹನೇ! ಇವನಿಗೆ ದೊರಕುವ ಪ್ರತಿಫಲದಿಂದ ನಮ್ಮನ್ನು ವಂಚಿತ ಗೊಳಿಸಬೇಡ ಮತ್ತು ಇವನ ನಂತರ ನಮ್ಮನ್ನು ಪರೀಕ್ಷೆಗೊಳಪಡಿಸಬೇಡ. ಇವನನ್ನೂ ನಮ್ಮನ್ನೂ ನೀನು ಕ್ಷಮಿಸು.) ಎಂದು ಹೇಳುವುದು ಸುನ್ನತ್ತಾಗಿದೆ.

ನೀವು ಮಾಡಿರಿ:

ಮಯ್ಯತ್ ನಮಾಝಿನ ಪ್ರಾರ್ಥನೆಗಳನ್ನು ಕಂಠಪಾಠ ಮಾಡಿರಿ.

ಅಭ್ಯಾಸ:

1) ಮಯ್ಯತ್ ನಮಾಝ್ ಯಾಕೆ ಮಾಡುವುದು?
2) ಮಯ್ಯತ್ ನಮಾಝ್‌ನ ಫರ್ಝ್‌ಗಳು ಯಾವುವು?

***

ಪಾಠ: 16

ಪ್ರಯಾಣಿಕರು ಮತ್ತು ರೋಗಿಗಳ ನಮಾಝ್

ನಾವು ಶಾಲೆಯಿಂದ, ಮದ್ರಸಾದಿಂದ ಅಧ್ಯಯನ ಪ್ರವಾಸಕ್ಕೆ ಹೋಗುವುದಿಲ್ಲವೇ? ಪ್ರಕೃತಿ ಸೌಂದರ್ಯದ ಸ್ಥಳಗಳು, ಪ್ರಸಿದ್ಧ ಐತಿಹಾಸಿಕ ಸ್ಮಾರಕಗಳು, ಕೈಗಾರಿಕಾ ಸ್ಥಳಗಳು ಮುಂತಾದವನ್ನು ನೋಡುವುದಕ್ಕೆ? ಅವುಗಳಿಂದ ಧಾರಾಳ ಕಲಿಯುವುದು ಮತ್ತು ಮನವರಿಕೆ ಮಾಡಿಕೊಳ್ಳುವುದೂ ಇದೆ. ಇದೇ ತರಹ ವ್ಯಾಪಾರ ಮತ್ತಿತರ ಅಗತ್ಯಗಳಿಗೆ ಜನರು ಹಲವು ಸ್ಥಳಗಳಿಗೆ ಪ್ರಯಾಣ ಹೋಗುವರು. ಇಂಥ ಪ್ರಯಾಣದಲ್ಲಿ ಹಲವು ವಿಧದ ತೊಂದರೆಗಳನ್ನು ಎದುರಿಸಬೇಕಾಗುವುದು. ಕೆಲವೊಮ್ಮೆ ಐದು ಹೊತ್ತಿನ ನಮಾಝನ್ನು ಸರಿಯಾದ ಹೊತ್ತಲ್ಲಿ ನಿರ್ವಹಿಸುವುದು ಅಸಾಧ್ಯವಾಗಬಹುದು. ಪ್ರಯಾಣಕ್ಕೆಂದು ಬೆಳಗಾತ ವಾಹನಕ್ಕೇರುವುದು. ರಾತ್ರಿ ಎಂಟು ಗಂಟೆಯ ನಂತರ ಹೋಗುವ ಸ್ಥಳಕ್ಕೆ ತಲುಪುವುದು. ಅದರ ನಡುವೆ ಎರಡ್ಮೂರು ನಮಾಝ್‌ಗಳ ಹೊತ್ತು ಮೀರುತ್ತದೆ. ಇಂಥ ಧಾರಾಳ ಅನುಭವಗಳಾಗುತ್ತವೆ. ಆಗೇನು ಮಾಡುವುದು?

ಇಂಥ ಸಂದರ್ಭಗಳಲ್ಲಿ ಅಲ್ಲಾಹನು ನಮಗೆ ಕೆಲವು ವಿನಾಯಿತಿಗಳನ್ನು ಅನುಮತಿಸಿರುವನು. ಎರಡು ಹೊತ್ತಿನ ನಮಾಝ್‌ಗಳನ್ನು ಒಂದೇ ಸಲ ಮಾಡಬಹುದು. ಝುಹರ್ ಮತ್ತು ಅಸರ್ ನಮಾಝ್‌ನಲ್ಲಿ ಸೌಕರ್ಯವಿರುವ ಪ್ರಕಾರ ಯಾವುದಾದರೂ ಒಂದು ನಮಾಝಿನ ಹೊತ್ತಲ್ಲಿಯೂ, ಮಗ್ರಿಬ್ ಮತ್ತು ಇಶಾ ನಮಾಝನ್ನು ಯಾವುದಾದರೂ ಒಂದು ನಮಾಝಿನ ಹೊತ್ತಲ್ಲೂ ಒಂದೇ ಸಲ ಮಾಡಬಹುದು. ಇದನ್ನು جَمْع (ಜಮ್ಅ್) ಎನ್ನುವುದು. ಸುಬ್‌ಹಿ (ಫಜ್ರ್) ನಮಾಝನ್ನು ಬೇರೊಂದರ ಜೊತೆಗೆ ಮಾಡುವುದಕ್ಕಾಗುವುದಿಲ್ಲ. ರೋಗದಿಂದ ಸಂಕಷ್ಟಪಡುವವರಿಗೂ ಈ ರೀತಿ ಎರಡು ಹೊತ್ತಿನ ನಮಾಝ್‌ಗಳನ್ನು ಒಂದೇ ಸಲ ಮಾಡಬಹುದು.

ಈ ರೀತಿ ನಾಲ್ಕು ರಕಅತ್ ಇರುವ ನಮಾಝನ್ನು ಎರಡು ರಕಅತಾಗಿ ಸಂಕ್ಷೇಪಿಸಿ ನಮಾಝ್ ಮಾಡಬಹುದಾಗಿದೆ. ಇದನ್ನು قصر (ಸಂಕ್ಷೇಪಿಸುವುದು) ಎನ್ನುವುದು. ಝುಹರ್ ಮತ್ತು ಅಸರ್‌ಗಳನ್ನು ಒಟ್ಟು ಸೇರಿಸಿ ನಮಾಝ್ ಮಾಡುವಾಗ ಅದನ್ನು ಸಂಕ್ಷೇಪಿಸಿ ತಲಾ ಎರಡು ರಕಅತ್‌ನಂತೆ ನಮಾಝ್ ಮಾಡಿದರೂ ಸಾಕು. ಮಗ್ರಿಬ್ ನಮಾಝನ್ನು ಸಂಕ್ಷೇಪಿಸುವಂತಿಲ್ಲ. ಇಶಾ ಎರಡು ರಕಅತ್ತಾಗಿ ಸಂಕ್ಷೇಪಿಸಬಹುದು.

ಕೆಲವೊಮ್ಮೆ ಚಲಿಸುವ ಬಸ್ಸು ರೈಲುಗಳಲ್ಲಿ ನಮಾಝ್ ಮಾಡಬೇಕಾಗಿ ಬರುತ್ತದೆ. ಸೌಕರ್ಯ ತುಂಬ ಕಡಿಮೆ ಇರುತ್ತದೆ. ಇರುವ ಸೌಲಭ್ಯವನ್ನು ಉಪಯೋಗಿಸಿ ಸಾಧ್ಯವಾಗುವಂಥ ರೂಪದಲ್ಲಿ ನಮಾಝ್ ಮಾಡಬೇಕು. ಕಿಬ್ಲಾಕ್ಕೆದುರಾಗಿ ನಮಾಝ್ ಮಾಡುವುದು ಸಾಧ್ಯವಿಲ್ಲದಿದ್ದರೂ ತೊಂದರೆಯಿಲ್ಲ. ವಾಹನ ಓಡುವ ಕಡೆಗೆ ನಮಾಝ್ ಮಾಡಿದರಾಯಿತು. ನೀಡಿರುವ ವಿನಾಯಿತಿಗಳನ್ನು ಉಪಯೋಗಿಸಿ ಸಾಧ್ಯವಿರುವ ರೀತಿ ನಮಾಝ್ ಮಾಡುವುದು ನಮಾಝ್ ಮಾಡದೆ ಉಳಿಯುವುದಕ್ಕಿಂತ ಉತ್ತಮವಾಗಿದೆ.

ನಾವು ಏನು ಕಲಿತೆವು?

1) ಪ್ರಯಾಣಿಕರಿಗೂ ರೋಗಿಗಳಿಗೂ ನಮಾಝನ್ನು ಜಮ್‌ಅ್ ಮಾಡಬಹುದು.

2) ಪ್ರಯಾಣಿಕರು ನಾಲ್ಕು ರಕಅತಿರುವ ನಮಾಝನ್ನು ಎರಡು ರಕಅತಿಗೆ ಸಂಕ್ಷೇಪಿಸಿ ನೆರವೇರಿಸಬಹುದು.

3) ಪ್ರಯಾಣದಲ್ಲಿ ಬಾಕಿ ಉಳಿಯದಿರುವ ರೀತಿಯಲ್ಲಿ ನಮಾಝನ್ನು ಮಾಡಬೇಕು.

ಅಭ್ಯಾಸ:

1) ಜಮ್‌ಅ್ ಎಂದರೇನು? ಯಾವೆಲ್ಲ ನಮಾಝ್‌ಗಳನ್ನು ಜಮ್‌ಅ್ ಮಾಡಲು ಅನುಮತಿಸಲಾಗಿದೆ?

2) ಕಸ್ರ್ ಎಂದರೇನು? ಕಸ್‌ರ್ ಮಾಡಬಹುದಾದ ನಮಾಝ್ ಮತ್ತು ಅವುಗಳ ರಕಅತ್‌ನ ಸಂಖ್ಯೆ ಬರೆಯಿರಿ.

3) ಯಾರಿಗೆಲ್ಲ ಜಮ್‌ಅ್ ಮತ್ತು ಕಸ್ರ್ ನಮಾಝ್ ಮಾಡುವುದು ಅನುವದನೀಯವಾಗಿದೆ?

4) ಜಮ್‌ಅ್ - ಕಸ್ರ್ ಅನುಮತಿಸಿರುವುದರ ಉದ್ದೇಶವೇನು?

***

ಪಾಠ: 17

ವಿಶೇಷ ಸಂದರ್ಭಗಳಲ್ಲಿ ಸುಜೂದ್

1. ಕುರ್‌ಆನ್ ಪಾರಾಯಣದ ಸುಜೂದ್ سُجُودُ التِّلَاوَة :

ಕುರೈಶರು ಪ್ರವಾದಿವರ್ಯರ(ಸ) ಮತ್ತು ಮುಸ್ಲಿಮರ ಮೇಲೆ ಹಿಂಸೆ ದೌರ್ಜನ್ಯಗಳನ್ನೆಸಗುತ್ತಿದ್ದ ಕಾಲವದು. ಪ್ರವಾದಿವರ್ಯರು(ಸ) ಕಅಬಾದ ಬದಿಯಲ್ಲಿ ನಿಂತು ಸೂರಃ ಅನ್ನಜ್ಮ್ ಓದುತ್ತಿದ್ದಾರೆ. ಕೆಲವು ಅನುಯಾಯಿಗಳು ಅವರ ಹತ್ತಿರದಲ್ಲಿ ಕುಳಿತು ಅದನ್ನು ಗಮನವಿಟ್ಟು ಕೇಳುತ್ತಿದ್ದರು. ಇದು ಕಅಬಾದ ಪರಿಸರದಲ್ಲಿದ್ದ ಕುರೈಶಿಗಳ ಗಮನಕ್ಕೆ ಬಂತು. ಅವರು ಒಬ್ಬೊಬ್ಬರಂತೆ ಹತ್ತಿರ ಸೇರಿದರು. ಮೌನವಾಗಿ ಪ್ರವಾದಿವರ್ಯರಿಂದ(ಸ) ಕುರ್‌ಆನ್ ಕೇಳತೊಡಗಿದರು. ಪರಿಸರವನ್ನು ಮರೆತು ಅದರಲ್ಲಿ ತಲ್ಲೀನರಾದರು. ಪ್ರವಾದಿವರ್ಯರು(ಸ) فَاسْجُدُوا لِلَّهِ وَاعْبُدُوا ಫಸ್ಜುದೂಲಿಲ್ಲಾಹಿ ವಅ್‌ಬುದೂಹು ಎಂಬ ಕೊನೆಯ ಸೂಕ್ತ ಓದಿದ ತಕ್ಷಣ ಸುಜೂದ್(ಸಾಷ್ಟಾಂಗ) ಮಾಡಿದರು. ಪ್ರವಾದಿಯವರ(ಸ) ಜೊತೆ ಮುಸ್ಲಿಮರು ಸುಜೂದ್ ಮಾಡಿದರು. ಪ್ರವಾದಿವರ್ಯರ(ಸ) ಕುರ್‌ಆನ್ ಪಾರಾಯಣದಲ್ಲಿ ತಲ್ಲೀನರಾಗಿದ್ದ ಕುರೈಶಿಗಳು ಪರಿವೆಯಿಲ್ಲದೆ ತಾವೂ ಸುಜೂದ್ ಮಾಡಿದರು.

ಕುರ್‌ಆನಿನಲ್ಲಿ ಸುಜೂದ್ (ಸಾಷ್ಟಾಂಗ) ಕುರಿತು ಹೇಳುವ ನಿರ್ದಿಷ್ಟ ವಾಕ್ಯಗಳಿವೆ. ಅದನ್ನು ಓದುವುದನ್ನು ಕೇಳಿಸುವಾಗ ಸುಜೂದ್ ಮಾಡುವುದು ಸುನ್ನತ್ತಾಗಿದೆ. ತಕ್‌ಬೀರ್ ಹೇಳಿ ಒಂದು ಸುಜೂದ್ ಮಾಡುವುದು ಮತ್ತು ಅಲ್ಲಿಂದ ತಕ್‌ಬೀರ್ ಹೇಳಿಯೇ ಏಳಬೇಕು. ಇದನ್ನು سُجُودُ التِّلَاوَة ಸುಜೂದುತ್ತಿಲಾವತ್ (ಕುರ್‌ಆನ್ ಪಾರಾಯಣದ ಸುಜೂದ್) ಎನ್ನುವುದು. ಇದಕ್ಕೆ ಸಲಾಮ್

ಹೇಳಬೇಕಾಗಿಲ್ಲ. ವುಝೂ ಇರಬೇಕು. ಕಿಬ್ಲಾಕ್ಕೆ ಎದುರಾಗಿರಬೇಕು. ಈ ಸುಜೂದ್‌ನಲ್ಲಿ

سَجَدَ وَجْهِىْ لِلَّذِى خَلَقَهُ وَصَوَّرَهُ وَشَقَّ سَمْعَهُ وَبَصَرَهُ بِحَوْلِهِ وَقُوَّتِهِ فَتَبَارَكَ اللّٰهُ اَحْسَنُ الْخَالِقِينَ

(ಅಪಾರವಾದ ಸಾಮರ್ಥ್ಯದಿಂದ ಸೃಷ್ಟಿಸಿದವನು ಕಣ್ಣು ಕಿವಿ ನೀಡಿದವನು ಆದ ಪ್ರಭುವಿನ ಮುಂದೆ ನನ್ನ ಮುಖವನ್ನು ಬಗ್ಗಿಸುವೆನು. ಉತ್ತಮ ಸೃಷ್ಟಿಕರ್ತನಾದ ಅಲ್ಲಾಹನು ಅನುಗ್ರಹ ಪೂರ್ಣನಾಗಿದ್ದಾನೆ) ಎಂದು ಹೇಳುವುದು ಉತ್ತಮವಾದುದು.

ಜಮಾಅತ್ತಾಗಿ ನಮಾಝ್ ಮಾಡುವಾಗ ಇಮಾಮ್ ತಿಲಾವತ್‌ನ ಸುಜೂದ್ ಮಾಡಿದರೆ ಮಅ್‌ಮೂಮ್ ಸಹ ಜೊತೆಯಲ್ಲಿ ಸುಜೂದ್ ಮಾಡಬೇಕು. ಇಮಾಮ್ ಮಾಡದಿದ್ದರೆ ಮಅ್‌ಮೂಮ್ ತಾನೇ ಸುಜೂದ್ ಮಾಡಬಾರದು. ಕುರ್‌ಆನಿನಲ್ಲಿ 15 ಕಡೆಗಳಲ್ಲಿ ಹೀಗೆ ಸುಜೂದ್ ಮಾಡಬೇಕಾಗಿರುವ ಸಂದರ್ಭಗಳಿವೆ. ಅದರ ಸೂಚಕ ಚಿಹ್ನೆಗಳನ್ನು ಅದರಲ್ಲಿ ಕೊಡಲಾಗಿದೆ.

2. ಮರೆವಿನ ಸುಜೂದ್ سُجُودُ السَّهُو :

ಅದು ಮದೀನಾದ ಮಸೀದಿಯಾಗಿತ್ತು. ಅದರಲ್ಲಿ ಮುಸ್ಲಿಮರು ತುಂಬಿದ್ದರು. ಒಂದು ಜಮಾಅತ್ ನಮಾಝ್ ಮುಗಿದಿತ್ತು. ನಾಲ್ಕು ರಕಅತಿನ ನಮಾಝ್ ಅದಾಗಿದ್ದರೂ ಎರಡು ರಕಅತ್ ಮಾತ್ರ ಮಾಡಿ ಪ್ರವಾದಿಯವರು(ಸ) ಎದ್ದಿದ್ದಾರೆ. ಅವರು ಕೂಡಲೇ ಎದ್ದು ಹೋದರು. ಮಸೀದಿಯ ಮುಂಭಾಗದಲ್ಲಿ ಚಿಂತೆಯಿಂದ ನಿಂತಿದ್ದಾರೆ. ವ್ಯಾಪಾರಿಗಳು ಮತ್ತು ತುರ್ತಿದ್ದವರೆಲ್ಲ ಎದ್ದು ಹೋದರು. "ನಮಾಝ್ ಸಂಕ್ಷೇಪಿಸಲ್ಪಟ್ಟಿದೆಯೆ" ಸಹಾಬಿಗಳು ತಮ್ಮೊಳಗೇ ಕೇಳುತ್ತಿದ್ದಾರೆ. 'ವಹ್ಯ್‌ನ ಮುಖಾಂತರ ಕಡಿತಗೊಂಡಿರಬಹುದು' ಕೆಲವರು ಹೇಳಿದರು. ಮರೆತಿರಬಹುದೇ ಎಂದು ಕೆಲವರಿಗೆ ಸಂಶಯವಾಯಿತು. ಈ ಬಗ್ಗೆ ಪ್ರವಾದಿವರ್ಯರಲ್ಲೇ(ಸ) ಕೇಳುವುದಕ್ಕೆ ಎಲ್ಲರಿಗೂ ಹಿಂಜರಿಕೆಯಿತ್ತು. ಕೊನೆಗೆ ಅವರ ಕೂಟದಿಂದ ಒಬ್ಬರು ಪ್ರವಾದಿವರ್ಯರ(ಸ) ಬಳಿಗೆ ತಲುಪಿ ವಿನಯದಿಂದ ವಿಚಾರಿಸಿದರು. 'ಅಲ್ಲಾಹನ ಪ್ರವಾದಿವರ್ಯರೇ! ನಮಾಝ್ ಅಲ್ಲಾಹನ ಆದೇಶದಂತೆ ಕಡಿತಗೊಂಡಿತೇ. ಅಲ್ಲ ತಮಗೆ ಮರೆತಿತ್ತೇ?'

"ಎರಡೂ ನಡೆದಿಲ್ಲ" ಎಂದು ಪ್ರವಾದಿವರ್ಯರು(ಸ) ಪ್ರತಿಕ್ರಿಯಿಸಿದರು. "ತಾವು ಎರಡು ರಕಅತ್ ನಮಾಝ್ ಮಾತ್ರ ಮಾಡಿದ್ದೀರಿ" ಎಂದು ಅವರು ಎಚ್ಚರಿಸಿದರು. ಪ್ರವಾದಿವರ್ಯರು(ಸ) ಮಸೀದಿಗೆ ಹಿಂದಿರುಗಿದರು. ಅಲ್ಲಿ ಉಳಿದಿದ್ದ ಸಹಾಬಿಗಳೊಂದಿಗೆ ಕೇಳಿದರು. ಅವರು ಒಂದೇ ಸ್ವರದಲ್ಲಿ "ಎರಡು ರಕಅತ್ ಮಾತ್ರ ನಮಾಝ್ ಮಾಡಿದ್ದು" ಎಂದು ಹೇಳಿದರು. ಕೂಡಲೇ ಪ್ರವಾದಿವರ್ಯರು(ಸ) ಇಮಾಮ್ ಆಗಿ ಮತ್ತೆ ಎರಡು ರಕಅತ್ ನಮಾಝ್ ಮಾಡಿದರು. ಸಲಾಮ್ ಹೇಳುವ ಮುಂಚೆ ಎರಡು ಸುಜೂದ್ ಮಾಡಿದರು.

ನಾವು ಏನು ಕಲಿತೆವು?

ನಮಾಝಿನಲ್ಲಿ ಒಂದನೇ ಅತ್ತಹಿಯ್ಯಾತಿನಲ್ಲಿ ಕುಳಿತುಕೊಳ್ಳುವಂಥ ಯಾವುದಾದರೊಂದು ರೀತಿ ಮರೆವಿನಿಂದ ಬಿಟ್ಟು ಹೋದರೆ ಅಥವಾ ಹೆಚ್ಚಾದರೆ ಅದಕ್ಕೆ ಪ್ರಾಯಶ್ಚಿತ್ತವಾಗಿ ಎರಡು ಸುಜೂದ್ ಹೇಳುವುದು ಸುನ್ನತ್ತಾಗಿದೆ. ಇದಕ್ಕೆ سُجُودُ السَّهْوِ (ಮರೆವಿನ ಸುಜೂದ್) ಎನ್ನುವುದು. ತಶಹ್ಹುದ್ ದುಆ ಮುಗಿದು ಸಲಾಮ್ ಹೇಳುವುದಕ್ಕಿಂತ ಮುಂಚಿತವಾಗಿ ಇದನ್ನು ಮಾಡಬೇಕು. ಸಲಾಮ್ ಹೇಳಿದ ನಂತರ ಮರೆತಿದೆ ಎಂಬುದು ಗೊತ್ತಾದರೆ ಮತ್ತೆ ನಮಾಝ್ ಮಾಡಬೇಕಾಗಿಲ್ಲ. ಉಳಿದುದನ್ನು ನಮಾಝ್ ಪೂರ್ತಿ ಮಾಡಿ ಮರೆವಿನ ಸುಜೂದ್ ಮಾಡಿದರಾಯಿತು. ಈ ಸುಜೂದ್‌ನಲ್ಲಿ سُبْحَانَ مَنْ لَا يَنَامُ وَلَا يَسْهُو (ನಿದ್ರೆ, ಮರೆವು ಸಂಭವಿಸದಿರುವವನು ಪರಿಶುದ್ಧನು) ಎಂದು ಹೇಳುವುದು ಉತ್ತಮ.

ಅಭ್ಯಾಸ:

1) ಕುರ್‌ಆನ್ ಗ್ರಂಥದಿಂದ 'ಸುಜೂದುತ್ತಿಲಾವಃ'ದ ಸ್ಥಳಗಳನ್ನು ಪತ್ತೆ ಹಚ್ಚಿರಿ.

2) ತಿಲಾವತ್ ಮತ್ತು ಮರೆವಿನ ಸುಜೂದ್‌ನಲ್ಲಿ ಹೇಳಬೇಕಾದ ಪ್ರಾರ್ಥನೆಗಳನ್ನು ಕಂಠಪಾಠ ಮಾಡಿರಿ.

***

ಪಾಠ: 18

ಕುನೂತ್

القُنُوت

ನಮಾಝಿನ ಕೊನೆಯ ರಕಅತಿನ اِعْتِدَال ನಲ್ಲಿ ಪ್ರತ್ಯೇಕವಾಗಿ ಹೇಳುವ ಒಂದು ಪ್ರಾರ್ಥನೆ القُنُوت (ಕುನೂತ್) ಆಗಿದೆ. ವಿತ್ರ್ ನಮಾಝಿನ ಕೊನೆಯ ರಕಅತಿನಲ್ಲೂ ಕೈ ಎತ್ತಿ ಇದನ್ನು ಹೇಳುವುದು ಉತ್ತಮವಾದುದು. ಮುಸ್ಲಿಮರು ಯಾವುದಾದರೂ ಆಪತ್ತನ್ನು ಎದುರಿಸುವಾಗ ಎಲ್ಲ ನಮಾಝ್‌ಗಳಲ್ಲೂ ಕುನೂತನ್ನು ಓದಬಹುದಾಗಿದೆ. ಕುನೂತಿನ ವಾಕ್ಯಗಳನ್ನು ಕೆಳಗೆ ಕೊಡಲಾಗಿದೆ. ಕುನೂತಿನಲ್ಲಿ ಬೇರೆ ಪ್ರಾರ್ಥನೆಗಳನ್ನೂ ಹೇಳಬಹುದಾಗಿದೆ.

اَللّٰهُمَّ اهْدِنِى فِى مَنْ هَدَيْتَ، وَعَافِنِى فِى مَنْ عَافَيْتَ، وَ تَوَلَّنِى فِى مَنْ تَوَلَّيْتَ، وَبَارِكْ لِى فِى مَآ اَعْطَيْتَ، وَقِنِى شَرَّ مَا قَضَيْتَ، فَاِنَّكَ تَقْضِى وَلَا يُقْضىٰ عَلَيْكَ،وَاِنَّهُ لَا يَذِلُّ مَنْ وَّالَيْتَ، وَلَا يَعِزُّ مَنْ عَادَيْتَ تَبَارَكْتَ وَتَعَالَيْت وَصَلِّى عَلَى النَّبِى مُحَمَّدٍ

ಅರ್ಥ: ಅಲ್ಲಾಹನೇ, ನೀನು ಸನ್ಮಾರ್ಗದಲ್ಲಿ ಸೇರಿಸಿದವರೊಂದಿಗೆ ನನ್ನನ್ನು ಸನ್ಮಾರ್ಗದಲ್ಲಿ ಸೇರಿಸು. ನೀನು ನೆಮ್ಮದಿ ನೀಡಿದವರೊಂದಿಗೆ ನನಗೂ ನೆಮ್ಮದಿ ನೀಡು, ನೀನು ರಕ್ಷಣೆಯ ಹೊಣೆ ವಹಿಸಿಕೊಂಡವರೊಂದಿಗೆ ನನ್ನ ರಕ್ಷಣೆಯ ಹೊಣೆಯನ್ನೂ ವಹಿಸು. ನೀನು ನೀಡಿರುವುದರಲ್ಲಿ ನನಗೆ ಸಮೃದ್ಧಿ ದಯಪಾಲಿಸು. ನೀನು ವಿಧಿಸಿರುವ ವಿನಾಶದಿಂದ ನನ್ನನ್ನು ಕಾಪಾಡು. ನಿಶ್ಚಯವಾಗಿಯೂ ನೀನು ವಿಧಿಸುವವನು. ನಿನಗೆ ಎದುರಾಗಿ ವಿಧಿಸುವವರಿಲ್ಲ.

ನಿಶ್ಚಯವಾಗಿಯೂ ನೀನು ರಕ್ಷಣೆಯ ಭಾರ ವಹಿಸಿಕೊಂಡವನು ನಿಂದ್ಯನಾಗಲಾರ. ನಿನ್ನ ಶತ್ರುತ್ವಕ್ಕೆ ಪಾತ್ರನಾದವರು ಪ್ರತಾಪಿಯಾಗಲಾರ. ನೀನು ಅನುಗ್ರಹ ಪೂರ್ಣನಾಗಿರುವಿ. ಉನ್ನತವಾಗಿರುವವನೂ ಕೂಡಾ ನೀನೇ. ಮುಹಮ್ಮದ್‌ರಿಗೆ(ಸ) ನೀನು ಒಳಿತನ್ನು ನೀಡು.

ನಾವು ಏನು ಕಲಿತೆವು?

1) ವಿತ್ರ್‌ನ ಕೊನೆ ರಕಅತಿನಲ್ಲಿ ಕುನೂತ್ ಓದಬೇಕು.
2) ವಿಪತ್ತಿನ ವೇಳೆ ಎಲ್ಲ ನಮಾಝ್‌ನಲ್ಲೂ ಕುನೂತ್ ಓದಬಹುದು.

ಅಭ್ಯಾಸ:

ಕುನೂತಿನ ವಚನಗಳನ್ನು ಅರ್ಥ ಸಹಿತ ಕಂಠಪಾಠ ಮಾಡಿರಿ.

❋❋❋

ಪಾಠ: 19

ಆಹಾರದ ಶಿಷ್ಟಾಚಾರಗಳು

آدَابُ الطَّعَام

ಒಮ್ಮೆ ಕೆಲವು ಸಹಾಬಿಗಳು ಪ್ರವಾದಿವರ್ಯರ(ಸ) ಬಳಿ ಬಂದು ಹೀಗೆ ಹೇಳಿದರು,

"ಅಲ್ಲಾಹನ ಸಂದೇಶವಾಹಕರೇ, ನಮಗೆ ಆಹಾರ ಸೇವಿಸಿಯೂ ತೃಪ್ತಿಯಾಗುವುದಿಲ್ಲ." ಪ್ರವಾದಿವರ್ಯರು(ಸ) ಕೇಳಿದರು, 'ನೀವು ಒಬ್ಬೊಬ್ಬರೂ ಬೇರೆ ಬೇರೆಯಾಗಿ ಕುಳಿತು ಆಹಾರ ಸೇವಿಸುತ್ತೀರಾ?' ಅವರು ಹೇಳಿದರು, "ಹೌದು" ಆಗ ಪ್ರವಾದಿವರ್ಯರು(ಸ) ಹೀಗೆ ಉಪದೇಶಿದರು.

فَاجْتَمِعُوا عَلَى طَعَامِكُمْ وَاذْكُرُوا اسْمَ اللّٰهُ يُبَارِكْ لَكُمْ

ಅರ್ಥ: ನೀವು ಜೊತೆಗೂಡಿ ಆಹಾರ ಸೇವಿಸಿರಿ. ಅಲ್ಲಾಹನ ಹೆಸರನ್ನು ಜ್ಞಾಪಿಸಿರಿ. ಆಗ ಅವನು ನಿಮಗೆ ಸಮೃದ್ಧಿ ನೀಡುವನು.

ಒಂದು ಮನೆಯಲ್ಲಿ ಎಲ್ಲರೂ ಜೊತೆಗೂಡಿ ಆಹಾರ ಸೇವಿಸಬೇಕು. ಹಾಗೆ ಆಹಾರ ಸೇವಿಸಿದರೆ ತೃಪ್ತಿ, ಮನೋಲ್ಲಾಸ ಸಂತೋಷಗಳು ಉಂಟಾಗುವುದಕ್ಕೆ ಇದು ಕಾರಣವಾಗುವುದು. ಮಾತ್ರವಲ್ಲ, ಕುಟುಂಬ ಸದಸ್ಯರ ಮಧ್ಯೆ ಆಪ್ತತೆ ಪ್ರೀತಿ ಉಂಟಾಗುವುದಕ್ಕೆ ಇದು ಸಹಾಯಕ. ಒಮ್ಮೆ ಪ್ರವಾದಿವರ್ಯರು(ಸ) ಕುಟುಂಬ ಸದಸ್ಯರ ಜೊತೆಯಲ್ಲಿ ಕೂತು ಆಹಾರ ಸೇವಿಸುತ್ತಿದ್ದರು. ಆಗ ಜೊತೆಗಿದ್ದ ಉಮರ್ ಬಿನ್ ಅಬೀ ಸಲಮ ಎಂಬ ಮಗುವಿನೊಂದಿಗೆ ಪ್ರವಾದಿಯವರು(ಸ) ಹೇಳಿದರು,

(ಮಗೂ, ಬಿಸ್ಮಿ ಹೇಳು. ಬಲಗೈಯಿಂದ ತಿನ್ನು. ನಿನಗೆ ಸಮೀಪದಲ್ಲಿರುವ ಭಾಗದಿಂದ ತಿನ್ನು)

ಇಲ್ಲಿ ಮೂರು ವಿಷಯಗಳನ್ನು ಪ್ರವಾದಿವರ್ಯರು(ಸ) ಕಲಿಸಿದ್ದಾರೆ.

1. ಆಹಾರ ಸೇವಿಸಲು ಆರಂಭಿಸುವಾಗ بِسْمِ اللّٰهِ الرَّحْمٰنِ الرَّحِيم ಎಂದು ಹೇಳುವುದು.

2. ಬಲಗೈಯಿಂದ ಆಹಾರ ಸೇವಿಸುವುದು.

3. ಪಾತ್ರೆಯಲ್ಲಿ ತನಗೆ ಹತ್ತಿರದ ಭಾಗದಿಂದ ಆಹಾರ ಸೇವಿಸಲು ಆರಂಭಿಸುವುದು.

ಆಹಾರ ಸೇವಿಸುವುದಕ್ಕಿಂತ ಮುಂಚೆ ಕೈ ಬಾಯಿ ತೊಳೆದು ಸ್ವಚ್ಛಗೊಳಿಸಬೇಕು. ಕೈತೊಳೆಯದೆ ಆಹಾರ ಸೇವಿಸಿದರೆ ಕೊಳೆ ಶರೀರದೊಳಗೆ ಸೇರಿ ಹಲವು ವಿಧದ ರೋಗಗಳು ಉಂಟಾಗುವುದು. ಆಹಾರ ಸೇವಿಸಿದ ಮೇಲೆ ಕೆಳಗೆ ಕೊಟ್ಟ ಪ್ರಾರ್ಥನೆ ಹೇಳುವುದು ಪುಣ್ಯದಾಯಕವಾಗಿದೆ.

اَلْحَمْدُ لِلّٰهِ الَّذِى أَطْعَمَنِى هٰذَا وَرَزَقَنِيهِ مِنْ غَيْرِ حَوْلٍ مِنِّى وَلَاقُوَّةٍ

(ನನಗೆ ಆಹಾರವನ್ನು ಕೊಟ್ಟು, ನನ್ನ ಸಾಮರ್ಥ್ಯ ಗಳಿಕೆಯಿಲ್ಲದೆ ಉಪಜೀವನ ನೀಡಿದ ಅಲ್ಲಾಹನಿಗೆ ಸ್ತುತಿ)

ಆಹಾರ ಸೇವಿಸುವುದಕ್ಕೆ ಕೂತರೆ ಶಿಸ್ತು ಶಿಷ್ಟಾಚಾರಗಳನ್ನು ಪಾಲಿಸಬೇಕು. ಆಹಾರವನ್ನು ದೂಷಿಸುವುದನ್ನು ಪ್ರವಾದಿವರ್ಯರು(ಸ) ವಿರೋಧಿಸಿದ್ದಾರೆ. ಪ್ರವಾದಿಯವರು(ಸ) ಎಂದೂ ಆಹಾರವನ್ನು ದೂಷಿಸುತ್ತಿರಲಿಲ್ಲ. ಇಷ್ಟವಾದರೆ ಸೇವಿಸುತ್ತಿದ್ದರು, ಇಲ್ಲವಾದರೆ ಬಿಡುತ್ತಿದ್ದರು. ಆಹಾರ ಅಲ್ಲಾಹನ ಅನುಗ್ರಹವಾಗಿದೆ. ಕ್ಷುಲ್ಲಕ ಕಾರಣಗಳ ಹೆಸರಲ್ಲಿ ಅದನ್ನು ಟೀಕಿಸುವವರು ಅಲ್ಲಾಹನ ಅನುಗ್ರಹವನ್ನು ಸಣ್ಣದಾಗಿ ನೋಡುತ್ತಾರೆ.

ಆಹಾರ ಸೇವಿಸುವುದು ಮಿತವಾಗಿರಬೇಕು. ಆಹಾರವನ್ನು ಹೆಚ್ಚು ಸೇವಿಸುವುದು ಆರೋಗ್ಯಕ್ಕೆ ಹಾನಿಕರವಾದುದು.

كُلُوا وَاشْرَبُوا وَلَا تُسْرِفُوا (ನೀವು ತಿನ್ನಿರಿ, ಕುಡಿಯಿರಿ. ಅದರಲ್ಲಿ ಮಿತಿ ಮೀರದಿರಿ) ಎಂಬುದನ್ನು ಕುರ್‌ಆನಿನಲ್ಲಿ ಕಾಣಬಹುದು.

ಆಹಾರ ಪಾನೀಯಗಳನ್ನು ಕುಳಿತು ಸೇವಿಸಬೇಕು. ಅನಿವಾರ್ಯ ಪರಿಸ್ಥಿತಿಯಲ್ಲಿ ನಿಂತೂ ಆಗಬಹುದು. ರೋಗ ಇತರ ಕಾರಣವಿಲ್ಲದೆ ಮಲಗಿ ಒರಗಿ ಆಹಾರವನ್ನು ಸೇವಿಸಬಾರದು. ಆಹಾರದ ಸಮಯದಲ್ಲಿ ಇತರರಿಗೆ ಬೇಸರ ತಲಪಿಸುವ ಮಾತು ಪ್ರವೃತ್ತಿಗಳನ್ನು ತೊರೆಯಬೇಕು. ಅದೇ ರೀತಿ ಅಟ್ಟಹಾಸದಿಂದ ನಗುವುದೋ

ದುಃಖಿಸುವುದೋ ಮಾಡಬಲ್ಲಂಥ ಮಾತುಕತೆಯನ್ನು ತೊರೆಯಬೇಕು. ಪಾತ್ರೆಗೆ ಊದುವುದು ಅನುವದನೀಯವಲ್ಲ. ಆಹಾರದ ಆರಂಭದಲ್ಲಿ ಅಥವಾ ಕೊನೆಯಲ್ಲಿ ನೀರು ಕುಡಿಯಬೇಕು. ಕೈಯ ಸ್ವಲ್ಪ ಭಾಗ ಮಾತ್ರ ತಿನ್ನುವಾಗ ಉಪಯೋಗಿಸಬೇಕು.

ಆಹಾರ ವಸ್ತುಗಳ ದುರ್ವ್ಯಯ ಮಾಡುವಂತಿಲ್ಲ. ಆಹಾರ ವಸ್ತುಗಳನ್ನು ಅಳತೆ ಮಾಡಿ ಅಡಿಗೆ ಮಾಡುವುದು ಉತ್ತಮ. ಪ್ರವಾದಿವರ್ಯರು(ಸ) ಹೀಗೆ ಹೇಳಿದ್ದಾರೆ. كِيلُوا طَعَامَكُمْ يُبَارِكْ لَكُمْ فِيهِ (ನೀವು ಆಹಾರ ಪದಾರ್ಥಗಳನ್ನು ಅಳತೆ ಮಾಡಿ ಪಡೆಯಿರಿ. ಹಾಗಾದರೆ ಅದರಲ್ಲಿ ನಿಮಗೆ ಸಮೃದ್ಧಿಯುಂಟಾಗುವುದು)

ಆಹಾರ ಸೇವಿಸುವಾಗ ಆಹಾರ ವಸ್ತುಗಳು ನೆಲಕ್ಕೆ ಬೀಳದಂತೆ ಎಚ್ಚರ ವಹಿಸಬೇಕು. ಏನಾದರೂ ನೆಲಕ್ಕೆ ಬಿದ್ದಿತು ಎಂದಾದರೆ ಅದನ್ನು ಹೆಕ್ಕಿ ಕೊಳೆ ತೆಗೆದು ತಿನ್ನಬೇಕು ಎಂದು ಪ್ರವಾದಿವರ್ಯರು(ಸ) ಹೇಳಿದ್ದಾರೆ.

ನಾವು ಏನು ಕಲಿತೆವು?

1) ಮನೆಯಲ್ಲಿರುವವರು ಜೊತೆಗೂಡಿ ಆಹಾರ ಉಣ್ಣುವುದರಲ್ಲಿ ಸಮೃದ್ಧಿಯಿದೆ.

2) ಆಹಾರ ಸೇವಿಸಲು ಪ್ರಾರಂಭಿಸುವಾಗ ಬಿಸ್ಮಿಲ್ಲಾಹ್ ಹೇಳಬೇಕು.

3) ಬಲಗೈಯಿಂದ ಆಹಾರ ಸೇವಿಸಬೇಕು.

4) ಅಡಿಗೆಗೆ ಆಹಾರ ವಸ್ತುಗಳನ್ನು ಅಳೆದು ತೆಗೆದುಕೊಳ್ಳುವುದು ಉತ್ತಮ.

ಅಭ್ಯಾಸ:

1) ಆಹಾರ ಸೇವಿಸಿದ ನಂತರ ಇರುವ ಪ್ರಾರ್ಥನೆಯನ್ನು ಹೇಳಿರಿ?

2) ಆಹಾರ ಸೇವಿಸುವಾಗ ಗಮನಿಸಬೇಕಾದ ವಿಷಯಗಳು ಯಾವುವು?

3) ಉಮರ್ ಬಿನ್ ಅಬೀ ಸಲಮರೊಂದಿಗೆ ಪ್ರವಾದಿವರ್ಯರು(ಸ) ಯಾವುದನ್ನೆಲ್ಲ ಉಪದೇಶಿಸಿರುವರು.

✻✻✻

ಪಾಠ: 20

ಮಾಂಸಾಹಾರ

ಆಡು, ದನ, ಒಂಟೆ ಮುಂತಾದ ಸಾಕು ಪ್ರಾಣಿಗಳನ್ನು ಹಾಗೂ ಕೋಳಿ, ಬಾತುಕೋಳಿ ಮುಂತಾದ ಸಾಕು ಹಕ್ಕಿಗಳ ಮಾಂಸವನ್ನು ಸೇವಿಸುವ ಅನುಮತಿಯನ್ನು ನಮಗೆ ಅಲ್ಲಾಹನು ನೀಡಿರುವನು. ಇಸ್ಲಾಮಿನ ವಿಧಿಯಂತೆ ದಿಬ್ಹ್ (ಕೊಯ್ದಾಗ) ಮಾಡಿದಾಗ ಮಾಂಸ ಹಲಾಲ್(ಧರ್ಮಸಮ್ಮತ) ಆಗುವುದು. ಸಾಕು ಪ್ರಾಣಿಗಳಾಗಿರುವುದರಿಂದ ಅವು ಮಾನವರ ಅಧೀನಕ್ಕೂ ಸೌಕರ್ಯಕ್ಕೂ ಸೇರಿದ್ದಾಗಿದೆ. ಅದನ್ನು ದಿಬ್ಹ್ ಮಾಡುವುದಕ್ಕೆ ಇಸ್ಲಾಮ್ ಕೆಲವು ನಿಯಮ ನಿಬಂಧನೆಗಳನ್ನು ನಿಶ್ಚಯಿಸಿದೆ. ಕೆಳಗೆ ಅದನ್ನು ವಿವರಿಸಲಾಗಿದೆ.

1. ದಿಬ್ಹ್ ಮಾಡುವಾತನು ಬುದ್ಧಿಯಿರುವ ವ್ಯಕ್ತಿಯಾಗಿರಬೇಕು.

2. ಕೊಯ್ಯುವುದು ಸ್ತ್ರೀಯೋ, ಪುರುಷನೋ, ವಿವೇಕಮತಿಯಾದ ಮಕ್ಕಳೋ ಆಗಬಹುದು. ಮುಸ್ಲಿಮರಂತೆ ಗ್ರಂಥದವರೂ ದಿಬ್ಹ್ ಮಾಡಿರುವುದನ್ನು ಸೇವಿಸುವುದಕ್ಕೂ ಅನುಮತಿಯಿದೆ. ಆದರೆ ಅವಿಶ್ವಾಸಿಗಳು, ವಿಗ್ರಹಾರಾಧಕರು, ಮುರ್ತದ್ದ್‌ಗಳು, (ಧರ್ಮತ್ಯಾಗಿಗಳು- ಇಸ್ಲಾಮ್ ಸ್ವೀಕರಿಸಿ ನಂತರ ಕೈಬಿಟ್ಟವರು) ಅಗ್ನಿಯನ್ನು ಆರಾಧಿಸುವವರು ದಿಬ್ಹ್ ಮಾಡಿರುವುದನ್ನು ಸೇವಿಸುವುದು ನಿಷಿದ್ಧ.

2. ಕೊಯ್ಯಲು ಬಳಸುವ ಆಯುಧ ಹರಿತವಾಗಿರಬೇಕು.

3. ಇಡೀ ಶರೀರದ ಸಂಪೂರ್ಣ ರಕ್ತ ಹರಿದು ಹೋಗುವುದಕ್ಕೂ ಬೇಗ ಪ್ರಾಣ ಹೋಗುವುದಕ್ಕೂ ಕೊರಳಿನ ರಕ್ತನಾಳ, ಶ್ವಾಸನಾಳವನ್ನು ಕೊಯ್ಯಬೇಕು.

4. ಕೊಯ್ಯುವಾಗ بِسْمِ اللّٰهِ الرَّحْمٰنِ الرَّحِيم ಬಿಸ್ಮಿಲ್ಲಾಹಿರ್‍ರಹ್ಮಾನಿರ್‍ರಹೀಮ್ ಎಂದು ಹೇಳಿರಿ.

ಅಲ್ಲಾಹನ ಹೆಸರು ಉಚ್ಚರಿಸದೆ ಕೊಯ್ಯುವುದು, ತಿನ್ನುವುದು ನಿಷಿದ್ಧವಾಗಿದೆ. ಅಲ್ಲಾಹನ ಹೊರತು ಇತರರ ಹೆಸರಿಂದ ಕೊಯ್ಯುವುದು, ತಿನ್ನುವುದು ನಿಷಿದ್ಧವಾಗಿದೆ. ಕೊಯ್ಯುವಾಗ ಅಲ್ಲಾಹನ ಹೆಸರು ಉಚ್ಚರಿಸಲಾಗಿದೆಯೇ ಇಲ್ಲವೇ ಎಂದು

ಶಂಕಿಸಲ್ಪಡುವವುಗಳನ್ನು ಬಿಸ್ಮಿ ಹೇಳಿ ತಿಂದರೆ ಸಾಕು. ಕೊಯ್ಯುವ ಜೀವಿಯ ಮುಖವನ್ನು ಕಿಬ್ಲಾದ ಕಡೆಗೆ ತಿರುಗಿಸುವುದು ಉತ್ತಮ. ಕೊಯ್ಯುವ ಪ್ರಕ್ರಿಯೆಯನ್ನು ಶೀಘ್ರ ಮಾಡಿ ಮುಗಿಸಬೇಕು. ಕೊಯ್ದ ನಂತರ ಜೀವ ಸಂಪೂರ್ಣ ಹೋಗುವ ತನಕ ಚರ್ಮ ಸುಲಿಯಬಾರದು. ಅಂಗಾಂಗಗಳನ್ನು ಕೊಯ್ಯಬಾರದು.

ಬೇಟೆ:

ಮನುಷ್ಯನಿಗೆ ನಿಯಂತ್ರಿಸಲಾಗದ ಧಾರಾಳ ಮೃಗ ಪಕ್ಷಿಗಳು ಭೂಮಿಯಲ್ಲಿವೆ. ಅದರಲ್ಲಿ ಕೋರೆಹಲ್ಲಿಲ್ಲದ ಮೃಗಗಳನ್ನು ಉಗುರು ಉಪಯೋಗಿಸಿ ಬಲಿ ಹಿಡಿಯದ ಪಕ್ಷಿಗಳನ್ನು ತಿನ್ನಬಹುದು. ಆಯುಧಗಳನ್ನು ಉಪಯೋಗಿಸಿಯೋ, ವಿಶೇಷ ತರಬೇತಿ ಪಡೆದಿರುವ ಮೃಗಗಳ ಮುಖಾಂತರವೋ ಬೇಟೆಯಾಡಬಹುದು. ಬೇಟೆಯು ಅಗತ್ಯ ಮತ್ತು ಪ್ರಯೋಜನಕ್ಕಾಗಿರಬೇಕು. ಅನಗತ್ಯವಾಗಿ ಯಾವ ಜೀವಿಯನ್ನೂ ಕೊಲ್ಲುವಂತಿಲ್ಲ. ಮೀನು ಮತ್ತು ಮಿಡತೆ ನೀರಿನ ಹೊರತಾಗಿ ಬದುಕಲಾರದ ಎಲ್ಲ ಜೀವಿಗಳನ್ನು ದಿಬ್ಹ ಮಾಡದೆ ತಿನ್ನಬಹುದು. ವಿವಿಧ ಮೀನುಗಳು ಇದರಲ್ಲಿ ಸೇರಿವೆ. ಅದನ್ನು ಹಿಡಿದದ್ದು ಮುಸ್ಲಿಮನೋ ಮುಸ್ಲಿಮೇತರನೋ ಯಾರೇ ಆದರೂ ಅಭ್ಯಂತರವಿಲ್ಲ. ಸಮುದ್ರದ ಕುರಿತು ಪ್ರವಾದಿವರ್ಯರು(ಸ) ಹೀಗೆ ಹೇಳಿದ್ದಾರೆ.

هُوَ الطَّهُورُ مَاؤُهُ وَالْحِلُّ مَيْتَتُه

(ಅದರ ನೀರು ಶುದ್ಧವಾಗಿದೆ. ಅದರಲ್ಲಿ ಸತ್ತಿರುವ ಜೀವಿಗಳು ಹಲಾಲ್ [ಧರ್ಮಸಮ್ಮತ] ಆಗಿವೆ.)

ಸಸ್ಯ ಇತ್ಯಾದಿಗಳನ್ನು ತಿಂದು ಬದುಕುವ ರೆಕ್ಕೆಯಿರುವ ಒಂದು ಚಿಕ್ಕ ಜೀವಿ ಮಿಡತೆ. ಅದನ್ನು ದಿಬ್ಹ ಮಾಡದೆ ತಿನ್ನಬಹುದು.

ನಾವು ಏನು ಕಲಿತೆವು?

1) ಇಸ್ಲಾಮಿನ ವಿಧಿಯಂತೆ ಕೊಯ್ದ (ದಿಬ್ಹ ಮಾಡಿದ) ಮಾಂಸವನ್ನು ಮಾತ್ರ ತಿನ್ನಬಹುದು.

2) ಅನವಶ್ಯಕವಾಗಿ ಯಾವುದೇ ಜೀವಿಯನ್ನು ಕೊಲ್ಲುವಂತಿಲ್ಲ.

ಅಭ್ಯಾಸ:

1) ದಿಬ್ಹ (ಕೊಯ್ಯುವ) ಮಾಡುವ ನಿಯಮಗಳು ಯಾವುವು?

2) ಅನುವದನೀಯವಾದ ಎರಡು ಶವಗಳು ಯಾವುವು?

❋❋❋

ಪಾಠ: 21

ನಿಷಿದ್ಧವಾದ ಜೀವಿಗಳು ಮತ್ತು ವಸ್ತುಗಳು

ಕೆಲವು ವಸ್ತುಗಳು (ಪದಾರ್ಥಗಳು) ಶರೀರಕ್ಕೆ ದೋಷಪೂರಿತ ಅಥವಾ ಮಾನವ ಪ್ರಕೃತಿಗೆ ನಿರಾಕರಿಸುವಂತಹ ರೀತಿಯಲ್ಲಿ ನಿಕೃಷ್ಟವಾಗಿರುವುದು. ಆದ್ದರಿಂದ ಅದನ್ನು ತಿನ್ನುವುದನ್ನು ಇಸ್ಲಾಮ್ ನಿಷೇಧಿಸಿದೆ. ನಿಷಿದ್ಧವಾದ ವಸ್ತುಗಳನ್ನು ಕೆಳಗೆ ಕೊಡಲಾಗಿದೆ.

1. ಶವ: ದಿಬ್ಹ್ ಮಾಡುವುದಕ್ಕೆ ಬೇಟೆಯಾಡುವುದಕ್ಕೆ ಇಸ್ಲಾಮ್ ನಿಗದಿಪಡಿಸಿದ ರೀತಿಯನ್ನು ನಾವು ಕಲಿತೆವಲ್ಲವೇ? ಈ ಎರಡು ರೀತಿಯಲ್ಲಿ ಅಲ್ಲದೆ ಜೀವ ಹೋದ ಎಲ್ಲ ಪಕ್ಷಿ ಮೃಗಾದಿಗಳು ಹೆಣದ ಸಾಲಿಗೆ ಸೇರುವುದು. ಅದರ ಮಾಂಸ ತಿನ್ನುವುದು ನಿಷಿದ್ಧವಾಗಿದೆ.

2. ರಕ್ತ: ಹರಿವ ರಕ್ತ, ಶವದಂತೆಯೇ ನಿಕೃಷ್ಟವಾದುದು ಮತ್ತು ಉಪದ್ರವಕಾರಿ. ಜಾಹಿಲಿಯ್ಯಾ (ಅಜ್ಞಾನ) ಕಾಲದಲ್ಲಿ ಅರಬರಲ್ಲಿ ಮೊನಚಾದ ಆಯುಧಗಳಿಂದ ಗಾಯಮಾಡಿ ಹರಿದ ರಕ್ತವನ್ನು ಕುಡಿಯುತ್ತಿದ್ದರು. ಇಸ್ಲಾಮ್ ಇದನ್ನು ನಿಷೇಧಿಸಿತು.

3. ಹಂದಿ ಮಾಂಸ: ಹಂದಿ ಮಾನವ ಪ್ರಕೃತಿ ಕೊಳಕಿನದ್ದೆಂದು ಪರಿಗಣಿಸಿರುವ ಮತ್ತು ತಿರಸ್ಕರಿಸುವಂಥ ಒಂದು ಮೃಗವಾಗಿದೆ. ಮಾಲಿನ್ಯ ಮತ್ತು ವಿಸರ್ಜನ ವಸ್ತುಗಳು ಅದರ ಆಹಾರವಾಗಿದೆ. ನಿರ್ಲಜ್ಜೆ ಅದರ ಸ್ವಭಾವವಾಗಿದೆ. ಹಂದಿ ಮಾಂಸ ಶರೀರಕ್ಕೆ ದೋಷಕರ ಹಾಗೂ ಅನೇಕಾರು ರೋಗಗಳಿಗೆ ಕಾರಣವಾಗುತ್ತದೆ ಎಂದು ವೈದ್ಯಶಾಸ್ತ್ರ ಹೇಳುತ್ತದೆ. ಹಂದಿಮಾಂಸ ಇಸ್ಲಾಮಿನಲ್ಲಿ ನಿಷಿದ್ಧವಾಗಿದೆ.

4. ಹಿಂಸ್ರ ಜಂತುಗಳು: ಜೀವಿಗಳ ಕೂಟದಲ್ಲಿ ಕೋರೆ ಹಲ್ಲಿನ ಎಲ್ಲ ಕಾಡು ಮೃಗಗಳನ್ನೂ ಉಗುರು ಉಪಯೋಗಿಸಿ ಬಲಿಯನ್ನು ಹಿಡಿಯುವ ಪಕ್ಷಿಗಳನ್ನೂ ತಿನ್ನುವುದನ್ನು ಪ್ರವಾದಿವರ್ಯರು(ಸ) ವಿರೋಧಿಸಿದ್ದಾರೆ.

نَهَى رَسُولُ اللهِ (ص) عَنْ كلِّ ذِى نَابٍ مِنَ السَّبُعِ وَكُلِّ ذِى مِخْلَبٍ مِنَ الطَّيْرِ

ಬೇರೆ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವ ಮಾಂಸ ಭಕ್ಷಕ ಸಿಂಹ, ಹುಲಿ, ತೋಳ ಮುಂತಾದ ಮೃಗಗಳು, ರಣಹದ್ದು, ಗಿಡುಗ ಮುಂತಾದ ಹಕ್ಕಿಗಳು ಈ ಸಾಲಿಗೆ ಸೇರಿವೆ.

5. ಅಲ್ಲಾಹನ ಹೊರತು ಇತರರ ಹೆಸರಲ್ಲಿ ದಿಬ್ಹ್ ಮಾಡಿದವುಗಳು:

ಶವ ಹಂದಿ ಮಾಂಸಗಳಂತೆ ಅಲ್ಲಾಹನಲ್ಲದೆ ಇತರರ ಹೆಸರಲ್ಲಿ ಬಲಿ ನೀಡಿದ್ದನ್ನು ತಿನ್ನುವುದು ನಿಷಿದ್ಧವಾಗಿದೆ. ವಿಗ್ರಹ, ಮೃತ ಮಹಾತ್ಮರ ಹೆಸರಲ್ಲಿ ಹರಕೆ ಒಪ್ಪಿಸಿ ಬಲಿ ನೀಡುವಂಥ ಸಂಪ್ರದಾಯವು ಹಿಂದಿನಂತೆ ಇಂದೂ ಅಸ್ತಿತ್ವದಲ್ಲಿದೆ. ಇದು ಏಕದೇವ ವಿಶ್ವಾಸಕ್ಕೆ ಬದ್ಧ ವಿರೋಧಿಯಾಗಿದ್ದು ಅಲ್ಲಾಹನಿಗೆ ತೋರಿಸುವ ಕೃತಘ್ನತೆಯಾಗಿದೆ. ಅಲ್ಲಾಹನು ಹೇಳುತ್ತಾನೆ,

حُرِّمَتْ عَلَيْكُمُ الْمَيْتَةُ وَالدَّمُ وَلَحْمَ الْخِنْزِيرِ وَمَا أُحِلَّ لِغَيْرِ اللهِ بِهِ

(ನಿಮಗೆ ಇವು ನಿಷಿದ್ಧಗೊಳಿಸಲ್ಪಟ್ಟಿವೆ - ಶವ, ರಕ್ತ, ಹಂದಿಮಾಂಸ, ಅಲ್ಲಾಹನ ಹೊರತು ಇತರರ ಹೆಸರಲ್ಲಿ 'ದಿಬ್ಹ್' ಮಾಡಲ್ಪಟ್ಟ (ಚೂರಿ ಹಾಕಲ್ಪಟ್ಟ) ಪ್ರಾಣಿ.)

6. ಜೀವಂತವಿರುವ ಮೃಗಗಳ ಕೊಯ್ದು ತೆಗೆದ ಮಾಂಸ:

ಜೀವಂತವಿರುವ ಮೃಗಗಳ ಅವಯವಗಳನ್ನು ಕೊಯ್ದು ತೆಗೆದು ತಿನ್ನುವುದು ನಿಷಿದ್ಧವಾಗಿದೆ. ಪ್ರವಾದಿವರ್ಯರು(ಸ) ಹೇಳಿದ್ದಾರೆ.

مَا قُطِعَ مِنَ الْبَهِيمَةِ وَهِىَ حَيَّه فَهُوَ مَيْتَةٌ

(ಜೀವಂತವಿರುವ ಮೃಗಗಳಿಂದ ಕೊಯ್ದು ತೆಗೆದದ್ದು ಶವವಾಗಿದೆ)

ಮೇಲೆ ತಿಳಿಸಿದುದಕ್ಕಿಂತ ಹೊರತಾಗಿ ವಿಸರ್ಜನ, ವಸ್ತುಗಳು ಮಾಲಿನ್ಯಗಳು, ವಿಷ ಪದಾರ್ಥಗಳು ನಿಷಿದ್ಧವಾಗಿವೆ. ಶುದ್ಧವಾಗಿರುವ ವಸ್ತುಗಳಲ್ಲಿ ನಜಸ್ ಆದರೆ ತೊಳೆದು ಸ್ವಚ್ಛಗೊಳಿಸಬೇಕು. ತೊಳೆದು ಶುಚಿಗೊಳಿಸಲು ಸಾಧ್ಯವಿಲ್ಲದ ಚರ್ಮ, ಹಾಲು, ಎಣ್ಣೆಗಳಂಥ ದ್ರಾವಕಗಳಾದರೆ ಸೇವಿಸಬಾರದು. ಕರಗದ ತುಪ್ಪದಲ್ಲಿ ನಜಸ್ ಬಿದ್ದರೆ, ನಜಸ್ ಮತ್ತು ಅದು ಮಲಿನಗೊಳಿಸಿದ ಭಾಗವನ್ನು ತೆಗೆದು ಬಾಕಿ ಭಾಗವನ್ನು ಉಪಯೋಗಿಸಬಹುದು.

ನಾವು ಏನು ಕಲಿತೆವು?

1) ಶವ, ರಕ್ತ, ಹಂದಿಮಾಂಸ, ನಜಸ್ ವಸ್ತುಗಳು ಮುಂತಾದುವುಗಳನ್ನು ಸೇವಿಸುವುದನ್ನು ಇಸ್ಲಾಮ್ ನಿಷೇಧಿಸಿದೆ.

2) ಗಟ್ಟಿ ಆಹಾರ ವಸ್ತುಗಳಿಗೆ ನಜಸ್ ಸೇರಿದ್ದರೆ ಆ ಭಾಗವನ್ನು ತೆಗೆದು ಬಾಕಿಯನ್ನು ಉಪಯೋಗಿಸಬಹುದು.

ಅಭ್ಯಾಸ:

1) ನಿಷಿದ್ಧ ಆಹಾರ ವಸ್ತುಗಳು ಯಾವುವು?

2) ಚಿಕಿತ್ಸೆಗಾಗಿ ಬೇರೆಯವರ ರಕ್ತವನ್ನು ತೆಗೆದುಕೊಳ್ಳುವ ಬಗ್ಗೆ ಇಸ್ಲಾಮ್‌ನ ವಿಧಿಯೇನು?

❋❋❋